ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಸ್ಕಿ ಜಲಾಶಯದಲ್ಲಿ 22 ಅಡಿ ನೀರು: ಉತ್ತರ ಕರ್ನಾಟಕ, ಕರಾವಳಿಯಲ್ಲೂ ಮಳೆ

ಕಲ್ಯಾಣ ಕರ್ನಾಟಕ: ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ರಾಯಚೂರು: ಕಲ್ಯಾಣ ಕರ್ನಾಟಕದ ಕಲಬುರ್ಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಶನಿವಾರ ರಾತ್ರಿ ಮತ್ತು ಭಾನುವಾರ ಉತ್ತಮ ಮಳೆಯಾಗಿದೆ. ತಗ್ಗುಪ್ರದೇಶದಲ್ಲಿ ಮನೆಗಳಿಗೆ ನೀರು ಹರಿದಿದ್ದು, ಜನರು ತೊಂದರೆ ಅನುಭವಿಸಿದರು.

ರಾಯಚೂರು ಜಿಲ್ಲೆಯ ಮಸ್ಕಿ ಪಟ್ಟಣದ ಗಾಂಧಿನಗರದ ನಾಲ್ಕು ವಾರ್ಡ್‌ಗಳು ಜಲಾವೃತವಾಗಿದ್ದದ್ದು, ಪ್ರಕಾಶನಗರದಲ್ಲಿ 10 ಕುರಿಗಳು ಸತ್ತಿವೆ.

ಐವರು ಯುವಕರ ರಕ್ಷಣೆ: ಮಸ್ಕಿ ತಾಲ್ಲೂಕು ಹಾಲಾಪುರ ಹಳ್ಳವು ತುಂಬಿ ಹರಿಯುತ್ತಿದ್ದು, ದೇವದುರ್ಗದಿಂದ ಬೆಂಗಳೂರಿಗೆ ಬೈಕ್‌ಗಳಲ್ಲಿ ಹೊರಟಿದ್ದ ಐವರು ಯುವಕರು ಸಿಲುಕಿಕೊಂಡರು. ಅವರನ್ನು ಸ್ಥಳೀಯರು ರಕ್ಷಿಸಿದರು. ಅವರ ಬೈಕ್‌ಗಳು ಕೊಚ್ಚಿಹೋದವು.

ಮಾನ್ವಿ, ಸಿಂಧನೂರು, ದೇವದುರ್ಗ, ರಾಯಚೂರು, ಸಿರವಾರ ಹಾಗೂ ಲಿಂಗಸುಗೂರು ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಸುರಿದಿದೆ. ಕೆಲ ಗ್ರಾಮಗಳಿಗೆ ಸಂಚಾರ ಸ್ಥಗಿತಗೊಂಡಿದೆ. 29 ಅಡಿ ಸಾಮರ್ಥ್ಯದ ಮಸ್ಕಿ ಜಲಾಶಯಕ್ಕೆ ಒಳಹರಿವು ಹೆಚ್ಚಿದ್ದು, ಭಾನುವಾರ 22 ಅಡಿ ನೀರು ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗೋಗಿ ಹೋಬಳಿ: 112.2 ಮಿ.ಮೀ ಮಳೆ: ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಹೋಬಳಿ ವ್ಯಾಪ್ತಿಯಲ್ಲಿ ದಾಖಲೆಯ 112.2 ಮಿ.ಮೀ ಮಳೆ ದಾಖಲಾಯಿತು. ಸುರಪುರ ತಾಲ್ಲೂಕಿನಲ್ಲಿ ಸತ್ಯಂಪೇಟ, ಕರ್ನಾಳ, ರಂಗಂಪೇಟೆ, ದೇವರಗೋನಾಲ, ಚಿಗರಿಹಾಳಗ್ರಾಮಗಳಲ್ಲಿ ಮನೆಗಳು ಕುಸಿದಿವೆ. ಕಲಬುರ್ಗಿ, ಬೀದರ್ ಹಾಗೂ ಕೊಪ್ಪಳ ಜಿಲ್ಲೆಯ ವಿವಿಧೆಡೆಯೂ ಉತ್ತಮ ಮಳೆಯಾಗಿದೆ. 'ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಿದ್ದು, ಅಫಜಲಪುರ ಹಾಗೂ ಜೇವರ್ಗಿ ತಾಲ್ಲೂಕಿನ ಭೀಮಾ ನದಿ ತೀರದ ಜನರು ಮುನ್ನೆಚ್ಚರಿಕೆ ವಹಿಸಬೇಕು' ಎಂದು ನೀರಾವರಿ ನಿಗಮದ ಅಧಿಕಾರಿಗಳು ಮನವಿ ಮಾಡಿದ್ದಾರೆ.

ವಿವಿಧೆಡೆ ಮಳೆ: (ಹುಬ್ಬಳ್ಳಿ/ಮಂಗಳೂರು ವರದಿ): ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳು ಮತ್ತು ಕರಾವಳಿಯ ಜಿಲ್ಲೆಗಳಲ್ಲೂ ಮಳೆಯಾಗಿದೆ. ಮಹಾರಾಷ್ಟ್ರದಲ್ಲಿ ಉತ್ತಮ ಮಳೆಯಾಗಿದ್ದು ಆಲಮಟ್ಟಿ ಜಲಾಶಯಕ್ಕೆ ಜೂನ್ ತಿಂಗಳಿನಲ್ಲಿ ನಿರೀಕ್ಷೆ ಮೀರಿ ನೀರು ಹರಿದುಬಂದಿದೆ.

ವಿಜಯಪುರ, ಬೆಳಗಾವಿ, ಗದಗ, ವಿಜಯನಗರ, ಉತ್ತರ ಕನ್ನಡ ಜಿಲ್ಲೆಗಳು ಹಾಗೂ ಹುಬ್ಬಳ್ಳಿಯಲ್ಲಿ ಸಾಧಾರಣ ಮಳೆಯಾಗಿದೆ. ವಿಜಯಪುರ ಜಿಲ್ಲೆಯ ಬಹುತೇಕ ಕಡೆ ಶನಿವಾರ ರಾತ್ರಿಯಿಡೀ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ, ಮೂಡುಬಿದಿರೆ, ಉಡುಪಿ ಜಿಲ್ಲೆಯ ಹೆಬ್ರಿ, ಕುಂದಾಪುರ, ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯಲ್ಲಿ ಜಿಟಿಜಿಟಿ ಮಳೆಯಾಗಿದೆ. ಕೊಡಗು ಜಿಲ್ಲೆಯ ಅಲ್ಲಲ್ಲಿ ಸಾಧಾರಣ, ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹೂವಿನಹಡಗಲಿಯಲ್ಲಿ ತುಂತುರು ಮಳೆಯಾಗಿದೆ.



ಭಾರಿ ಮಳೆಯಿಂದಾಗಿ ಮಂತ್ರಾಲಯ ಬಸ್ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶ ಜಲಾವೃತಗೊಂಡಿತ್ತು

ಮಂತ್ರಾಲಯ: ರಸ್ತೆಗಳು ಜಲಾವೃತ

ರಾಯಚೂರು: ಧಾರಾಕಾರ ಮಳೆಯಿಂದಾಗಿ ಆಂಧ್ರ ಪ್ರದೇಶ ಆಧೋನಿ ಭಾಗದ ರಾಂಪುರ ಹಳ್ಳ ಒಡೆದು, ನೀರು ನುಗ್ಗಿದ್ದರಿಂದ ಮಂತ್ರಾಲಯದಲ್ಲಿ ಜನಜೀವನ ಅಸ್ತವ್ಯಸ್ತವಾಯಿತು. ಮಠದಲ್ಲಿ ಶ್ರೀರಾಘವೇಂದ್ರಸ್ವಾಮಿ ಮೂಲ ವೃಂದಾವನ ದರ್ಶನಕ್ಕೆ ಸಮಸ್ಯೆ ಆಗಲಿಲ್ಲ. ರಸ್ತೆಗಳು ಜಲಾವೃತವಾದ್ದರಿಂದ ಭಕ್ತರಿಗೆ ಸಮಸ್ಯೆಯಾಯಿತು.

ರಾಯಚೂರು–ಮಂತ್ರಾಲಯ ಮಾರ್ಗ ಪಕ್ಕದ ಇಳಿಜಾರಿನಲ್ಲಿರುವ ಕರ್ನಾಟಕ ಭವನಕ್ಕೂ ಐದು ಅಡಿ ಎತ್ತರದವರೆಗೆ ನೀರು ಆವರಿಸಿತ್ತು. ಅಲ್ಲಿ ಮದುವೆಗೆ ಸಿದ್ಧಪಡಿಸಿದ್ದ ಅಲಂಕಾರ, ಚಪ್ಪರ ಕೊಚ್ಚಿಹೋದವು. ಅಲ್ಲಿಂದ ಜನರು ಹೊರಬರಲು ಹರಸಾಹಸಪಟ್ಟರು.

ಮಠದ ಮಹಾದ್ವಾರ, ಶ್ರೀರಾಘವೇಂದ್ರಸ್ವಾಮಿ ವೃತ್ತದಿಂದ ಬಸ್ ನಿಲ್ದಾಣದವರೆಗೆ ನೀರು ಆವರಿಸಿತ್ತು. 'ಮಳೆಯಿಂದಾಗಿ ಮಠದ ಪ್ರಾಂಗಣದಲ್ಲಿ ಸಮಸ್ಯೆ ಆಗಿಲ್ಲ. ಭಕ್ತರು ಯಥಾಪ್ರಕಾರ ರಾಯರ ದರ್ಶನ ಪಡೆಯಬಹುದು' ಎಂದು ಮಠದ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.

ತುಟ್ಟಿಭತ್ಯೆ ಬಿಡುಗಡೆ ಆದೇಶ ನಕಲಿ: ಹಣಕಾಸು ಸಚಿವಾಲಯ ಸ್ಪಷ್ಟನೆ

ನವದೆಹಲಿ: ಕೇಂದ್ರದ ನೌಕರರು ಹಾಗೂ ಪಿಂಚಣಿದಾರರ ತುಟ್ಟಿಭತ್ಯೆ (ಡಿ.ಎ) ಹಾಗೂ ತುಟ್ಟಿಭತ್ಯೆ ಪರಿಹಾರವನ್ನು (ಡಿ.ಆರ್) ಬಿಡುಗಡೆ ಮಾಡುವಂತೆ ಆದೇಶಿಸಿಲ್ಲ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.

ಕೊರೊನಾದಿಂದಾಗಿ ತಲೆದೋರಿದ್ದ ಆರ್ಥಿಕ ಬಿಕ್ಕಟ್ಟಿನಿಂದಾಗಿ ತಡೆಹಿಡಿಯಲಾಗಿದ್ದ ಡಿ.ಎ ಮತ್ತು ಡಿ.ಆರ್ ಅನ್ನು ಜುಲೈ 1ರಿಂದ ಅನ್ವಯವಾಗುವಂತೆ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಸಾಮಾಜಿಕ ಮಾಧ್ಯಮಗಳಲ್ಲಿಯೂ ಈ ಕುರಿತ ಸುದ್ದಿ ಹರಿದಾಡಿತ್ತು.

ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಆದೇಶದ ಪ್ರತಿ ನಕಲಿ. ಅಂಥ ಯಾವುದೇ ಆದೇಶ ಹೊರಡಿಸಿಲ್ಲ ಎಂದು ಹಣಕಾಸು ಸಚಿವಾಲಯ ಟ್ವೀಟ್ ಮಾಡಿದೆ.

ಆರ್ಚರಿ: ಭಾರತಕ್ಕೆ ಮೂರು ಚಿನ್ನ



ದೀಪಿಕಾ ಕುಮಾರಿ

ಪ್ಯಾರಿಸ್ (ಪಿಟಿಐ): ದೀಪಿಕಾ ಕುಮಾರಿ ಮುಂದಾಳತ್ವದ ಭಾರತ ಆರ್ಚರಿ ತಂಡವು ಭಾನುವಾರ ಇಲ್ಲಿ ನಡೆದ ವಿಶ್ವಕಪ್ ಸ್ಟೇಜ್ ತ್ರೀ ಆರ್ಚರಿಯಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದಿತು.

ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಚಿನ್ನದ ಸಾಧನೆ ಮಾಡಿದ ದೀಪಿಕಾ, ಮಹಿಳೆಯರ ರಿಕರ್ವ್ ತಂಡ ವಿಭಾಗದಲ್ಲಿ ಅಂಕಿತಾ ಭಕತ್ ಮತ್ತು ಕೋಮಲಿಕಾ ಅವರೊಂದಿಗೆ ಬಂಗಾರದ ಪದಕ ಬೇಟೆಯಾಡಿದರು. ಮಿಶ್ರ ವಿಭಾಗದಲ್ಲಿಯೂ ದೀಪಿಕಾ ತಮ್ಮ ಪತಿ ಅತನು ದಾಸ್ ಅವರೊಂದಿಗೆ ಚಿನ್ನದ ಪದಕ ಜಯಿಸಿದರು.

10

ಜಮ್ಮು ಸ್ಫೋಟ: ಎನ್‌ಐಎ ತನಿಖೆ?

ಜಮ್ಮು (ಪಿಟಿಐ): ಜಮ್ಮು ವಿಮಾನ ನಿಲ್ದಾಣದಲ್ಲಿರುವ ಭಾರತೀಯ ವಾಯುಪಡೆಯ ಕೇಂದ್ರ ಮೇಲೆ ಡ್ರೋನ್ ಬಳಸಿ ನಡೆಸಿದ ದಾಳಿಗೆ ಸಂಬಂಧಿಸಿ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ), ಸ್ಫೋಟಕ ವಸ್ತುಗಳ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಅಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣದ ಕುರಿತು ಭಾರತೀಯ ವಾಯುಸೇನೆಯ ಕಿರಿಯ ಅಧಿಕಾರಿ ನೀಡಿದ್ದ ಅರ್ಜಿಯಂತೆ ಸತ್ವಾರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಯುಎಪಿಎ ಕಾಯ್ದೆ ಅಡಿ ನಾಲ್ಕು ಸೆಕ್ಷನ್ (ಕಾನೂನುಬಾಹಿರ ಚಟುವಟಿಕೆಗಳು, ಭಯೋತ್ಪಾದಕ ಕೃತ್ಯ, ಸಂಚು ಮತ್ತು ತೀವ್ರ ಸ್ವರೂಪದ ದಂಡನೆ), ಐಪಿಸಿ ಅಡಿ ಒಂದು (ಕ್ರಿಮಿನಲ್ ಸಂಚು) ಮತ್ತು ಸ್ಫೋಟಕ ವಸ್ತುಗಳ ಕಾಯ್ದೆ ಅಡಿ ಎರಡು (ಜೀವ ಅಥವಾ ಆಸ್ತಿಪಾಸ್ತಿಗೆ ಆಪತ್ತು ತರುವಂಥ ಸ್ಫೋಟ, ಜೀವಕ್ಕೆ ಅಥವಾ ಆಸ್ತಿಪಾಸ್ತಿಗೆ ಹಾನಿ ತರುವ ಉದ್ದೇಶದಿಂದ ನಡೆಸಿರುವ ಸ್ಫೋಟ) ಸೆಕ್ಷನ್ ಅಡಿ ಎಫ್‌ಐಆರ್ ದಾಖಲಿಸಲಾಗಿದೆ.

ಸ್ಫೋಟ ಸಂಭವಿಸಿದ ಕಟ್ಟಡದ ಗೇಟಿನ ಹೊರಗೆ ಸೇನಾ ಸಿಬ್ಬಂದಿ ಹೊರತುಪಡಿಸಿ ಸಾಮಾನ್ಯರ ಓಡಾಟಗಳು ಕಂಡುಬಂದಿಲ್ಲ. ವಾಯುನೆಲೆ ಬಳಿ ಕೂಲಿಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅವರನ್ನು ಎಂದಿನಂತೆ ಗುರುತಿನ ಚೀಟಿಗಳನ್ನು ಪರಿಶೀಲಿಸಿ ಒಳಗೆ ಬಿಡಲಾಗಿತ್ತು. ಸೇನೆಯ ತ್ವರಿತ ಪ್ರತಿಕ್ರಿಯೆ ತಂಡಗಳು ವಾಯುನೆಲೆ ಕೇಂದ್ರದ ಹೊರಗೂ ತಪಾಸಣೆ ನಡೆಸಿವೆ ಎಂದಿದ್ದಾರೆ.

ವಾಯುಸೇನೆಯ ತನಿಖಾ ತಂಡಗಳು ಮತ್ತು ವಿಶೇಷ ಪಡೆಗಳು ತನಿಖೆ ಆರಂಭಿಸಿವೆ. ಸ್ಫೋಟದ ಲಕ್ಷಣಗಳ ಬಗ್ಗೆ ವಿಧಿವಿಜ್ಞಾನ ಪರಿಣತರು ಪರಿಶೀಲಿಸುತ್ತಿದ್ದಾರೆ. ಅದಕ್ಕಾಗಿ ಸಾಕ್ಷ್ಯಗಳನ್ನು ಕಲೆಹಾಕುತ್ತಿದ್ದಾರೆ. ಪ್ರಕರಣದ ಹಿನ್ನೆಲೆಯಲ್ಲಿ ಹೆದ್ದಾರಿಗಳೂ ಸೇರಿ ಜಮ್ಮು ಪ್ರದೇಶದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ವಾಹನಗಳ ತಪಾಸಣೆಗಾಗಿ ವಿಶೇಷ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಫೋಟ ಸಂಭವಿಸಿದ ಪ್ರದೇಶದಲ್ಲಿ ಮಾಧ್ಯಮ ಪ್ರತಿನಿಧಿಗಳು ಭಾನುವಾರ ಭಾರಿ ಸಂಖ್ಯೆಯಲ್ಲಿ ಕಂಡು ಬಂದರು. ಅದನ್ನು ಬಿಟ್ಟರೆ ಬೇರೆಲ್ಲ ಚಟುವಟಿಕೆಗಳು ಸಹಜವಾಗಿಯೇ ಇದ್ದವು.

ಡ್ರೋನ್: ಆಂತರಿಕ ಭದ್ರತೆಗೆ ಸವಾಲು

ನವದೆಹಲಿ (ಪಿಟಿಐ): ರೇಡಾರ್‌ಗಳ ಕಣ್ತಪ್ಪಿಸಿ, ಅತ್ಯಂತ ಪ್ರಮುಖ ಪ್ರದೇಶಗಳ ಮೇಲೆ ದಾಳಿ ಮಾಡಬಲ್ಲ ಮತ್ತು ಶಸ್ತ್ರಾಸ್ತ್ರಗಳನ್ನು ಸಾಗಾಣಿಕೆ ಮಾಡಬಲ್ಲ ಡ್ರೋನ್‌ಗಳ ಸಾಮರ್ಥ್ಯವು ದೇಶದ ಭದ್ರತೆ ದೃಷ್ಟಿಯಿಂದ ದೊಡ್ಡ ಚಿಂತೆಯ ವಿಷಯವಾಗಿದೆ. ಜಮ್ಮುವಿನಲ್ಲಿರುವ ಭಾರತೀಯ ವಾಯುಪಡೆಯ ನೆಲೆಯ ಮೇಲೆ ದಾಳಿ ನಡೆಸಲು ಭಾನುವಾರ ಇಂಥ ಮಾನವರಹಿತ ಯಂತ್ರ ಡ್ರೋನ್‌ಗಳನ್ನು ಬಳಸಲಾಗಿದೆ.

ಇಂಥ ಡ್ರೋನ್‌ಗಳು ದೇಶದ ಆಂತರಿಕ ಭದ್ರತೆಗೆ ತಂದೊಡ್ಡಬಹುದಾದ ಅಪಾಯಗಳ ಬಗ್ಗೆ ದೇಶದ ಆಂತರಿಕ ಭದ್ರತಾ ವ್ಯವಸ್ಥೆಯು ಕಳೆದ ಎರಡು–ಮೂರು ವರ್ಷಗಳಿಂದ ಚರ್ಚಿಸುತ್ತಲೇ ಇದೆ. ಪಾಕಿಸ್ತಾನವು ಕಳುಹಿಸಿದ ಶಸ್ತ್ರಸಹಿತವಾದ ಡ್ರೋನ್‌ಗಳನ್ನು ಗಡಿ ಭದ್ರತಾ ಪಡೆಗಳ ಯೋಧರು ಭಾರತ–ಪಾಕಿಸ್ತಾನ ಗಡಿಯಲ್ಲಿ ಹೊಡೆದುರುಳಿಸಿದ ಉದಾಹರಣೆಗಳು ಇವೆ. ಡ್ರೋನ್ ದಾಳಿಗಳನ್ನು ತಡೆಯಲು ತಂತ್ರಜ್ಞಾನ ರೂಪಿಸುವ ವಿಚಾರವಾಗಿ ಗೃಹ, ನಾಗರಿಕ ವಿಮಾನಯಾನ ಸಚಿವಾಲಯ, ನಾಗರಿಕ ವಿಮಾನಯಾನ ಭದ್ರತಾ ಬ್ಯೂರೊ (ಬಿಸಿಎಎಸ್), ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಭಾರತೀಯ ವಾಯುಪಡೆ ಮುಂತಾದವು ಸತತ ಪ್ರಯತ್ನ ನಡೆಸಿವೆ. ಈ ವಿಚಾರವಾಗಿ ಅನೇಕ ವಿಚಾರ-ಸಂಕಿರಣಗಳು ಸಹ ನಡೆದಿವೆ.

'ಗಡಿಯುದ್ದಕ್ಕೂ ಶಸ್ತ್ರಸಹಿತವಾದ ಡ್ರೋನ್‌ಗಳನ್ನು ತಡೆಯಬಲ್ಲ, ಅತ್ಯಂತ ಪರಿಣಾಮಕಾರಿ ತಂತ್ರಜ್ಞಾನ ನಮಗೆ ಇನ್ನೂ ಲಭ್ಯವಾಗಿಲ್ಲ. ಈವರೆಗೆ ಇಂಥ ಅನೇಕ ಡ್ರೋನ್‌ಗಳನ್ನು ತಡೆಯಲಾಗಿದ್ದರೂ ಅದು ಸಶಸ್ತ್ರಪಡೆಯ ಯೋಧರ ಸನ್ನದ್ಧತೆಯಿಂದ ಸಾಧ್ಯವಾಗಿದೆ' ಎಂದು ಗಡಿಭದ್ರತಾಪಡೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗಡಿಯಲ್ಲಿ ಭಾರತದ ಯೋಧರು ಎಲ್ಲೆಲ್ಲಿ ಇದ್ದಾರೆ ಎಂದು ಕಣ್ಗಾವಲಿಡಲು ಡ್ರೋನ್‌ಗಳನ್ನು ಬಳಸಿರುವ ಉದಾಹರಣೆಗಳು ಇವೆ. ಅವು ನಮ್ಮ ಯೋಧರ ಕಣ್ಣಿಗೆ ಬಿದ್ದಿರುವುದು ತಿಳಿಯುತ್ತಿದ್ದಂತೆಯೇ ಪಾಕಿಸ್ತಾನದಿಂದ ರಿಮೋಟ್ ಮೂಲಕ ನಿಯಂತ್ರಿಸುತ್ತಿದ್ದವರು ಅವುಗಳನ್ನು ಮರಳಿ ಕರೆಯಿಸಿಕೊಂಡಿದ್ದಾರೆ. ಭಯೋತ್ಪಾದಕರು ಅಥವಾ ಪಾಕಿಸ್ತಾನದ ಸೇನೆ ಅವುಗಳನ್ನು ನಿಯಂತ್ರಿಸಿರುವ ಸಾಧ್ಯತೆ ಇದೆ ಎಂದು ಅಧಿಕಾರಿ ಹೇಳಿದ್ದಾರೆ.

ಆಯುಧ ಸಾಗಿಸಲು ಡ್ರೋನ್ ಬಳಕೆ

ನವದೆಹಲಿ: ಡ್ರೋನ್ ಮೂಲಕ ದಾಳಿ ಇದೇ ಮೊದಲ ಬಾರಿಗೆ ನಡೆದಿದೆ. ಆದರೆ, ಪಾಕಿಸ್ತಾನ ಕೇಂದ್ರಿತ ಉಗ್ರರು ಕಾಶ್ಮೀರ ಮತ್ತು ಪಂಜಾಬ್‌ನ ಗಡಿ ಭಾಗಗಳಲ್ಲಿ ಆಯುಧಗಳನ್ನು ಉದುರಿಸಿದ ಪ್ರಕರಣಗಳು ವರದಿಯಾಗಿವೆ.

2019ರ ಆಗಸ್ಟ್‌ನಲ್ಲಿ ಅಮೃತಸರದ ಮೊಹವಾ ಗ್ರಾಮದಲ್ಲಿ ಡ್ರೋನ್ ಒಂದು ಪತ್ತೆಯಾಗಿತ್ತು. ಗಡಿ ಭಾಗದಲ್ಲಿ ಆಯುಧಗಳನ್ನು ತಂದು ಹಾಕಲು ಇದನ್ನು ಬಳಸಲಾಗುತ್ತಿತ್ತು ಎಂದು ಪೊಲೀಸರು ಹೇಳಿದ್ದರು. ಆಯುಧ ಬಿಸಾಕುತ್ತಿದ್ದ ಎಂಟು ಡ್ರೋನ್‌ಗಳನ್ನು ಮುಂದಿನ ತಿಂಗಳು ಗುರುತಿಸಲಾಗಿತ್ತು. ಪಂಜಾಬ್‌ನ ತರಣ್ ತಾರಣ್‌ನಲ್ಲಿ ಬಂಧಿಸಲಾಗಿದ್ದ ಶಂಕಿತ ಉಗ್ರರು ಈ ಬಗ್ಗೆ ಮಾಹಿತಿ ನೀಡಿದ್ದರು.

ಜಮ್ಮು–ಕಾಶ್ಮೀರದ ಕಠುವಾದಲ್ಲಿ ಕಳೆದ ಜೂನ್‌ನಲ್ಲಿ ಗೂಢಚರ್ಯೆಗೆ ಬಳಸಲಾಗುತ್ತಿದ್ದ ಡ್ರೋನ್ ಒಂದನ್ನು ಬಿಎಸ್‌ಎಫ್ ಯೋಧರು ಹೊಡೆದುರುಳಿಸಿದ್ದರು. ಮೂರು ತಿಂಗಳ ಬಳಿಕ, ಡ್ರೋನ್ ಮೂಲಕ ಶಸ್ತ್ರಾಸ್ತ್ರ ಪಡೆಯುತ್ತಿದ್ದ ಲಷ್ಕರ್ ಎ ತಯಬಾದ ಮೂವರು ಶಂಕಿತ ಉಗ್ರರನ್ನು ಕಾಶ್ಮೀರ ಪೊಲೀಸರು ಬಂಧಿಸಿದ್ದರು.

ಅಖ್ನೂರ್ ವಲಯದಲ್ಲಿ ಡ್ರೋನ್ ಮೂಲಕ ಪೂರೈಸಲಾಗಿದ್ದ ಶಸ್ತ್ರಾಸ್ತ್ರವನ್ನು ಜಮ್ಮು–ಕಾಶ್ಮೀರ ಪೊಲೀಸರು ಕಳೆದ ಸೆಪ್ಟೆಂಬರ್‌ನಲ್ಲಿ ವಶಪಡಿಸಿಕೊಂಡಿದ್ದರು.

ರೇಡಾರ್‌ಗೆ ಸಿಗದು: ಗಡಿಯಲ್ಲಿನ ಚಟುವಟಿಕೆಗಳ ಮೇಲೆ ನಿಗಾ ಇರಿಸಲು ಅಳವಡಿಸಲಾಗಿರುವ ರೇಡಾರ್ ವ್ಯವಸ್ಥೆಯು ಡ್ರೋನ್‌ಗಳನ್ನು ಗುರುತಿಸುವುದಿಲ್ಲ. ಡ್ರೋನ್‌ಗಳನ್ನು ಗುರುತಿಸಲು ಸಣ್ಣ ಹಕ್ಕಿಗಳನ್ನು ಕೂಡ ಗುರುತಿಸಲು ಸಾಧ್ಯವಾಗುವ ಹೊಸ ರೇಡಾರ್ ವ್ಯವಸ್ಥೆ ಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಚೆ ಲಕೋಟೆ ಲೋಕಾರ್ಪಣೆ • ಅಧ್ಯಯನ ಕೇಂದ್ರ ನಿರ್ಮಾಣ ಕಾಮಗಾರಿಗೆ ಚಾಲನೆ

'ಕೆಂಪೇಗೌಡ ಜಯಂತಿ 3 ದಿನ 'ಬೆಂಗಳೂರು ಹಬ್ಬ'ವಾಗಿ ಆಚರಣೆ'

ಪ್ರಜಾವಾಣಿ ವಾರ್ತೆ



ವಿಶೇಷ ಅಂಚೆ ಲಕೋಟೆಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಲೋಕಾರ್ಪಣೆ ಮಾಡಿದರು. ಸಿದ್ಧಲಿಂಗ ಸ್ವಾಮೀಜಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಕರ್ನಾಟಕ ವಲಯದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್, ಚಂದ್ರಶೇಖರ ಸ್ವಾಮೀಜಿ ಇದ್ದರು.

ಬೆಂಗಳೂರು: 'ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಮುಂದಿನ ವರ್ಷದಿಂದ ಮೂರು ದಿನ 'ಬೆಂಗಳೂರು ಹಬ್ಬ'ವಾಗಿ ಆಚರಿಸಲಾಗುವುದು' ಎಂದು ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕೆಂಪೇಗೌಡರ 512ನೇ ಜಯಂತಿ ಅಂಗವಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ಅಂಚೆ ಲಕೋಟೆ ಲೋಕಾರ್ಪಣೆ ಮತ್ತು ಅಧ್ಯಯನ ಕೇಂದ್ರ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೆಂಪೇಗೌಡರ ಜಯಂತಿಯನ್ನು ಪ್ರತಿ ವರ್ಷ ಜೂನ್ 27ರಂದು ಆಚರಿಸಲಾಗುತ್ತದೆ. ಮುಂದಿನ ವರ್ಷದಿಂದ ಜೂನ್ 26, 27 ಮತ್ತು 28ರಂದು 'ಬೆಂಗಳೂರು ಹಬ್ಬ'ದ ಹೆಸರಿನಲ್ಲಿ ಆಚರಿಸಲಾಗುವುದು. ಈ ದಿನಗಳಲ್ಲಿ ಬೆಂಗಳೂರಿನ ಪಾರಂಪರಿಕ ತಾಣ, ಕಟ್ಟಡಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿ ವಿಶ್ವವಿಖ್ಯಾತ ಹಬ್ಬದ ಮಾದರಿಯಲ್ಲಿ ಆಚರಿಸಲಾಗುವುದು' ಎಂದರು.

'ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ 23 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಕೆಂಪೇಗೌಡರ 108 ಎಡಿ ಎತ್ತರದ ಲೋಹದ ಪ್ರತಿಮೆಯನ್ನು ಮುಂದಿನ ವರ್ಷದ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಲೋಕಾರ್ಪಣೆ ಮಾಡಲಾಗುವುದು. ಕೋವಿಡ್ ಕಾರಣದಿಂದ ಈ ವರ್ಷ ಲೋಕಾರ್ಪಣೆ ಸಾಧ್ಯವಾಗಿಲ್ಲ. ನೋಯಿಡಾದಲ್ಲಿ ಪ್ರತಿಮೆ ನಿರ್ಮಾಣ ಭರದಿಂದ ನಡೆಯುತ್ತಿದೆ' ಎಂದು ವಿವರಿಸಿದರು.

> **ಕೇಪೇಗೌಡರು ಕಟ್ಟಿದ ಬೆಂಗಳೂರು ನಗರಕ್ಕೆ ಎಲ್ಲ ಮೂಲಸೌಕರ್ಯ ಒದಗಿಸಿ ಅಭಿವೃದ್ಧಿ ಪಡಿಸಿ, ಮಾದರಿ ನಗರವನ್ನಾಗಿ ಮಾಡುವ ಸಂಕಲ್ಪವನ್ನು ರಾಜ್ಯ ಸರ್ಕಾರ ತೊಟ್ಟಿದೆ**
> **ಬಿ.ಎಸ್. ಯಡಿಯೂರಪ್ಪ**
> ಮುಖ್ಯಮಂತ್ರಿ

> **ಕೆಂಪೇಗೌಡರ ಹೆಸರನ್ನು ಕೇವಲ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಟ್ಟರೆ ಸಾಲದು, ಕೆಂಪೇಗೌಡರ ವಿಶ್ವವಿದ್ಯಾನಿಲಯ ಸ್ಥಾಪಿಸುವ ಬಹುಕಾಲದ ಬೇಡಿಕೆ ಈಡೇರಿಸಬೇಕು**
> **ನಿರ್ಮಲಾನಂದನಾಥ ಸ್ವಾಮೀಜಿ**
> ಆದಿಚುಂಚನಗಿರಿ ಮಹಾಸಂಸ್ಥಾನ

ಕೆಂಪೇಗೌಡ ಪ್ರವಾಸೋದ್ಯಮ ಸರ್ಕ್ಯೂಟ್: 'ಬೆಂಗಳೂರು ನಗರದ ಸುತ್ತಮುತ್ತ ಈಗಲೂ 15 ಸಾವಿರ ಹೆಕ್ಟೇರ್ ದಟ್ಟ ಅರಣ್ಯವಿದೆ. ಅದರ ಜತೆಗೆ ರಾಜಧಾನಿಯ ಸುತ್ತಮುತ್ತಲಿನಲ್ಲಿ ಕೆಂಪೇಗೌಡರಿಗೆ ಸಂಬಂಧಿಸಿದ 46 ಪಾರಂಪರಿಕ ತಾಣಗಳಿವೆ. ಎಲ್ಲವನ್ನೂ ಅನುಸಂಧಾನಗೊಳಿಸಿ ಪ್ರವಾಸೋದ್ಯಮ ಸರ್ಕ್ಯೂಟ್ ಮಾಡಲು ಉದ್ದೇಶಿಸಲಾಗಿದೆ. ಇನ್ನೆರಡು ವರ್ಷದೊಳಗೆ ಈ ಯೋಜನೆಯನ್ನು ಜಾರಿಗೆ ತರಲಾಗುವುದು' ಎಂದು ಅವರು ಹೇಳಿದರು.

'ಕೆಂಪೇಗೌಡರ ವೀರ ಸಮಾಧಿ ಇರುವ ಮಾಗಡಿ ತಾಲ್ಲೂಕಿನ ಕೆಂಪಾಪುರವನ್ನು ಜಾಗತಿಕ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದು ಭೂಸ್ವಾಧೀನ ನಡೆಯುತ್ತಿದೆ. ಮುಂದಿನ ವರ್ಷದ ಜಯಂತಿ ಕಾರ್ಯಕ್ರಮವನ್ನು ಸಮಾಧಿಯ ಎದುರು ಆಚರಿಸುವ ಸಂಕಲ್ಪ ಸರ್ಕಾರದ್ದು' ಎಂದರು.

ಜ್ಞಾನಭಾರತಿಯಲ್ಲಿ ನಿರ್ಮಾಣ ಆಗುತ್ತಿರುವ ಕೆಂಪೇಗೌಡ ಅಧ್ಯಯನ ಕೇಂದ್ರದ ನಿರ್ಮಾಣ ಕಾಮಗಾರಿಗೆ ವರ್ಚುಯಲ್ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಿ, ನಾಡಪ್ರಭುಗಳ ಅಂಚೆ ಲಕೋಟೆ ಲೋಕಾರ್ಪಣೆ ಮಾಡಿದರು.

ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಬ್ರಹ್ಮಗುಂಡ ಸ್ಫಟಿಕಪುರಿ ಸಂಸ್ಥಾನದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಠದ ಚಂದ್ರಶೇಖರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಚಿವರಾದ ಕೆ.ಸಿ. ನಾರಾಯಣ ಗೌಡ, ಗೋಪಾಲಯ್ಯ, ಶಾಸಕರಾದ ಎಸ್.ಆರ್. ವಿಶ್ವನಾಥ್, ಮಂಜುನಾಥ್, ರಿಜ್ವಾನ್ ಅರ್ಷದ್, ವೈ.ಎ.ನಾರಾಯಣ ಸ್ವಾಮಿ, ಸಂಸದ ಪಿ.ಸಿ.ಮೋಹನ್ ಇದ್ದರು.

'ಭಾವಿ ಸಿ.ಎಂ': ಶಿಸ್ತು ಸಮಿತಿ ದೂರು


ವೈಯಕ್ತಿಕ ಅಭಿಪ್ರಾಯ ಹೇಳುವಂತಿಲ್ಲ: ರೆಹಮಾನ್ ಖಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ' ಎಂದು ಪಕ್ಷದ ಶಾಸಕ ಜಮೀರ್ ಅಹ್ಮದ್ ಖಾನ್ ಹೇಳಿಕೆ ನೀಡಿದ ಬೆನ್ನಲ್ಲೆ, ಇತರ ಕೆಲವು ಶಾಸಕರೂ ಧ್ವನಿಗೂಡಿಸುತ್ತಿರುವುದನ್ನು ರಾಜ್ಯ ಕಾಂಗ್ರೆಸ್ ಶಿಸ್ತು ಸಮಿತಿ ಗಂಭೀರವಾಗಿ ಪರಿಗಣಿಸಿದೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಎಚ್ಚರಿಕೆ ನೀಡಿದ ಬಳಿಕವೂ ಕೆಲವರು ಅದೇ ಧಾಟಿಯಲ್ಲಿ ಹೇಳಿಕೆ ಮುಂದುವರಿಸಿರುವುದರಿಂದ, ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿರುವ ಸಮಿತಿ, ಹೇಳಿಕೆ ನೀಡುವವರ ವಿರುದ್ಧ ಚಾಟಿ ಬೀಸಲು ಮುಂದಾಗಿದೆ.

ಭಾನುವಾರ 'ವರ್ಚುವಲ್' ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಮಿತಿಯ ಅಧ್ಯಕ್ಷ ಕೆ. ರೆಹಮಾನ್ ಖಾನ್, 'ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬುದಾಗಿ ಕೆಲವು ಶಾಸಕರು ನೀಡುತ್ತಿರುವ ಹೇಳಿಕೆಗಳು ಪಕ್ಷದ ಶಿಸ್ತು ಉಲ್ಲಂಘನೆ. ಪಕ್ಷದಲ್ಲಿದ್ದುಕೊಂಡು ವೈಯಕ್ತಿಕ ಅಭಿಪ್ರಾಯ ಹೇಳಲು ಅವಕಾಶ ಇಲ್ಲ. ಈ ರೀತಿ ಹೇಳಿಕೆ ನೀಡಿರುವ ಶಾಸಕರಿಗೆ ನೋಟಿಸ್ ನೀಡಿ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ ಶೀಘ್ರವೇ ತೀರ್ಮಾನಿಸುತ್ತೇವೆ' ಎಂದು ಹೇಳಿದರು.


ರೆಹಮಾನ್ ಖಾನ್

'ಶಾಸಕರು ನೀಡಿರುವ ಹೇಳಿಕೆಗಳ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದಿದೆ. ಶಾಸಕರ ಹೇಳಿಕೆಗಳಿಗೆ ಸಂಬಂಧಿಸಿದ ಪತ್ರಿಕಾ ತುಣುಕುಗಳು ಸೇರಿದಂತೆ ಯಾವುದೇ ಸಾಕ್ಷ್ಯಗಳು ಸದ್ಯ ಸಮಿತಿಯ ಬಳಿ ಇಲ್ಲ. ಅವುಗಳನ್ನು ಸಂಗ್ರಹಿಸಿ, ವಿವರವಾಗಿ ಚರ್ಚಿಸಲು ಸಮಯಾವಕಾಶ ಬೇಕು. ಹೀಗಾಗಿ ಮುಂದಿನ ವಾರ ಮತ್ತೆ ಸಭೆ ನಡೆಸಿ, ಸಮಗ್ರವಾಗಿ ಚರ್ಚಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ನಿರ್ಧರಿಸುತ್ತೇವೆ' ಎಂದರು.

'ವೈಯಕ್ತಿಕ ಹೇಳಿಕೆ ಕೊಡುವುದು ಪಕ್ಷದ ಸಂವಿಧಾನದ ಪ್ರಕಾರ ಅಶಿಸ್ತು. ಮುಖ್ಯಮಂತ್ರಿ ಯಾರಾಗಬೇಕೆಂದು ತೀರ್ಮಾನಿಸುವುದು ಸಾರ್ವಜನಿಕರಲ್ಲ.ಪಕ್ಷದ ಶಾಸಕರು, ಹೈಕಮಾಂಡ್. ಹೀಗಾಗಿ, ಶಾಸಕರು ಶಾಸಕಾಂಗ ಸಭೆಯಲ್ಲಿ ಮಾತ್ರ ಮಾತನಾಡಬಹುದು. ವೈಯಕ್ತಿಕ ಅಭಿಪ್ರಾಯವನ್ನು ಕೆಪಿಸಿಸಿ ಅಧ್ಯಕ್ಷರಿಗೆ, ರಾಷ್ಟ್ರೀಯ ಅಧ್ಯಕ್ಷರಿಗೆ ಹೇಳಬಹುದು. ಸಾರ್ವಜನಿಕವಾಗಿ ಹೇಳಿಕೆ ನೀಡುವುದು ಅಶಿಸ್ತು' ಎಂದು ಖಾನ್ ಪ್ರತಿಪಾದಿಸಿದರು.

'ಮಾಧ್ಯಮಗಳ ಮುಂದೆ ಈ ರೀತಿ ವೈಯಕ್ತಿಕ ಹೇಳಿಕೆ ನೀಡದಂತೆ ಹೈಕಮಾಂಡ್ ಈಗಾಗಲೇ ಸೂಚನೆ ನೀಡಿದೆ. ನಾವೂ ಮನವಿ ಮಾಡಿದ್ದೇವೆ. ಇದರಿಂದ ಪಕ್ಷಕ್ಕೆ ಒಳ್ಳೆಯದಲ್ಲ' ಎಂದರು.

'ಆರ್.ಆರ್. ನಗರ ಕ್ಷೇತ್ರದ ಉಪ ಚುನಾವಣೆಯ ಸಂದರ್ಭದಲ್ಲೂ ಇದೇ ರೀತಿಯ ಹೇಳಿಕೆ ನೀಡಿದ ಕಾರಣಕ್ಕೆ ನೋಟಿಸ್ ನೀಡಿ ಎಚ್ಚರಿಕೆ ಕೊಟ್ಟಿದ್ದೆವು. ಉಪ ಚುನಾವಣೆ, ಬಳಿಕ ಕೋವಿಡ್ ಕಾರಣಕ್ಕೆ ನೋಟಿಸ್ ಪಡೆದವರನ್ನು ನೇರವಾಗಿ ಕರೆದು ವಿಚಾರಣೆ ನಡೆಸಲು ಸಾಧ್ಯವಾಗಿರಲಿಲ್ಲ. ಅದನ್ನೂ ಈಗ ಗಣನೆಗೆ ತೆಗೆದುಕೊಳ್ಳುತ್ತೇವೆ' ಎಂದೂ ಹೇಳಿದರು.

'ಟ್ವಿಟರ್ ಇಂಡಿಯಾ' ಅಧಿಕಾರಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಟ್ವಿಟರ್ ಇಂಡಿಯಾ ಸಂಸ್ಥೆಯ ಸ್ಥಾನಿಕ ಕುಂದುಕೊರತೆ ಅಧಿಕಾರಿಯಾಗಿ ಇತ್ತೀಚೆಗೆ ನೇಮಕಗೊಂಡಿದ್ದ ಧರ್ಮೇಂದ್ರ ಚತುರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕಂಪನಿಯ ವೆಬ್‌ಸೈಟ್‌ನಲ್ಲಿ ಸದ್ಯ ಇವರ ಹೆಸರು ಕಾಣಿಸುತ್ತಿಲ್ಲ. ಇವರ ಹುದ್ದೆಯನ್ನು ಬಿಂಬಿಸುವ ಸ್ಥಳದಲ್ಲಿ ಕಂಪನಿಯ ಹೆಸರನ್ನೇ ಪ್ರದರ್ಶಿಸಲಾಗಿದೆ.

ಮೂಲಗಳ ಪ್ರಕಾರ, ಧರ್ಮೇಂದ್ರ ಚತುರ್ ಅವರು ರಾಜೀನಾಮೆ ನೀಡಿದ್ದಾರೆ. ಆದರೆ, ಈ ಕುರಿತು ಪ್ರತಿಕ್ರಿಯಿಸಲು ಟ್ವಿಟರ್ ನಿರಾಕರಿಸಿದೆ.

ಗ್ರಾಹಕರ ಕುಂದುಕೊರತೆ ಆಲಿಸಿ ಪರಿಹಾರವನ್ನು ಒದಗಿಸಲು ಮಾಹಿತಿ ತಂತ್ರಜ್ಞಾನ (ಆಂತರಿಕ ಮಾರ್ಗಸೂಚಿ ಮತ್ತು ನೀತಿಸಂಹಿತೆ) ಕಾಯ್ದೆಯಂತೆ ಸಂಸ್ಥೆಗಳು ಕುಂದುಕೊರತೆ ಅಧಿಕಾರಿ ನೇಮಿಸುವುದು ಕಡ್ಡಾಯವಾಗಿದೆ.

ಹೊಸ ಐಟಿ ನಿಯಮಗಳಿಗೆ ಸಂಬಂಧಿಸಿದಂತೆ ಟ್ವಿಟರ್, ಭಾರತ ಸರ್ಕಾರದೊಂದಿಗೆ ಹಗ್ಗಜಗ್ಗಾಟ ನಡೆಸಿರುವ ಹಂತದಲ್ಲೇ ಈ ಬೆಳವಣಿಗೆ ನಡೆದಿದೆ.

ಸೋಮವಾರ, ಜೂನ್ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 179 | ಪುಟ 12
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ





ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಜಮ್ಮು ವಿಮಾನ ನಿಲ್ದಾಣದ ವಾಯುಪಡೆ ಕೇಂದ್ರದಲ್ಲಿ ಸ್ಫೋಟ: ಇಬ್ಬರಿಗೆ ಗಾಯ

ಉಗ್ರರ ದಾಳಿಗೆ ಡ್ರೋನ್ ಬಳಕೆ

ಜಮ್ಮು (ಪಿಟಿಐ): ಪ್ರಮುಖ ಕೇಂದ್ರಗಳ ಮೇಲೆ ದಾಳಿ ನಡೆಸಲು ಪಾಕಿಸ್ತಾನ ಕೇಂದ್ರಿತ ಉಗ್ರರು ಇದೇ ಮೊದಲ ಬಾರಿಗೆ ಡ್ರೋನ್‌ಗಳನ್ನು ಬಳಸಿದ್ದಾರೆ. ಜಮ್ಮು ವಿಮಾನ ನಿಲ್ದಾಣದಲ್ಲಿರುವ ಭಾರತೀಯ ವಾಯು ಪಡೆ ಕೇಂದ್ರವೊಂದರ ಮೇಲೆ ಭಾನುವಾರ ಬೆಳಿಗ್ಗಿನ ಜಾವ 1.40ರ ಹೊತ್ತಿಗೆ ಎರಡು ಬಾಂಬ್ ಎಸೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರು ನಿಮಿಷಗಳ ಅಂತರದಲ್ಲಿ ಎರಡು ಬಾಂಬ್ ದಾಳಿಗಳು ನಡೆದಿವೆ. ಇಬ್ಬರು ಯೋಧರು ದಾಳಿಯಲ್ಲಿ ಗಾಯಗೊಂಡಿದ್ದಾರೆ. ವಿಮಾನ ನಿಲ್ದಾಣದ ಭಾರಿ ಭದ್ರತೆಯ ತಾಂತ್ರಿಕ ಪ್ರದೇಶದ ಒಂದಸ್ತಿನ ಕಟ್ಟಡದ ಚಾವಣಿಯನ್ನು ಸೀಳಿ ಮೊದಲ ಬಾಂಬ್ ಒಳಗೆ ಬಿದ್ದಿದೆ. ಎರಡನೆಯ ಬಾಂಬ್ ಬಯಲು ಪ್ರದೇಶದಲ್ಲಿ ಬಿದ್ದಿದೆ. ಈ ಎರಡೂ ಕಡಿಮೆ ತೀವ್ರತೆಯ ಸ್ಫೋಟಕಗಳು. ವಾಯು ನೆಲೆಯು ನಗರದ ಹೊರವಲಯದ ಸತ್ವಾರಿ ಎಂಬಲ್ಲಿದೆ.

ಭಾರತೀಯ ವಾಯುಪಡೆಯ ಕೇಂದ್ರದ ಮೇಲೆ ನಡೆದಿರುವುದು ಭಯೋತ್ಪಾದನಾ ದಾಳಿ ಎಂಬುದನ್ನು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮುಖ್ಯಸ್ಥ ದಿಲ್ಬಾಗ್ ಸಿಂಗ್ ಖಚಿತಪಡಿಸಿದ್ದಾರೆ. ದಾಳಿಯ ಹಿಂದಿನ ಹುನ್ನಾರವೇನು ಎಂಬುದನ್ನು ಬಯಲಿಗೆಳೆಯಲು ವಾಯುಪಡೆಯ ಅಧಿಕಾರಿಗಳಿಗೆ ಪೊಲೀಸ್ ಮತ್ತು ಇತರ ತನಿಖಾ ಸಂಸ್ಥೆಗಳು ನೆರವು ನೀಡುತ್ತಿವೆ ಎಂದು ಅವರು ತಿಳಿಸಿದ್ದಾರೆ. ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ತಂಡವೂ ಸ್ಥಳಕ್ಕೆ ತಲುಪಿದೆ.

ಡ್ರೋನ್‌ಗಳು ಎಲ್ಲಿಂದ ಬಂದಿವೆ ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ. ಅದರ ಹಾರಾಟದ ಹಾದಿಯನ್ನು ಪತ್ತೆ ಮಾಡುವಪ್ರಯತ್ನಗಳುಆರಂಭವಾಗಿವೆ.

14 ಕಿ.ಮೀ. ಮಾತ್ರ: ಎರಡು ಸ್ಫೋಟಕಗಳನ್ನು ಉದುರಿಸಿದ ಡ್ರೋನ್‌ಗಳು ಗಡಿಯಾಚೆಗೆ ಅಥವಾ ಬೇರೆ ಯಾವುದೋ ಸ್ಥಳಕ್ಕೆ ಕತ್ತಲಲ್ಲೇ ಹಿಂದಿರುಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಜಮ್ಮು ವಿಮಾನ ನಿಲ್ದಾಣದಿಂದ ಅಂತರರಾಷ್ಟ್ರೀಯ ಗಡಿಗೆ ಇರುವ ವಾಯು ಮಾರ್ಗದ ದೂರ 14 ಕಿ.ಮೀ.ಮಾತ್ರ.



ಜಮ್ಮು ವಿಮಾನ ನಿಲ್ದಾಣದಲ್ಲಿರುವ ಭಾರತೀಯ ವಾಯುಪಡೆಯ ಕೇಂದ್ರಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ –ಪಿಟಿಐ ಚಿತ್ರ

ಮಾತುಕತೆ ಬೆನ್ನಿಗೆ ಹುನ್ನಾರ?

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು-ಕಾಶ್ಮೀರದ ಪಕ್ಷಗಳ ಮುಖಂಡರ ಜತೆಗೆ ಮಾತುಕತೆ ನಡೆಸಿದ ಮೂರನೇ ದಿನಕ್ಕೆ ಈ ದಾಳಿ ನಡೆದಿದೆ.

ಭಾರತ–ಪಾಕಿಸ್ತಾನ ಗಡಿಯಲ್ಲಿ ಕದನ ವಿರಾಮ ಜಾರಿಯಲ್ಲಿದೆ. ಹಿಂಬಾಗಿಲ ಮಾತುಕತೆಯ ಕಾರಣದಿಂದಾಗಿ, ಕೆಲವು ತಿಂಗಳಲ್ಲಿ ಈ ಪ್ರದೇಶದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಲಡಾಖ್ ಭೇಟಿಯಲ್ಲಿದ್ದಾರೆ. ಲಡಾಖ್‌ನ ಭಾಗವಾಗಿರುವ ಕಾರ್ಗಿಲ್‌ನ ನಾಯಕರ ಜತೆಗೆ ಕೇಂದ್ರ ಗೃಹ ಸಚಿವಾಲಯವು ಮಾತುಕತೆ ನಡೆಸುತ್ತಿದೆ. ಇಂತಹ ಸಂದರ್ಭದಲ್ಲಿಯೇ ದಾಳಿ ನಡೆದಿದೆ. ಈ ಎಲ್ಲ ವಿದ್ಯಮಾನಗಳ ಕಾರಣಕ್ಕೆ ದಾಳಿ ನಡೆದಿದೆ ಎಂದು ಅಧಿಕೃತವಾದ ಹೇಳಿಕೆ ಯಾವುದೂ ಬಂದಿಲ್ಲ.

ತಪ್ಪಿದ ದೊಡ್ಡ ದುರಂತ?

ಲಷ್ಕರ್ ಎ ತಯಬಾ ಸಂಘಟನೆಗೆ ಸೇರಿದವನು ಎನ್ನಲಾದ ವ್ಯಕ್ತಿಯನ್ನು ಜಮ್ಮುವಿನಲ್ಲಿ ಬಂಧಿಸುವ ಮೂಲಕ ದೊಡ್ಡ ದಾಳಿಯ ಅಪಾಯವೊಂದನ್ನು ತಪ್ಪಿಸಲಾಗಿದೆ. ಆ ವ್ಯಕ್ತಿಯಿಂದ 5.5 ಕೆ.ಜಿ. ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ. ಜನಸಂದಣಿಯ ಪ್ರದೇಶದಲ್ಲಿ ಸ್ಫೋಟಕ ಇರಿಸುವ ಹೊಣೆಯನ್ನು ಉಗ್ರಗಾಮಿ ಸಂಘಟನೆಯು ಈತನಿಗೆ ವಹಿಸಿತ್ತು ಎಂದು ಜಮ್ಮು-ಕಾಶ್ಮೀರ ಪೊಲೀಸ್ ಮಹಾ ನಿರ್ದೇಶಕರು ತಿಳಿಸಿದ್ದಾರೆ.

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಕೋವಿಡ್–19 ಪರಿಹಾರ ಟ್ರಸ್ಟ್

ಡಿಎಚ್-ಪಿವಿ ಕೋವಿಡ್ ಪರಿಹಾರ ನಿಧಿ; ಮತ್ತಷ್ಟು ಎನ್‌ಜಿಒಗಳಿಗೆ ನೆರವು

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೋವಿಡ್ ಪರಿಹಾರ ಕಾರ್ಯ ಮತ್ತು ಜನರ ಜೀವನೋಪಾಯಕ್ಕೆ ನೆರವು ಕಲ್ಪಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ 11 ಎನ್‌ಜಿಒಗಳಿಗೆ ಆರ್ಥಿಕ ನೆರವು ನೀಡಲು ‘ಡೆಕ್ಕನ್ ಹೆರಾಲ್ಡ್ – ಪ್ರಜಾವಾಣಿ ಪರಿಹಾರ ಟ್ರಸ್ಟ್’ ನಿರ್ಧರಿಸಿದೆ. ಈ ಉದ್ದೇಶಕ್ಕಾಗಿ ಡಿಎಚ್-ಪಿವಿ ಕೋವಿಡ್ ಪರಿಹಾರ ನಿಧಿಗೆ ನಮ್ಮ ಗೌರವಾನ್ವಿತ ಓದುಗರಿಂದ ದೇಣಿಗೆ ಸ್ವೀಕರಿಸಲಾಗಿದೆ. ಎರಡನೇ ಹಂತದಲ್ಲಿ ಕೆಳಕಂಡ 11 ಸಂಸ್ಥೆಗಳಿಗೆ ತಲಾ ₹ 5 ಲಕ್ಷ ನೆರವು ನೀಡಲಾಗುವುದು.

ಆ ಸಂಸ್ಥೆಗಳು:

1)ನಿಸರ್ಗ ಫೌಂಡೇಷನ್ 2) ಬೆಳಗಾವಿ ಡಯಾಸಿಜನ್ ಸೋಷಿಯಲ್ ಸರ್ವಿಸ್ ಸೊಸೈಟಿ (ಬಿಡಿಎಸ್‌ಎಸ್‌ಎಸ್) 3)ರಿಫಾರೆಸ್ಟ್ ಇಂಡಿಯಾ 4) ಆಶಾ ಕಿರಣ ಸೇವಾ ಟ್ರಸ್ಟ್ 5) ಹೆಡ್‌ಸ್ಟ್ರೀಮ್ಸ್ 6) ಲೆಟ್ಸ್ ಬಿ ದಿ ಚೇಂಜ್ 7) ಸ್ನೇಹಾ(ಎಸ್‌ಎನ್‌ಇಎಚ್‌ಎ)– ಸೊಸೈಟಿ ಫಾರ್ ಇಂಟೆಗ್ರೇಟೆಡ್ ಕಮ್ಯೂನಿಟಿ ಡೆವಲಪ್‌ಮೆಂಟ್ 8) ಅಲ್ಲಮಾ ಇಕ್ಬಾಲ್ ಎಜುಕೇಷನ್ ಸೊಸೈಟಿ 9) ಯುವಲೋಕ ಫೌಂಡೇಷನ್ 10) ಗ್ರಾಮ ವಿಕಾಸ 11) ಕೃತಜ್ಞತಾ ಟ್ರಸ್ಟ್

ಈ ಎನ್‌ಜಿಒಗಳ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪುಟ 9ರಲ್ಲಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ಸಂಸ್ಥೆಗಳನ್ನು ಗುರುತಿಸಿ ಆರ್ಥಿಕ ನೆರವು ನೀಡಲಾಗುವುದು.

ಲಸಿಕೆ: ರಾಜ್ಯದ ಗ್ರಾಮೀಣ ಭಾಗದಲ್ಲಿ ಅಲ್ಪ ಪ್ರಗತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಭಾರತದ ರಾಜ್ಯಗಳ ಪೈಕಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಕೋವಿಡ್ ಲಸಿಕೆಯನ್ನು ನೀಡಲಾಗಿದೆ. ಮೂರನೇ ಅಲೆ ಎದುರಾಗುವ ಆತಂಕ ಇರುವಂತೆಯೇ, ಗ್ರಾಮೀಣ ಭಾಗದ ಜನರಿಗೆ ರಕ್ಷಣೆ ಒದಗಿಸುವ ಕ್ರಮವಾಗಿ ಲಸಿಕೆ ನೀಡುವ ಅಭಿಯಾನವನ್ನು ಚುರುಕುಗೊಳಿಸಬೇಕಾಗಿದೆ.

ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಶೇ 63ರಷ್ಟು ಲಸಿಕಾ ಕೇಂದ್ರಗಳಿವೆ. ಆದರೂ, ಈ ಕೇಂದ್ರಗಳ ಮೂಲಕ ಶೇ 46ರಷ್ಟು ಡೋಸ್‌ಗಳನ್ನಷ್ಟೇ ಮೇ 1 ಮತ್ತು ಜೂನ್ 23ರ ನಡುವೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

ಸುಪ್ರೀಂ ಕೋರ್ಟ್‌ಗೆ ಈ ಕುರಿತು ಸಚಿವಾಲಯ ಶನಿವಾರ ಪ್ರಮಾಣಪತ್ರವನ್ನು ಸಲ್ಲಿಸಿದೆ. ಸಚಿವಾಲಯವು ಮೇ ತಿಂಗಳ ಮಧ್ಯಭಾಗದಲ್ಲಿ, ಪಟ್ಟಣ ಮತ್ತು ಗ್ರಾಮೀಣ ಭಾಗದಲ್ಲಿ ಕೋವಿಡ್ ಲಸಿಕೆ ನೀಡುವುದನ್ನು ಚುರುಕುಗೊಳಿಸಲು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿತ್ತು.

ಸುಪ್ರೀಂ ಕೋರ್ಟ್‌ಗೆ ಸಚಿವಾಲಯವು ಸಲ್ಲಿಸಲಿರುವ ಅಂಕಿ ಅಂಶಗಳ ಪ್ರಕಾರ, ನೆರೆಯ ತೆಲಂಗಾಣದಲ್ಲಿ ಶೇ 37ರಷ್ಟು ಲಸಿಕೆ ಕೇಂದ್ರಗಳು ಗ್ರಾಮೀಣ ಭಾಗದಲ್ಲಿದ್ದು, ಅಲ್ಲಿ ಶೇ 34ರಷ್ಟು ಗುರಿ ಸಾಧಿಸಲಾಗಿದೆ. ಕರ್ನಾಟಕಕ್ಕೆ ಹೋಲಿಸಿದರೆ ತಮಿಳುನಾಡು ಸ್ಥಿತಿ ಉತ್ತಮವಾಗಿದೆ. ಗೋವಾ ಉತ್ತಮ ಸಾಧನೆ ಮಾಡಿದ್ದು, ಶೇ 65ರಷ್ಟು ಲಸಿಕೆ ನೀಡಿದೆ.

ಗ್ರಾಮೀಣ ಜನರಿಗೆ ಲಸಿಕೆ ನೀಡುವ ವಿಷಯದಲ್ಲಿ ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳು ಕ್ರಮವಾಗಿ ಶೇ 63 ಮತ್ತು ಶೇ 73ರಷ್ಟು ಸಾಧನೆ ಮಾಡಿವೆ.

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು	28,34,630 ▲ (28,31,026 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	1,01,042 ▼
ಗುಣಮುಖರಾದವರು	26,98,822 ▲
ಒಟ್ಟು ಸಾವು	34,743 ▲

ದಿನದ ಏರಿಕೆ

ಹೊಸ ಪ್ರಕರಣ	3,604	▼
ಗುಣಮುಖ	7,699	▲
ಸಾವು	89	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವೇಣುಗೋಪಾಲ್ ಜತೆ ಹರಿಪ್ರಸಾದ್, ಮುನಿಯಪ್ಪ ಇಂದು ಚರ್ಚೆ ಸಾಧ್ಯತೆ

‘ಕೈ’ ತಿಕ್ಕಾಟ: ವರಿಷ್ಠರ ಭೇಟಿಗೆ ‘ತಟಸ್ಥ’ ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾವಿ ಮುಖ್ಯಮಂತ್ರಿ’ ವಿಚಾರದಲ್ಲಿ ಶಾಸಕರು ನೀಡುತ್ತಿರುವ ಹೇಳಿಕೆಗಳಿಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಡುವೆ ‘ಬಣ ರಾಜಕೀಯ’ ಸೃಷ್ಟಿಯಾಗಿರುವ ಮಧ್ಯೆಯೇ, ಈ ವಿಚಾರದಲ್ಲಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ಮತ್ತೊಂದು ಬಣ ಮುಂದಾಗಿದೆ.

‘ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬಣದ ಮಧ್ಯೆ ನಡೆಯುತ್ತಿರುವ ತಿಕ್ಕಾಟವನ್ನು ವರಿಷ್ಠರ ಗಮನಕ್ಕೆ ತರಲು ಹಿರಿಯ ನಾಯಕರೂ ಆಗಿರುವ ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತು ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ದೆಹಲಿ ತಲುಪಿದ್ದಾರೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ. ಪಕ್ಷದಲ್ಲಿ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಶಾಸಕ ಜಿ. ಪರಮೇಶ್ವರ ಜೊತೆ ಶನಿವಾರ ಇವರಿಬ್ಬರೂ ಚರ್ಚೆ ನಡೆಸಿದ್ದರು.

‘ಯಾವುದೇ ಬಣದಲ್ಲಿ ಗುರುತಿಸಿಕೊಳ್ಳದ ಈ ನಾಯಕರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಸೋಮವಾರ ಭೇಟಿ ಮಾಡುವ ಸಾಧ್ಯತೆ ಇದೆ. ಕೇಂದ್ರದ ಹಿರಿಯ ನಾಯಕರು ಮಧ್ಯಪ್ರವೇಶಿಸಿ ಎರಡೂ ಬಣಗಳನ್ನು ನಿಯಂತ್ರಿಸುವಂತೆ ಅವರು ಮನವಿ ಮಾಡಲಿದ್ದಾರೆ’ ಎಂದೂ ಮೂಲಗಳು ಹೇಳಿವೆ. ವೇಣುಗೋಪಾಲ್, ಈ ಹಿಂದೆ ರಾಜ್ಯದ ಉಸ್ತುವಾರಿ ಹೊಂದಿದ್ದರು.

‘ಪಕ್ಷ ಅಧಿಕಾರಕ್ಕೆ ಬರುವ ಮೊದಲೇ ಮುಂದಿನ ಮುಖ್ಯಮಂತ್ರಿ ಬಗ್ಗೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬೆಂಬಲಿಗರು ನೀಡುತ್ತಿರುವ ಸಾರ್ವಜನಿಕ ಹೇಳಿಕೆಗಳಿಂದ ಪಕ್ಷಕ್ಕೆ ಹಾನಿ ಆಗಲಿದೆ. ಹಲವು ನಾಯಕರು, ಶಾಸಕರು, ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದವರು ಎರಡೂ ಗುಂಪಿನ ಜೊತೆ ಗುರುತಿಸಿಕೊಂಡಿಲ್ಲ. ನಾಯಕತ್ವ ವಿಚಾರದಲ್ಲಿ ಇತ್ತೀಚಿನ ಹೇಳಿಕೆಗಳನ್ನು ಅವರು ಗಂಭೀರವಾಗಿ ಪರಿಗಣಿಸಿದ್ದಾರೆ’ ಎಂದೂ ಮೂಲಗಳು ಹೇಳಿವೆ.

4ನೇ ಪುಟ ನೋಡಿ



ಕೋವಿಡ್ ಕಾರಣದಿಂದ ನಾಡಪ್ರಭುವಿನ ಜಯಂತ್ಯುತ್ಸವ ಸರಳ ಆಚರಣೆ • ಆಹಾರದ ಕಿಟ್ ವಿತರಣೆ

ನಗರ ನಿರ್ಮಾತೃ ಕೆಂಪೇಗೌಡರ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವವನ್ನು ಕೋವಿಡ್ ಕಾರಣದಿಂದ ಈ ಬಾರಿ ಸರಳವಾಗಿ ಆಚರಿಸಲಾಯಿತು. ವಿವಿಧ ಸಂಘ–ಸಂಸ್ಥೆಗಳು, ರಾಜಕೀಯ ಪಕ್ಷಗಳು ಜನರಿಗೆ ಆಹಾರದ ಕಿಟ್ ವಿತರಿಸುವ ಮೂಲಕ ನಾಡದೊರೆಯ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿದವು.

ಬಿಬಿಎಂಪಿ ಕೇಂದ್ರ ಕಚೇರಿ ಮುಂಭಾಗದಲ್ಲಿರುವ ಕೆಂಪೇಗೌಡರ ಪ್ರತಿಮೆ ಹಾಗೂ ಕೆಂಪೇಗೌಡರ ಸೊಸೆ ಮಹಾತ್ಯಾಗಿ ಲಕ್ಷ್ಮೀದೇವಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮತ್ತು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ನಾಡಪ್ರಭುವಿನ 512ನೇ ಜಯಂತ್ಯುತ್ಸವಕ್ಕೆ ಚಾಲನೆ ನೀಡಿದರು.

ನಗರ ನಿರ್ಮಾತೃವಾದ ಕೆಂಪೇಗೌಡರ ಜೀವನ ಮತ್ತು ಸಾಧನೆಗಳನ್ನು ಸ್ಮರಿಸಲಾಯಿತು. ಅವರು ನಗರದ ನಾಲ್ಕು ಕಡೆ ನಿರ್ಮಿಸಿದ್ದ ಗಡಿ ಗೋಪುರಗಳಿಗೆ ಪೂಜೆ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಲಾಯಿತು.

ನಗರದ ಅಭಿವೃದ್ಧಿ: ನಗರದ ಮೇಖ್ರಿ ವೃತ್ತದ ಬಳಿ ಕೆಂಪೇಗೌಡರು ನಿರ್ಮಿಸಿದ್ದ ಉತ್ತರದ ಗಡಿ ಗೋಪುರದ ಬಳಿಯ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದ ಉಪಮುಖ್ಯಮಂತ್ರಿ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ.ಎನ್. ಅಶ್ವತ್ಥ ನಾರಾಯಣ, 'ಕೆಂಪೇಗೌಡರು ಇಡೀ ದೇಶದಲ್ಲೇ ಅತ್ಯುತ್ತಮ ನಗರವನ್ನು ಕಟ್ಟಿ ನಮಗಾಗಿ ಬಿಟ್ಟುಹೋಗಿದ್ದಾರೆ. ಅದರ ಅಸ್ಮಿತೆಗೆ ಧಕ್ಕೆ ಆಗದಂತೆ ನಗರವನ್ನು ಮುಂದಿನ ದಿನಗಳಲ್ಲಿ ಅಭಿವೃದ್ಧಿಪಡಿಸಲಾಗುವುದು' ಎಂದು ಹೇಳಿದರು.

ಗಿಡ ನೆಟ್ಟು ಆಚರಣೆ: ಬೆಂಗಳೂರು ವಿಶ್ವವಿದ್ಯಾಲಯ ವತಿಯಿಂದ ಭಾನುವಾರ ಕೆಂಪೇಗೌಡರ ಜಯಂತ್ಯುತ್ಸವಕ್ಕೆ ಕುಲಪತಿ ಪ್ರೊ. ವೇಣುಗೋಪಾಲ ಅವರು ಗಿಡ ನೆಡುವ ಮೂಲಕ ಚಾಲನೆ ನೀಡಿದರು. ಕುಲಸಚಿವ (ಮೌಲ್ಯಮಾಪನ) ಪ್ರೊ. ದೇವರಾಜ್, ಕೆಂಪೇಗೌಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಶೇಖ್ ಮಸ್ತಾನ್ ಹಾಗೂ ವಿಶ್ವವಿದ್ಯಾಲಯದ ಬೋಧಕ- ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಕನಸು ನನಸಾಗಿಸಲು ಬದ್ಧ: ಕೆ.ಆರ್. ಪುರ: 'ಕೆಂಪೇಗೌಡರು ಬೆಂಗಳೂರಿನ ಕುರಿತು ಹೊಂದಿದ್ದ ಕನಸುಗಳನ್ನು ಸಾಕಾರಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬದ್ಧವಾಗಿದ್ದು, ನಗರಕ್ಕೆ ಸೂಕ್ತ ಮೂಲಸೌಕರ್ಯಗಳನ್ನು ಸೃಷ್ಟಿಸಲು ಅಗತ್ಯ ಯೋಜನೆಗಳನ್ನು ಜಾರಿ ತರಲಿವೆ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಕೆ.ಆರ್. ಪುರದಲ್ಲಿ ಭಾನುವಾರ ಕೆಂಪೇಗೌಡ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ಕೆಂಪೇಗೌಡರು ಆಗಲೇ ರೈತರು ಹಾಗೂ ಬಡವರ ಕಲ್ಯಾಣಕ್ಕಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದರು' ಎಂದು ಸ್ಮರಿಸಿದರು.

ಕೆ.ಆರ್. ಪುರದ ವಿಧಾನಸಭಾ ಕ್ಷೇತ್ರದಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ನೇತೃತ್ವದಲ್ಲಿ ಕೋವಿಡ್ ಸೋಂಕಿನಿಂದ ನಿಧನರಾದವರ ಕುಟುಂಬದವರಿಗೆ ₹1 ಲಕ್ಷ ಸಹಾಯಧನ ಹಾಗೂ ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದವರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು.

ಕೇಂದ್ರ ಸಚಿವ ಸದಾನಂದಗೌಡ, ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಅರಣ್ಯ ಸಚಿವ ಅರವಿಂದ ಲಿಂಬಾವಳಿ, ಸಹಕಾರ ಸಚಿವ ಎಸ್. ಟಿ. ಸೋಮಶೇಖರ, ರಾಜ್ಯ ಮಹಿಳಾ ಬಿಜೆಪಿ ಅಧ್ಯಕ್ಷೆ ಗೀತಾ ವಿವೇಕಾನಂದ ಉಪಸ್ಥಿತರಿದ್ದರು.







1. ನಗರದ ಚಾಮರಾಜಪೇಟೆಯಲ್ಲಿರುವ ರಾಜ್ಯ ಒಕ್ಕಲಿಗರ ಒಕ್ಕೂಟದ ವತಿಯಿಂದ ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಸಿ.ವಿ.ದೇವರಾಜ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ನಂಜಾವಧೂತ ಸ್ವಾಮೀಜಿ, ಎಡಿಜಿಪಿ ಭಾಸ್ಕರ್ ರಾವ್ ಮತ್ತು ನಟ ಕಾರ್ತಿಕ್ ಜಯರಾಂ ಅವರು ಕೆಂಪೇಗೌಡ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು 2. ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ಅವರು ಸಚಿವ ಭೈರತಿ ಬಸವರಾಜ ನೇತೃತ್ವದಲ್ಲಿ ಬಡವರಿಗೆ ಕೋವಿಡ್ ಪರಿಹಾರದ ಚೆಕ್ ವಿತರಿಸಿದರು. ಲಕ್ಷ್ಮಣ ಸವದಿ, ಸಚಿವ ಬಸವರಾಜ ಬೊಮ್ಮಾಯಿ, ಆರ್. ಅಶೋಕ, ಎಸ್.ಟಿ.ಸೋಮಶೇಖರ್, ಅರವಿಂದ ಲಿಂಬಾವಳಿ ಇದ್ದರು. 3. ನಗರದ ಲಾಲ್‌ಬಾಗ್ ಎದುರು ಕೆಂಪೇಗೌಡರ ಪ್ರತಿಮೆ ಎದುರು ಮಹಿಳೆಯರು ಭಾನುವಾರ ಸೆಲ್ಫಿ ತೆಗೆದುಕೊಂಡರು ಪ್ರಜಾವಾಣಿ ಚಿತ್ರಗಳು

17 ಸಾವಿರ ಜನರಿಗೆ ತರಕಾರಿ ವಿತರಣೆ

ಕೆಂಗೇರಿ: ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೇರೋಹಳ್ಳಿ ವಾರ್ಡ್‌ನ ಬ್ಯಾಡರಹಳ್ಳಿ ಬಳಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 17 ಸಾವಿರಕ್ಕೂ ಹೆಚ್ಚು ಜನರಿಗೆ ಉಚಿತವಾಗಿ ತರಕಾರಿ ವಿತರಿಸುವ ಮೂಲಕ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಕೆಂಪೇಗೌಡರ ಜಯಂತ್ಯುತ್ಸವ ಆಚರಿಸಿದರು.

ರೈತರಿಂದ 600 ಟನ್ ತರಕಾರಿಯನ್ನು ಖರೀದಿಸಲಾಗಿತ್ತು.

'ಬೆಂಗಳೂರು ನಗರ ನಿರ್ಮಾಣದ ವೇಳೆ ಕೆಂಪೇಗೌಡರು ತೋರಿದ್ದ ದೂರದರ್ಶಿತ್ವ, ಪ್ರಸ್ತುತದಲ್ಲೂ ಅನುಕರಣೀಯ ಹಾಗೂ ಪ್ರಶಂಸನೀಯ' ಎಂದು ಸೋಮಶೇಖರ್ ಪ್ರಶಂಸಿಸಿದರು.

ಸುದ್ದಿ 2 ನಿಮಿಷ

ಶ್ರೀವಸಿಷ್ಠ ಸಹಕಾರಿ ಬ್ಯಾಂಕ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಶ್ರೀ ಗುರು ರಾಘವೇಂದ್ರ ಕೋ-ಅಪರೇಟಿವ್ ಸೊಸೈಟಿ ವಂಚನೆ ಪ್ರಕರಣದ ರೀತಿಯಲ್ಲೇ ನಗರದಲ್ಲಿ ಮತ್ತೊಂದು ಸಹಕಾರಿ ಬ್ಯಾಂಕ್‌ನ ವಂಚನೆ ಪ್ರಕರಣ ಬಯಲಾಗಿದೆ.

ಕೋಟ್ಯಂತರ ರೂಪಾಯಿ ಠೇವಣಿ ಇರಿಸಿಕೊಂಡು ವಂಚಿಸಿರುವ ಆರೋಪದಡಿ ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿರ್ದೇಶಕ ಆಡಳಿತ ಮಂಡಳಿ ವಿರುದ್ಧ ಹನುಮಂತನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬ್ಯಾಂಕ್‌ನಿಂದಾಗಿರುವ ವಂಚನೆ ಬಗ್ಗೆ ಮೂವರು ಠೇವಣಿದಾರರು ದೂರು ನೀಡಿದ್ದಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರೂ ಆಗಿರುವ ವೇಂಕಟನಾರಾಯಣ ಹಾಗೂ ಅವರ ಪುತ್ರ ಕೃಷ್ಣ ಪ್ರಸಾದ್ ವಂಚಿಸಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ. ಅವರಿಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಶ್ವೇಶ್ವರಯ್ಯ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷರೂ ಆಗಿದ್ದ ವೇಂಕಟನಾರಾಯಣ, ನಾಲ್ಕು ವರ್ಷಗಳ ಹಿಂದಷ್ಟೇ ಶ್ರೀ ವಸಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ಬ್ಯಾಂಕ್ ತೆರೆದಿದ್ದರು. ಹನುಮಂತನಗರದ ರಾಮಾಂಜನೇಯ ರಸ್ತೆಯಲ್ಲಿ ಇದರ ಕಚೇರಿ ಇದೆ. ಠೇವಣಿ ಇರಿಸಿದರೆ ಉತ್ತಮ ಲಾಭ ನೀಡುವುದಾಗಿ ವೇಂಕಟನಾರಾಯಣ ಭರವಸೆ ನೀಡಿದ್ದರು. ಅದನ್ನು ನಂಬಿದ್ದ ನಿವೃತ್ತ ನೌಕರರು, ವ್ಯಾಪಾರಿಗಳು, ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರು ಕೋಟ್ಯಂತರ ರೂಪಾಯಿ ಹಣ ಹೂಡಿಕೆ ಮಾಡಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದೂ ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬ್ಯಾಂಕ್ ಆಡಳಿತ ಮಂಡಳಿ ಸದಸ್ಯರು ಸಂಪರ್ಕಕ್ಕೆ ಸಿಗಲಿಲ್ಲ.

ಆಭರಣ ಮಾರುವಾಗ ಸಿಕ್ಕಿಬಿದ್ದ ಆರೋಪಿ



ಬೆಂಗಳೂರು: ಮನೆಗಳಲ್ಲಿ ಕಳವು ಮಾಡುತ್ತಿದ್ದ ಆರೋಪಿ ಸೈಯದ್ ರಫಿ (30) ಎಂಬಾತನನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

'ರಾಮನಗರದ ನಾಲಬಂದವಾಡಿ ರೈಲು ನಿಲ್ದಾಣ ಬಳಿ ನಿವಾಸಿ ರಫಿ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 7.60 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಸವೇಶ್ವರನಗರ, ಮಾಗಡಿ ರಸ್ತೆ ಹಾಗೂ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಕೃತ್ಯ ಎಸಗಿದ್ದ. ಕದ್ದ ಆಭರಣವನ್ನು ಮಾರಾಟ ಮಾಡಲು ಗೋಪಾಲಪುರ ಜಟಕಾ ತಂಗುದಾಣ ಬಳಿ ಬಂದಿದ್ದ.'

'ಕಡಿಮೆ ಬೆಲೆಗೆ ಆಭರಣ ಮಾರುವುದಾಗಿ ಹೇಳುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಯಿತು' ಎಂದೂ ಮೂಲಗಳು ತಿಳಿಸಿವೆ.

ಕೆಂಪೇಗೌಡರ ಜಯಂತ್ಯುತ್ಸವದಲ್ಲಿ ಡಿಸಿಎಂ ಭರವಸೆ

ವರ್ಷದಲ್ಲಿ ಕೆಂಪಾಪುರ ಸಮಗ್ರ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಮಾಗಡಿ: 'ನಾಡಪ್ರಭು ಕೆಂಪೇಗೌಡರ ವೀರ ಸಮಾಧಿ ಇರುವ ಕೆಂಪಾಪುರ ಗ್ರಾಮವನ್ನು ಒಂದು ವರ್ಷದೊಳಗೆ ಸಮಗ್ರವಾಗಿ ಅಭಿವೃದ್ಧಿಪಡಿಸಿ ಮುಂದಿನ ವರ್ಷದ ಜಯಂತಿಯನ್ನು ಇಲ್ಲಿಯೇ ಆಚರಿಸಲಾಗುವುದು' ಎಂದು ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಕೆಂಪೇಗೌಡರ 512ನೇ ಜಯಂತ್ಯುತ್ಸವದ ನಿಮಿತ್ತ ಕೆಂಪಾಪುರ ಗ್ರಾಮದಲ್ಲಿರುವ ಕೆಂಪೇಗೌಡರ ವೀರ ಸಮಾಧಿಗೆ ಭಾನುವಾರ ಪೂಜೆ ಸಲ್ಲಿಸಿ, ಕೆಂಪೇಗೌಡರ ಆತ್ಮಜ್ಯೋತಿ ರಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಮಸ್ತ ಕನ್ನಡಿಗರ ಪಾಲಿಗೆ ಕೆಂಪಾಪುರ ಶ್ರದ್ಧಾ ಕೇಂದ್ರ. ಹೀಗಾಗಿ ಸಮಾಧಿ ಸ್ಥಳ ಮತ್ತು ಕೆಂಪಾಪುರದ ಕೆರೆಯನ್ನು ಅಭಿವೃದ್ಧಿಪಡಿಸಲಾಗುವುದು. ಕೆಂಪೇಗೌಡರ ಕಾಲದ ಆಡಳಿತ ವೈಭವವನ್ನು ಮರುಸೃಷ್ಟಿ ಮಾಡಿ ಇಡೀ ಗ್ರಾಮವನ್ನು ಐತಿಹಾಸಿಕವಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಯೋಜನೆ ಜಾರಿ ಹಂತದಲ್ಲಿದ್ದು, ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದೆ.

ಪರಿಹಾರ: ಕೆಂಪಾಪುರದಲ್ಲಿ ಸಮಾಧಿ ಅಭಿವೃದ್ಧಿ ಕಾಮಗಾರಿಯಿಂದಾಗಿ ಭೂಮಿ ಕಳೆದುಕೊಳ್ಳಲಿರುವ ರೈತಾಪಿ ವರ್ಗದವರಿಗೆ ಸೂಕ್ತ ಪರಿಹಾರ ನೀಡುವುದಾಗಿ ತಿಳಿಸಿದರು.

ಪಟ್ಟಣದಲ್ಲಿ 19 ವರ್ಷಗಳ ಹಿಂದೆ ಕೆಂಪೇಗೌಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಎಂ. ಕೃಷ್ಣಮೂರ್ತಿ ಪ್ರತಿಷ್ಠಾಪಿಸಿರುವ ಕೆಂಪೇಗೌಡರ ಪುತ್ಥಳಿಯನ್ನು ಅಧಿಕೃತವಾಗಿ ಸರ್ಕಾರಿ ಗೆಜೆಟ್‌ನಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಮುಂದಿನ ವರ್ಷ ಪುತ್ಥಳಿ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮುಂದೆ ನಿರ್ಮಾಣ ಆಗುತ್ತಿರುವ ಸೆಂಟ್ರಲ್ ಪಾರ್ಕ್‌ನಲ್ಲಿ ಕೆಂಪೇಗೌಡರ 108 ಅಡಿ ಎತ್ತರದ ಲೋಹದ ಪ್ರತಿಮೆಯನ್ನು ಮುಂಬರುವ ಫೆಬ್ರುವರಿ-ಮಾರ್ಚ್‌ನಲ್ಲಿ ಲೋಕಾರ್ಪಣೆ ಮಾಡಲಾಗುವುದು. ಕೋವಿಡ್‌ನಿಂದ ವಿಳಂಬವಾಗಿದ್ದ ಪ್ರತಿಮೆ ನಿರ್ಮಾಣ ಕಾಮಗಾರಿ ಪುನಃ ಭರದಿಂದ ಸಾಗಿದೆ. ನೋಯಿಡಾದಲ್ಲಿ ಪ್ರತಿಮೆ ಸಿದ್ಧವಾಗುತ್ತಿದೆ ಎಂದು ಡಿಸಿಎಂ ಅಶ್ವತ್ಥನಾರಾಯಣ ತಿಳಿಸಿದರು.

ಕೆಂಪೇಗೌಡರ ವಂಶಜರ ಕಾಲದಲ್ಲಿ ನಿರ್ಮಾಣವಾಗಿ ಶಿಥಿಲವಾಗಿರುವ ಸ್ಮಾರಕಗಳನ್ನು ಜೀರ್ಣೋದ್ಧಾರ ಮಾಡಲಾಗುವುದು. ಮುಂದಿನ ಪೀಳಿಗೆಗೆ ಕೆಂಪೇಗೌಡರ ಆದರ್ಶಮಯ ಆಡಳಿತದ ಮಹತ್ವವನ್ನು ತಿಳಿಸುವ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ಸುಸ್ಥಿರ ಅಭಿವೃದ್ಧಿಯ ಗುರಿ: ನೀತಿ ಆಯೋಗದ ತಂಡ ರಾಜ್ಯಕ್ಕೆ ಇಂದು

ಬೆಂಗಳೂರು: ಸುಸ್ಥಿರ ಅಭಿವೃದ್ಧಿಯ ಗುರಿಗಳು (ಎಸ್‌ಡಿಜಿ) ಸೂಚ್ಯಂಕದ ಬಗ್ಗೆ ಚರ್ಚಿಸಲು ನೀತಿ ಆಯೋಗದ ಸಲಹೆಗಾರರಾದ ಸಂಯುಕ್ತ ಸಮದ್ದಾರ್ ನೇತೃತ್ವದ ತಂಡ ಸೋಮವಾರ (ಜೂನ್ 28) ರಾಜ್ಯಕ್ಕೆ ಭೇಟಿ ನೀಡಲಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅಧ್ಯಕ್ಷತೆಯಲ್ಲಿ ಎಲ್ಲ ಇಲಾಖೆಯ ಕಾರ್ಯದರ್ಶಿಗಳ ಸಭೆ ಆಯೋಜಿಸಲಾಗಿದೆ.

ಕರ್ನಾಟಕ ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚ್ಯಂಕ, ಗುರಿ ತಲುಪಲು ತೆಗೆದುಕೊಂಡ ಕ್ರಮಗಳು ಮತ್ತು ಇತರ ರಾಜ್ಯಗಳು ಈ ನಿಟ್ಟಿನಲ್ಲಿ ಸಾಧಿಸಿರುವ ಪ್ರಗತಿಯ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ. ಬಡತನ ನಿರ್ಮೂಲನವೂ ಸೇರಿದಂತೆ ಕೇಂದ್ರ ಸರ್ಕಾರ ರೂಪಿಸಿದ ಕೆಲವು ಕಾರ್ಯತಂತ್ರಗಳನ್ನು ನೀತಿ ಆಯೋಗದ ತಂಡ ಸಭೆಯಲ್ಲಿ ಹಂಚಿಕೊಳ್ಳಲಿದೆ.

ನೀತಿ ಆಯೋಗ ಅಭಿವೃದ್ಧಿಪಡಿಸಿದ 2020-21ನೇ ಸಾಲಿನ ಸುಸ್ಥಿರ ಅಭಿವೃದ್ಧಿ ಗುರಿ ಸೂಚ್ಯಂಕದಲ್ಲಿ 72 ಅಂಕ ಗಳಿಸಿ ಕರ್ನಾಟಕ ನಾಲ್ಕನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 6 ಅಂಕ ಹೆಚ್ಚು ಗಳಿಸಿದೆ. 75 ಅಂಕ ಗಳಿಸಿ ಕೇರಳ ಮೊದಲ ಸ್ಥಾನದಲ್ಲಿದೆ. ಹಿಮಾಚಲ ಪ್ರದೇಶ ಮತ್ತು ತಮಿಳುನಾಡು ತಲಾ 74 ಅಂಕ ಪಡೆದು ಎರಡನೇ ಸ್ಥಾನದಲ್ಲಿದೆ. ಕರ್ನಾಟಕ, ಆಂಧ್ರಪ್ರದೇಶ, ಗೋವಾ, ಉತ್ತರಾಖಂಡ್ (ತಲಾ 72) ಮೂರನೇ ಸ್ಥಾನದಲ್ಲಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಗುರಿ ತಲುಪಲು ರಾಜ್ಯ ಸರ್ಕಾರ ಪ್ರಯತ್ನ ಮುಂದುವರಿಸಿದೆ, ಹಿಂದಿನ ವರ್ಷಗಳಿಗೆ ಹೋಲಿಸಿದರೆ 2020–21ರಲ್ಲಿ ರಾಜ್ಯ 9 ಗುರಿಗಳಲ್ಲಿ ಸುಧಾರಣೆ ಕಂಡಿದೆ. ಇದೇ 29 ರಂದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಸಂಬಂಧಿಸಿದ ಸಭೆ ನಡೆಯಲಿದ್ದು, ಸಭೆಯಲ್ಲಿ ಯೋಜನಾ ಮಂಡಳಿಯ ಉಪಾಧ್ಯಕ್ಷ ಬಿ.ಜೆ. ಪುಟ್ಟಸ್ವಾಮಿ, ಯೋಜನೆ, ಸಾಂಖ್ಯಿಕ ಮತ್ತು ಕಾರ್ಯಕ್ರಮಗಳ ಸಚಿವ ಕೆ.ಸಿ.ನಾರಾಯಣ ಗೌಡ ಭಾಗವಹಿಸಲಿದ್ದಾರೆ. ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಸಂಬಂಧಿಸಿದಂತೆ ರಾಜ್ಯದ ಸಾಧನೆ ಕುರಿತು ಮುಖ್ಯಮಂತ್ರಿ ಕಿರುಹೊತ್ತಿಗೆ ಬಿಡುಗಡೆ ಮಾಡಲಿದ್ದಾರೆ.

ನಗರದಲ್ಲಿ ಇಂದು

ಕೋವಿಡ್ ಲಸಿಕಾ ಅಭಿಯಾನ: ಆಯೋಜನೆ–ದಯಾನಂದ ಸಾಗರ್ ಇನ್‌ಸ್ಟಿಟ್ಯೂಟ್, ಸಹಕಾರ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ–ಡಿಎಸ್‌ಬಿಎ ಕ್ಯಾಂಪಸ್, ಕನಕಪುರ ಮುಖ್ಯರಸ್ತೆ, ಆರ್ಟ್ ಆಫ್ ಲಿವಿಂಗ್ ಎದುರು, ಬೆಳಿಗ್ಗೆ 10.30

'ಬೆಂಗಳೂರಿನ ಹವಾಮಾನ ಕ್ರಿಯಾ ಯೋಜನೆ' ಕುರಿತು ವೆಬಿನಾರ್ ಸರಣಿ: ಭಾಗವಹಿಸುವವರು–ಐಎಎಸ್ ಅಧಿಕಾರಿ ವಂದಿತಾ ಶರ್ಮಾ, ಪ್ರೇಮ್ ಚಂದಾವರ್‌ಕರ್, ಜಾನಕಿ ನಾಯರ್, ಆಯೋಜನೆ–ಎನ್ವಿರಾನ್‌ಮೆಂಟಲ್ ಸಪೋರ್ಟ್ ಗ್ರೂಪ್ (ಇಎಸ್‌ಜಿ), ಸಂಜೆ 6

'ವಿದ್ಯಾರ್ಥಿಗಳಿಗೆ ಒಂದು ತಿಂಗಳಿನಲ್ಲಿ ಎರಡು ಸೆಮಿಸ್ಟರ್ ಪರೀಕ್ಷೆ ಬರೆಸುವುದು ಎಷ್ಟು ವೈಜ್ಞಾನಿಕ?' ಕುರಿತು ಸಂವಾದ: ಮಾತನಾಡುವವರು–ಚಿದಾನಂದ ಗೌಡ, ಎನ್.ಪ್ರಭುದೇವ, ಆರ್.ಎನ್. ಶ್ರೀನಿವಾಸ ಗೌಡ, ಅಲ್ಲಮಪ್ರಭು ಬೆಟ್ಟದೂರು, ವಿ.ಎನ್.ರಾಜಶೇಖರ್, ಆಯೋಜನೆ–ಎಐಡಿಎಸ್‌ಒ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ನೀರು ಪೂರೈಕೆಯಲ್ಲಿ ವ್ಯತ್ಯಯ 30ರಿಂದ

ಬೆಂಗಳೂರು: ನೀರು ಸರಬರಾಜು ಕೊಳವೆಯ ಮುಖ್ಯ ಮಾರ್ಗದಲ್ಲಿ ಸೋರಿಕೆಯಾಗುತ್ತಿದ್ದು, ತುರ್ತು ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಬೇಕಾಗಿದ್ದರಿಂದ ಇದೇ 30 ಮತ್ತು ಜುಲೈ 1ರಂದು ನಗರದ ವಿವಿಧ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಹೇಳಿದೆ.

ಗಣಪತಿ ನಗರ, ಎಂ.ಇ.ಐ ಕಾಲೊನಿ, ಲಕ್ಷ್ಮಿದೇವಿ ನಗರ, ಬಿಎಚ್‌ಸಿಎಸ್ ಬಡಾವಣೆ, ಹ್ಯಾಪಿ ವ್ಯಾಲಿ, ಬಿಡಿಎ ಬಡಾವಣೆಯ ಕೆಲವು ಭಾಗ, ಉತ್ತರಹಳ್ಳಿ, ಬೆಳ್ಳಂದೂರು, ಇಬ್ಬಲೂರು, ಕೋರಮಂಗಲ, ಮಿಲಿಟರಿ ಕ್ಯಾಂಪಸ್, ಎಸಿಎಸ್ ಕೇಂದ್ರ, ಸಿದ್ದಾರ್ಥ ಕಾಲೊನಿ,ವೆಂಕಟಪುರ, ಟೀಚರ್ಸ್ ಕಾಲೊನಿ, ಜಕ್ಕಸಂದ್ರ, ಜಯನಗರ, ಅರಸು ಕಾಲೊನಿ, ತಿಲಕ್ ನಗರ, ಎನ್.ಇ.ಐ ಬಡಾವಣೆ, ಈಸ್ಟ್ ಎಂಡ್ ಎ ಮತ್ತು ಬಿ ಮುಖ್ಯರಸ್ತೆಗಳು.

ಕೃಷ್ಣಪ್ಪ ಗಾರ್ಡನ್, ಬಿ.ಎಚ್.ಇ.ಎಲ್ ಬಡಾವಣೆ, ಬಿಟಿಎಂ ಬಡಾವಣೆ 2ನೇ ಹಂತ, ಮೈಕೋ ಬಡಾವಣೆ, ಎನ್.ಎಸ್. ಪಾಳ್ಯ, ಗುರಪ್ಪನ ಪಾಳ್ಯ, ಸದ್ದುಗುಂಟೆ ಪಾಳ್ಯ, ಬಿಸ್ಮಿಲ್ಲಾ ನಗರ, ಜೆ.ಪಿ. ನಗರ 4ರಿಂದ 8 ನೇ ಹಂತ, ಪುಟ್ಟೇನಹಳ್ಳಿ, ಜರಗನ ಹಳ್ಳಿ, ಆರ್‌ಬಿಐ ಬಡಾವಣೆ, ಪಾಂಡುರಂಗ ನಗರ, ಅರಕೆರೆ, ದೊರೆಸಾನಿ ಪಾಳ್ಯ, ಕೊತ್ತನೂರು ದಿಣ್ಣೆ, ವೆಂಕಟಾದ್ರಿ ಬಡಾವಣೆ, ಚುಂಚಘಟ್ಟ.

ಕೋಣನಕುಂಟೆ, ಎಸ್.ಬಿ.ಎಂ. ಬಡಾವಣೆ, ಸುಪ್ರೀಂ ರೆಸಿಡೆನ್ಸಿ ಬಡಾವಣೆ, ಲೇಕ್ ಸಿಟಿ, ರೋಟರಿ ನಗರ, ಕೋಡಿಚಿಕ್ಕನಹಳ್ಳಿ, ಎಚ್.ಎಸ್.ಆರ್. ಬಡಾವಣೆ 1 ರಿಂದ 7 ನೇ ಸೆಕ್ಟರ್, ಅಗರ, ಮಂಗಮ್ಮನ ಪಾಳ್ಯ, ಮದಿನಾ ನಗರ, ಐಟಿಐ ಬಡಾವಣೆ, ಹೊಸಪಾಳ್ಯ, ಬಂಡೆ ಪಾಳ್ಯ, ಚಂದ್ರ ಬಡಾವಣೆ, ಬಿಇಎಂಎಲ್ ಬಡಾವಣೆ 1 ರಿಂದ 5 ನೇ ಹಂತ.

ನಾಗರಭಾವಿ, ಅನ್ನಪೂರ್ಣೇಶ್ವರಿ ನಗರ, ವಿಶ್ವೇಶ್ವರಯ್ಯ ಬಡಾವಣೆ, ಬಿಇಎಲ್ ಬಡಾವಣೆ, ಮಲ್ಲತ್ತಹಳ್ಳಿ, ರೈಲ್ವೆ ಬಡಾವಣೆ, ಉಲ್ಲಾಳ, ಡಿ ಗ್ರೂಪ್ ಬಡಾವಣೆ, ಬ್ಯಾಡರಹಳ್ಳಿ, ರಾಜಾಜಿನಗರ, ಮಹಾಲಕ್ಷ್ಮಿ ಬಡಾವಣೆ, ರಾಜಾಜಿನಗರ 6ನೇ ಬ್ಲಾಕ್, ನಂದಿನಿ ಬಡಾವಣೆ, ಮಂಜುನಾಥನಗರ, ಬಸವೇಶ್ವರನಗರ.

ಗೊರಗುಂಟೆ ಪಾಳ್ಯ, ಶಂಕರನಗರ, ಶಂಕರಮಠ, ಪ್ರಕಾಶ್ ನಗರ, ಕುರುಬರಹಳ್ಳಿ, ಕಮಲಾನಗರ, ಕಾಮಾಕ್ಷಿಪಾಳ್ಯ, ಶಿವನಗರ, ಕೆ.ಎಚ್.ಬಿ. ಕಾಲೊನಿ, ಅಗ್ರಹಾರ ದಾಸರಹಳ್ಳಿ, ಪಾಪಯ್ಯ ಗಾರ್ಡನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಪ್ರವೇಶದ್ವಾರ ನಿರ್ಬಂಧ • ಸ್ಮಾರ್ಟ್‌ಸಿಟಿ ಯೋಜನೆ ಕಾಮಗಾರಿಗೆ ತಡೆ

ತೋಟಗಾರಿಕೆ ಇಲಾಖೆ–ಸೆಂಚುರಿ ಕ್ಲಬ್ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿ ಸಂಬಂಧ ತೋಟಗಾರಿಕೆ ಇಲಾಖೆ ಹಾಗೂ ಸೆಂಚುರಿ ಕ್ಲಬ್ ನಡುವೆ ಜಟಾಪಟಿ ಶುರುವಾಗಿದೆ.

ಉದ್ಯಾನಕ್ಕೆ ಹೊಂದಿಕೊಂಡಿರುವ ಸೆಂಚುರಿ ಕ್ಲಬ್‌ಗೆ ಎರಡು ಪ್ರವೇಶದ್ವಾರಗಳಿದ್ದವು. ಕೆ.ಆರ್. ವೃತ್ತದ ಬಳಿ ಇರುವ ದ್ವಾರವನ್ನು ಪ್ರಧಾನವಾಗಿ ಬಳಸಲಾಗುತ್ತಿದೆ. ಕೇಂದ್ರೀಯ ಗ್ರಂಥಾಲಯದ ಬಳಿ ಇದ್ದ ಮತ್ತೊಂದು ದ್ವಾರವನ್ನು ತೋಟಗಾರಿಕೆ ಇಲಾಖೆ ಕಳೆದ ವರ್ಷ ನಿರ್ಬಂಧಿಸಿತ್ತು.

'ಮುಚ್ಚಲ್ಪಟ್ಟ ದ್ವಾರದ ಬಳಿ ಇದ್ದ ಜಾಗವು ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಸೇರಿರುವುದರಿಂದ ಸ್ಮಾರ್ಟ್‌ಸಿಟಿ ಯೋಜನೆಯಡಿ ಅಲ್ಲಿ ಕೆಲಸ ಆರಂಭಿಸಲಾಗಿತ್ತು. ಈ ವೇಳೆ ಕ್ಲಬ್‌ನ ಪದಾಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ' ಎಂದು ತೋಟಗಾರಿಕೆ ಇಲಾಖೆ ದೂರಿದೆ.

'ಒಂದು ವರ್ಷದ ಹಿಂದೆ ಈ ದ್ವಾರವನ್ನು ಮುಚ್ಚಲಾಗಿತ್ತು. ಹಿರಿಯ ಅಧಿಕಾರಿಗಳು ಆ ಜಾಗದಲ್ಲಿ ಸಸಿಗಳನ್ನು ನೆಡಲು ಸೂಚಿಸಿದ್ದರು. ಅದರಂತೆ ಸ್ಮಾರ್ಟ್‌ಸಿಟಿ ಯೋಜನೆಯಡಿ ಶನಿವಾರ ಕಾಮಗಾರಿ ಶುರುವಾಗಿತ್ತು. ಈ ವೇಳೆ ಕ್ಲಬ್‌ನ ಪದಾಧಿಕಾರಿಗಳು ಬಂದು ತಡೆ ನೀಡಿದರು. ಕೆಲ ದಿನಗಳವರೆಗೆ ಕಾಲಾವಕಾಶ ಕೇಳಿದ್ದಾರೆ' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್.ಟಿ.ಬಾಲಕೃಷ್ಣ ತಿಳಿಸಿದರು.

'ಹಲವು ವರ್ಷಗಳಿಂದ ಈ ದ್ವಾರವನ್ನು ಕ್ಲಬ್ ಬಳಸುತ್ತಿತ್ತು. ಕಳೆದ ವರ್ಷ ಕೋವಿಡ್ ಇದ್ದ ಕಾರಣದಿಂದ ಪ್ರವೇಶ ನಿರ್ಬಂಧಿಸಿದ್ದರು. ಬಳಿಕ ನಾವೇ ದ್ವಾರ ತೆರೆದಾಗ ಬ್ಯಾರಿಕೇಡ್‌ಗಳನ್ನು ಹಾಕಿದ್ದರು. ಈ ಜಾಗದಲ್ಲಿ ಪ್ರವೇಶಕ್ಕೆ ಅನುಮತಿ ಕೋರಿ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ ಅವರಲ್ಲಿ ಮನವಿ ಮಾಡಿದ್ದೆವು. ಆದರೆ, ಏಕಾಏಕಿ ಒಂದು ನೋಟಿಸ್ ಸಹ ನೀಡದೆ, ದ್ವಾರದ ರಸ್ತೆ ಅಗೆದಿದ್ದಾರೆ' ಎಂದು ಸೆಂಚುರಿ ಕ್ಲಬ್‌ನ ಗೌರವ ಕಾರ್ಯದರ್ಶಿ ಇ.ಜಿ.ಜೈದೀಪ್ ಆಕ್ಷೇಪ ವ್ಯಕ್ತಪಡಿಸಿದರು.

ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ಅಧ್ಯಕ್ಷ ಎಸ್.ಉಮೇಶ್, 'ಸೆಂಚುರಿ ಕ್ಲಬ್‌ನವರು ಸ್ಮಾರ್ಟ್‌ಸಿಟಿ ಯೋಜನೆಯ ಕೆಲಸಗಳಿಗೆ ಅಡ್ಡಿಪಡಿಸಿದರೆ ಕಾನೂನು ಹೋರಾಟ ಮಾಡಲಾಗುವುದು ಹಾಗೂ ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಸಿದರು.



ಉದ್ಯಾನದಲ್ಲಿ ಸೆಂಚುರಿ ಕ್ಲಬ್‌ನ ದ್ವಾರದ ಬಳಿ ಕಾಮಗಾರಿ ಆರಂಭಿಸಿರುವುದು

ಮಾಜಿ ಕಾರ್ಪೊರೇಟರ್ ರೇಖಾ ಹತ್ಯೆ; ಪತಿಯ ಅಕ್ಕ ಬಂಧನ

ಬೆಂಗಳೂರು: ಮಾಜಿ ಕಾರ್ಪೊರೇಟರ್ ಬಿಜೆಪಿಯ ಆರ್. ರೇಖಾ ಕದಿರೇಶ್ (43) ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದಡಿ, ಅವರ ಪತಿಯ ಅಕ್ಕ ಮಾಲಾ ಹಾಗೂ ಆಕೆಯ ಮಗ ಅರುಳ್‌ನನ್ನು ಪಶ್ಚಿಮ ವಿಭಾಗದ ಪೊಲೀಸರು ಭಾನುವಾರ ರಾತ್ರಿ ಬಂಧಿಸಿದ್ದಾರೆ.

'ಬಂಧಿತ ಆರೋಪಿಗಳಾದ ಪೀಟರ್ ಹಾಗೂ ಸೂರ್ಯ ಹತ್ಯೆ ಬಗ್ಗೆ ಕೆಲ ಮಾಹಿತಿ ಬಾಯ್ಬಿಟ್ಟಿದ್ದರು. ಅದರನ್ವಯ ಕದಿರೇಶ್ ಅಕ್ಕ ಮಾಲಾ, ಆಕೆಯ ಮಗ ಅರುಳ್, ಸೊಸೆ ಹಾಗೂ ಸ್ಥಳೀಯ ನಿವಾಸಿಗಳಾದ ಡಿಸೋಜಾ, ರಾಜೇಶ್ ನನ್ನು ವಶಕ್ಕೆ ಪಡೆಯಲಾಗಿತ್ತು. ವಿಚಾರಣೆ ನಡೆಸಿದಾಗ, ಕೃತ್ಯದಲ್ಲಿ ಮಾಲಾ ಹಾಗೂ ಅರುಳ್ ಪಾತ್ರವಿರುವುದಕ್ಕೆ ಪುರಾವೆಗಳು ಸಿಕ್ಕವು. ಹೀಗಾಗಿ, ಅವರಿಬ್ಬರನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ತಮಿಳುನಾಡಿನ ಮಾಲಾ ಹಾಗೂ ಕದಿರೇಶ್, ಕುಟುಂಬ ಸಮೇತ ಬೆಂಗಳೂರಿಗೆ ಬಂದಿದ್ದರು. ಸ್ಥಳೀಯ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿದ್ದ ಆರೋಪದಡಿ ಮಾಲಾ ಹಾಗೂ ಕದಿರೇಶ್ ಜೈಲು ಸೇರಿದ್ದರು. ಇದೇ ಪ್ರಕರಣದಲ್ಲೇ ಕದಿರೇಶ್ ಹೆಸರು ರೌಡಿ ಪಟ್ಟಿಗೆ ಸೇರಿತ್ತು. ಅದಾದ ಕೆಲ ವರ್ಷಗಳ ನಂತರ ಕದಿರೇಶ್ ರಾಜಕೀಯ ಪ್ರವೇಶಿಸಿದ್ದರು. ಎರಡನೇ ಪತ್ನಿ ರೇಖಾ ಅವರನ್ನು ಕಾರ್ಪೊರೇಟರ್ ಆಗಿ ಮಾಡಿದ್ದರು.'

'ಆಡಳಿತ ಹಾಗೂ ಉಳಿದ ವ್ಯವಹಾರವನ್ನೆಲ್ಲ ನೋಡಿಕೊಳ್ಳುತ್ತಿದ್ದ ಕದಿರೇಶ್, ಅಕ್ಕ, ಕುಟುಂಬದವರಿಗೆ ಆರ್ಥಿಕವಾಗಿ ಸಹಾಯ ಮಾಡುತ್ತಿದ್ದರು. ಕದಿರೇಶ್ ಕೊಲೆಯಾದ ನಂತರ ರೇಖಾ, ಪತಿ ಮನೆಯವರನ್ನು ದೂರವಿಟ್ಟಿದ್ದರು. ಕದಿರೇಶ್ ಆಸ್ತಿಯನ್ನು ರೇಖಾ ಮಾತ್ರ ಅನುಭವಿಸುತ್ತಿದ್ದಾರೆಂಬ ಕಾರಣಕ್ಕೆ ಮಾಲಾ ಗಲಾಟೆ ಮಾಡುತ್ತಿದ್ದಳು. ಇತ್ತೀಚೆಗೆ ಮಾಲಾ ಸಂಬಂಧಿಯೊಬ್ಬರ ಕಪಾಳಕ್ಕೆ ರೇಖಾ ಹೊಡೆದಿದ್ದರು. ಇದು ವೈಷಮ್ಯಕ್ಕೆ ಕಾರಣವಾಗಿತ್ತು. ಈ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದೂ ಮೂಲಗಳು ಹೇಳಿವೆ.

'ರೇಖಾ ಅವರನ್ನು ಮುಗಿಸಲು ಯೋಚಿಸಿದ್ದ ಕುಟುಂಬದವರು, ಪ್ರಮುಖ ಆರೋಪಿಗಳಾದ ಪೀಟರ್, ಸೂರ್ಯ, ಸ್ಟೀಫನ್ ಹಾಗೂ ಇತರರಿಗೆ ಸಹಕಾರ ನೀಡಿದ್ದರೆಂಬ ಮಾಹಿತಿ ಲಭ್ಯವಾಗಿದೆ' ಎಂದೂ ಮೂಲಗಳು ತಿಳಿಸಿವೆ.

ನಿರಾಶ್ರಿತರ ಕೇಂದ್ರದಲ್ಲಿ ಲೈಂಗಿಕ ದೌರ್ಜನ್ಯ; ಬಂಧನ



ಚಂದ್ರಪ್ಪ

ಬೆಂಗಳೂರು: ಸುಮನಹಳ್ಳಿ ನಿರಾಶ್ರಿತರ ಕೇಂದ್ರದಲ್ಲಿ ಮಹಿಳಾ ನೌಕರರೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ, ಅದೇ ಕೇಂದ್ರದ ಅಧಿಕಾರಿ ಚಂದ್ರಪ್ಪ (52) ಅವರನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಮಹಿಳೆ ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಂಡು ಚಂದ್ರಪ್ಪ ಅವರನ್ನು ಬಂಧಿಸಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳೆ ಕೆಲಸ ಮಾಡುವ ಸ್ಥಳಕ್ಕೆ ಹೋಗುತ್ತಿದ್ದ ಚಂದ್ರಪ್ಪ, ಅಸಭ್ಯವಾಗಿ ವರ್ತಿಸುತ್ತಿದ್ದರು. ಅಂಗಾಂಗಗಳನ್ನು ಮುಟ್ಟಿ ದೌರ್ಜನ್ಯ ಎಸಗುತ್ತಿದ್ದರು. ಈ ಸಂಗತಿ ದೂರಿನಲ್ಲಿದೆ.'

'ನನ್ನ ಜೊತೆ ಮಲಗು' ಎಂದು ಮಹಿಳೆಯನ್ನು ಪೀಡಿಸುತ್ತಿದ್ದರು. ತನ್ನ ಜೊತೆ ಸಹಕರಿಸದಿದ್ದರೆ ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

ಕಾಶ್ಮೀರ: ವಿಶೇಷ ಪೊಲೀಸ್ ಅಧಿಕಾರಿ, ಪತ್ನಿ ಗುಂಡಿಟ್ಟು ಕೊಲೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಜಿಲ್ಲೆಯ ಅವಂತಿಪುರದಲ್ಲಿ ಭಾನುವಾರ ರಾತ್ರಿ ಉಗ್ರರು ವಿಶೇಷ ಪೊಲೀಸ್ ಅಧಿಕಾರಿ ಫಯಾಜ್ ಅಹ್ಮದ್ ಮತ್ತು ಅವರ ಪತ್ನಿ ರಾಜಾ ಬೇಗಂ ಅವರನ್ನು ಗುಂಡಿಟ್ಟು ಕೊಂದಿದ್ದು, ಅವರ ಪುತ್ರಿ ರಫಿಯಾ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವಂತಿಪುರದ ಹರಿಪರಿಗಂ ಪ್ರದೇಶದಲ್ಲಿನ ಫಯಾಜ್ ಅವರ ಮನೆ ಮೇಲೆಯೇ ರಾತ್ರಿ 11 ಗಂಟೆ ವೇಳೆಗೆ ದಾಳಿ ನಡೆಸಿದ ಉಗ್ರರು ಗುಂಡಿನ ಮಳೆಗರೆದರು.

ನಿಧನ ವಾರ್ತೆ

ಡಾ. ಉದಯಕುಮಾರ್



ಬೆಂಗಳೂರು: ಹಿರಿಯ ವಿಜ್ಞಾನಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಸ್ಯಶರೀರವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದ ಡಾ.ಎಂ. ಉದಯಕುಮಾರ್ (75) ಶನಿವಾರ ನಿಧನರಾದರು.

ಬಹುದಿನಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು.

ಆಂಧ್ರಪ್ರದೇಶದ ಗುಂಟೂರಿನ ಡಾ.ಉದಯಕುಮಾರ್, ರಷ್ಯಾದಲ್ಲಿ ಉನ್ನತ ವ್ಯಾಸಂಗ ಮಾಡಿದ್ದರು. ಎಂಎಸ್ಸಿ ಹಾಗೂ ಪಿಎಚ್.ಡಿ ಪದವಿ ಪಡೆದಿದ್ದರು. 1973ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸೇರಿದ್ದರು.

ಅಂತ್ಯಕ್ರಿಯೆ ಹೆಬ್ಬಾಳದಲ್ಲಿ ನೆರವೇರಿತು. ಅವರಿಗೆ ಪತ್ನಿ ನಿವೃತ್ತ ಪ್ರಾಧ್ಯಾಪಕಿ ಪ್ರೊ. ನೀರಜಾ, ಪುತ್ರಿ ಡಾ.ಸೌಮ್ಯಾ ಇದ್ದಾರೆ.

ನಟರಾಜನ್



ಬೆಂಗಳೂರು: ಮಲ್ಲೇಶ್ವರದ ಗಂಗಮ್ಮ ದೇವಸ್ಥಾನದ ಅಧ್ಯಕ್ಷ ಕೆ.ನಟರಾಜನ್ (79) ಅನಾರೋಗ್ಯದಿಂದ ನಗರದ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಮಲ್ಲೇಶ್ವರದ ಕೋದಂಡರಾಮಪುರದಲ್ಲಿ ವಾಸವಿದ್ದ ಇವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಸೋಮವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಳೇ ಅರ್ಜಿಗಳನ್ನು ರದ್ದುಪಡಿಸಿ ಹೊಸ ಅರ್ಜಿ ಕರೆದ ರಾಜೀವ್ ಗಾಂಧಿ ವಸತಿ ನಿಗಮ

ಬಡವರ ವಸತಿ ಕನಸಿಗೆ ಕವಿದಿದೆ ಕಾರ್ಮೋಡ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಒಂದು ಲಕ್ಷ ಬಹುಮಹಡಿ ವಸತಿ ನಿರ್ಮಾಣ ಯೋಜನೆಯಡಿ ಅರ್ಜಿ ಹಾಕಿದ್ದ ಬಡವರ ಹೊಸ ಮನೆ ವಾಸದ ಆಸೆಗೆ ರಾಜೀವ್ ಗಾಂಧಿ ವಸತಿ ನಿಗಮ ತಣ್ಣೀರು ಎರಚಿದೆ. ಈಗಾಗಲೇ ಸಲ್ಲಿಕೆಯಾಗಿರುವ ಎಲ್ಲ ಅರ್ಜಿಗಳನ್ನು ನಿಗಮವು ರದ್ದು ಮಾಡಿರುವುದು ನಿರ್ವಸತಿಗರ ಸ್ವಂತ ಸೂರಿನ ಕನಸಿಗೆ ಕಾರ್ಮೋಡ ಕವಿದಂತಾಗಿದೆ.

ನಗರದಲ್ಲಿ ಬಹುಮಹಡಿ ವಸತಿ ಸಮುಚ್ಚಯ ನಿರ್ಮಿಸಿ ಬಡವರಿಗೆ ಮನೆ ಹಂಚಿಕೆ ಮಾಡುವ ಯೋಜನೆಯನ್ನು ರಾಜ್ಯ ಸರ್ಕಾರ ಆರಂಭಿಸಿ ನಾಲ್ಕೂವರೆ ವರ್ಷಗಳೇ ಕಳೆದಿವೆ. ಈ ಯೋಜನೆ ಆರಂಭದ ಹಿಂದೆ ದೊಡ್ಡ ಹೋರಾಟವೇ ನಡೆದಿತ್ತು. ಭೂಕಬಳಿಕೆ ಸಂಬಂಧ ಎ.ಟಿ. ರಾಮಸ್ವಾಮಿ ವರದಿ ಆಧರಿಸಿ ವಶಕ್ಕೆ ಪಡೆದ ಆಸ್ತಿಗಳನ್ನು ಸರ್ಕಾರ ಹರಾಜು ಮಾಡಲು ಮುಂದಾಗಿತ್ತು. ಅದರ ವಿರುದ್ಧ ಸಾಮಾಜಿಕ ಸಂಘಟನೆಗಳು ನಿರಂತರವಾಗಿ ಹೋರಾಟ ನಡೆಸಿದ್ದವು. ಸ್ವಾಧೀನಪಡಿಸಿಕೊಂಡ ಜಮೀನನ್ನು ನಿವೇಶನಗಳಾಗಿ ಅಭಿವೃದ್ಧಿಪಡಿಸಿ ವಸತಿರಹಿತರಿಗೆ ಕಡಿಮೆ ದರದಲ್ಲಿ ಹಂಚಬೇಕು ಎಂಬ ಒತ್ತಾಯ ಮಾಡಿದವು. ನಿವೇಶನಗಳನ್ನು ಹಂಚಿಕೆ ಮಾಡುವ ಬದಲು ಒಂದು ಲಕ್ಷ ಮನೆಗಳನ್ನೇ ನಿರ್ಮಾಣ ಮಾಡಿಕೊಡಲಾಗುವುದು ಎಂದು ಅಂದಿನ ಸರ್ಕಾರ ಭರವಸೆ ನೀಡಿತ್ತು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಈ ಯೋಜನೆಗೊಂದು ರೂಪ ದೊರೆತಿತ್ತು.

ಮನೆ ನಿರ್ಮಾಣ ಮಾಡಲು ಜಾಗಗಳನ್ನು ಜಿಲ್ಲಾಧಿಕಾರಿ ಮೂಲಕ ಗುರುತಿಸುವ ಕಾರ್ಯವೂ ನಡೆಯಿತು. ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಅರ್ಜಿಗಳನ್ನೂ ಆಹ್ವಾನಿಸಲಾಯಿತು. ವಾರ್ಷಿಕ ಆದಾಯದ ಮಿತಿ ₹83 ಸಾವಿರಕ್ಕಿಂತ ಕಡಿಮೆ ಇದ್ದವರು ಅರ್ಜಿ ಸಲ್ಲಿಸಲು ಅರ್ಹರು ಎಂಬ ಮಾನದಂಡ ನಿಗದಿ ಮಾಡಲಾಗಿತ್ತು. ಸೈಬರ್ ಸೆಂಟರ್‌ಗಳ ಮುಂದೆ ಸರತಿ ಸಾಲಿನಲ್ಲಿ ನಿಂತು ವಸತಿ ರಹಿತರು (ಕೂಲಿ ಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಖಾನೆಗಳ ನೌಕರರು, ಆಟೋರಿಕ್ಷಾ ಚಾಲಕರು, ಇನ್ನಿತರ ಅಸಂಘಟಿತ ವಲಯದವರು) ಅರ್ಜಿ ಸಲ್ಲಿಸಿದ್ದರು.

ಅರ್ಜಿ ಹಾಕಿದ್ದವರಲ್ಲಿ 65 ಸಾವಿರ ಜನರಿಗೆ ಸರ್ಕಾರ ತಿಳಿವಳಿಕೆ ಪತ್ರವನ್ನೂ ಕಳುಹಿಸಿ ಮನೆ ಒದಗಿಸುವ ಖಾತ್ರಿ ನೀಡಿದೆ. ಇಷ್ಟೆಲ್ಲಾ ಪ್ರಕ್ರಿಯೆಗಳು ನಡೆದ ಬಳಿಕ ಎಲ್ಲ ಅರ್ಜಿಗಳನ್ನು ರದ್ದುಪಡಿಸಲು ಏಕಾಏಕಿ ನಿರ್ಧಾರ ಕೈಗೊಂಡಿರುವ ಈಗಿನ ಸರ್ಕಾರ ಮನೆ ಬೇಕಿದ್ದವರು ಹೊಸದಾಗಿ ಅರ್ಜಿ ಸಲ್ಲಿಸಬಹುದು ಎಂದು ಹೇಳಿದೆ. ವಾರ್ಷಿಕ ಆದಾಯದ ಮಿತಿಯನ್ನು ₹3 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಈಗಾಗಲೇ ಅರ್ಜಿ ಹಾಕಿ ಕಾಯುತ್ತಿರುವ ಕಡಿಮೆ ಆದಾಯದ ಬಡವರು ಏನು ಮಾಡಬೇಕು ಎಂಬ ಪ್ರಶ್ನೆ ಉದ್ಭವವಾಗಿದೆ.

'ಎಲ್ಲಿ ಮನೆಗಳು ನಿರ್ಮಾಣ ಆಗಬೇಕು ಎಂಬ ಜಾಗವನ್ನೇ ಗುರುತಿಸದೆಯೇ, ಅರ್ಜಿ ಹಾಕಿದವರಿಗೆಲ್ಲಾ ಚುನಾವಣೆ ಕಾರಣಕ್ಕೆ ಪತ್ರ ಬರೆದು ಹಿಂದಿನ ಸರ್ಕಾರ ದಿಕ್ಕುತಪ್ಪಿಸಿದೆ' ಎಂದು ವಸತಿ ವಿ. ಸೋಮಣ್ಣ ದೂರುತ್ತಿದ್ದಾರೆ. ರಾಜಕಾರಣಿಗಳು ಒಬ್ಬರ ಮೇಲೊಬ್ಬರು ದೂರು ಹೇಳಿಕೊಂಡು ಅರ್ಜಿ ಹಾಕಿದವರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂಬುದು ವಸತಿರಹಿತರ ಅಳಲು.

'ಹೊಸದಾಗಿ ಅರ್ಜಿ ಆಹ್ವಾನಿಸುವ ನಿರ್ಧಾರದ ಹಿಂದೆ ಶಾಸಕರ ಹಿತಾಸಕ್ತಿ ಅಡಗಿದೆ ಎಂಬ ಆರೋಪಗಳಿವೆ. ವಾರ್ಷಿಕ ಆದಾಯದ ಮಿತಿ ₹83 ಸಾವಿರ ಇದ್ದರೆ ತಮಗೆ ಬೇಕಾದವರಿಗೆಲ್ಲ ಮನೆ ಕೊಡಿಸಲು ಆಗುವುದಿಲ್ಲ. ಹೀಗಾಗಿಯೇ ಶಾಸಕರು ಪಟ್ಟು ಹಿಡಿದು ಈ ಕೆಲಸ ಮಾಡಿಸಿದ್ದಾರೆ' ಎಂದು ಬಡವರ ವಸತಿ ಹಕ್ಕಿಗಾಗಿ ಹೋರಾಟ ನಡೆಸುತ್ತಿರುವವರು ದೂರುತ್ತಾರೆ.

'ಆಶ್ರಯ ಸಮಿತಿಗಳಿಗೆ ಅಧ್ಯಕ್ಷರಾಗಿರುವ ಶಾಸಕರಿಗೇ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವ ಅಧಿಕಾರವನ್ನು ನೀಡಬೇಕು. ಆಗ ಮಾತ್ರ ಈ ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡುವುದಾಗಿ ಪಟ್ಟು ಹಿಡಿದ್ದಾರೆ. ಮೊದಲ ಹಂತದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ 46 ಸಾವಿರ ಮನೆಗಳಲ್ಲಿ ಶೇ 50ರಷ್ಟು ಅಂದರೆ 23 ಸಾವಿರ ಮನೆಗಳಿಗೆ ಫಲಾನುಭವಿಗಳ ಪಟ್ಟಿಯನ್ನು ಶಾಸಕರೇ ಅಂತಿಮಗೊಳಿಸಲು ಅವಕಾಶವನ್ನು ಕೊನೆಗೂ ನೀಡಲಾಗಿದೆ. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ ಒಂದು ಲಕ್ಷ ಮನೆ ನಿರ್ಮಾಣ ಯೋಜನೆಯು ನಿಜವಾದ ನಿರ್ವಸತಿಗರಿಗೆ ಸಿಗುವುದೋ, ರಾಜಕಾರಣಿಗಳ ಹಿಂಬಾಲಕರ ಪಾಲಾಗುವುದೋ ಎಂಬ ಆತಂಕ ಕಾಡುತ್ತಿದೆ' ಎನ್ನುತ್ತಾರೆ ಹೋರಾಟಗಾರರು.

ಅಂಕಿ-ಅಂಶಗಳು

515 ಎಕರೆ
ಒಂದು ಲಕ್ಷ ವಸತಿ ಯೋಜನೆಗೆ ಸ್ವಾಧೀನ ಆಗಿರುವ ಭೂಮಿ

46,998 ಮನೆಗಳು
ನಿರ್ಮಾಣಕ್ಕೆ ಮೊದಲ ಹಂತದಲ್ಲಿ ಕಾರ್ಯಾದೇಶ ನೀಡಿರುವುದು


42,361 ಮನೆಗಳು
ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವುದು

ವಸತಿ ವೆಚ್ಚ: ಯಾರ ಪಾಲು ಎಷ್ಟು?

ಒಂದು ಲಕ್ಷ ಮನೆ ಯೋಜನೆಯಡಿ ಬಡವರಿಗೆ ಉಚಿತವಾಗಿ ಮನೆ ಸಿಗುವುದಿಲ್ಲ. ಬದಲಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಬ್ಸಿಡಿ ದೊರೆಯಲಿದೆ. ಹಾಗಾಗಿ ರಿಯಾಯಿತಿ ದರದಲ್ಲಿ ವಸತಿ ಲಭಿಸಲಿದೆ.

ಒಂದು ಮನೆಗೆ ₹6 ಲಕ್ಷದಿಂದ ₹10 ಲಕ್ಷದ ತನಕ ವೆಚ್ಚವಾಗಲಿದೆ. ಕೇಂದ್ರ ಸರ್ಕಾರದಿಂದ ₹1.50 ಲಕ್ಷ ದೊರೆಯಲಿದೆ. ರಾಜ್ಯ ಸರ್ಕಾರದಿಂದ ಪರಿಶಿಷ್ಟ ಜಾತಿ ಮತ್ತು ವರ್ಗದರಿಗೆ ₹2.20 ಲಕ್ಷ, ಸಾಮಾನ್ಯ ವರ್ಗದವರಿಗೆ ₹1.62 ಲಕ್ಷ ಸಬ್ಸಿಡಿ ಸಿಗಲಿದೆ. ಘಟಕ ವೆಚ್ಚದಲ್ಲಿ ಶೇ 10ರಷ್ಟನ್ನು ಫಲಾನುಭವಿಗಳು ಪಾವತಿಸಬೇಕು. ಉಳಿದ ಹಣಕ್ಕೆ ಬ್ಯಾಂಕ್‌ಗಳು ಸಾಲ ನೀಡಲಿದ್ದು, ಅದನ್ನು ಫಲಾನುಭವಿಗಳು ವಿವಿಧ ಕಂತುಗಳಲ್ಲಿ ಮರುಪಾವತಿ ಮಾಡಬೇಕು.

ಅರ್ಜಿ ವಜಾಗೊಳಿಸುವುದು ಅಕ್ಷಮ್ಯ: ಎಚ್‌.ಡಿ.ಕೆ


ಎಚ್‌.ಡಿ. ಕುಮಾರಸ್ವಾಮಿ

'ಲಕ್ಷ ಮನೆಗಳ ಯೋಜನೆಯಡಿ ಈಗಾಗಲೇ ಸಲ್ಲಿಸಿರುವ ಅರ್ಜಿಗಳನ್ನು ರದ್ದುಪಡಿಸಿರುವುದು ಅಕ್ಷಮ್ಯ ಅಪರಾಧ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಟೀಕಿಸಿದರು.

'ಬಿಜೆಪಿ ಸರ್ಕಾರ ಈವರೆಗೆ ಒಂದೇ ಒಂದು ಮನೆಯನ್ನೂ ಬಡವರಿಗೆ ಹಂಚಿಕೆ ಮಾಡಿಲ್ಲ. ಆಗಸ್ಟ್‌ನಲ್ಲಿ 5 ಸಾವಿರ ಮನೆಗಳನ್ನು ಹಂಚಿಕೆ ಮಾಡುವುದಾಗಿ ಸಚಿವ ಸೋಮಣ್ಣ ಹೇಳುತ್ತಿದ್ದಾರೆ. ಇದು ಜನರ ಕಣ್ಣೊರೆಸುವ ತಂತ್ರವಲ್ಲದೆ ಬೇರೇನೂ ಅಲ್ಲ. ಕೇವಲ ಒಂದೆರಡು ತಿಂಗಳಲ್ಲಿ 5 ಸಾವಿರ ಮನೆಗಳನ್ನು ಕೊಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಈ ರೀತಿ ಹಸಿ ಸುಳ್ಳು ಹೇಳುವುದನ್ನು ಅವರು ಬಿಡಬೇಕು. ಮನೆಗಳಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ರದ್ದುಪಡಿಸದೇ ಅದೇ ಅರ್ಜಿಗಳನ್ನು ಮಾನ್ಯ ಮಾಡಿ, ಅವರಿಗೆ ಮನೆ ಒದಗಿಸಲು ಅಗತ್ಯ ಯೋಜನೆ ರೂಪಿಸಬೇಕು' ಎಂದು ಒತ್ತಾಯಿಸಿದರು.

ಗೊಂದಲದ ಗೂಡಾಗಿತ್ತು–ಸರಿಪಡಿಸುತ್ತಿದ್ದೇನೆ: ವಸತಿ ಸಚಿವ ವಿ. ಸೋಮಣ್ಣ


ವಿ.ಸೋಮಣ್ಣ

'ಈ ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ವಸತಿ ಸಚಿವರಾಗಿದ್ದ ಎಂ. ಕೃಷ್ಣಪ್ಪ ಅವರು ಈ ಯೋಜನೆಯನ್ನು ಗೊಂದಲ ಗೂಡಾಗಿಸಿದ್ದರು. ನಾನು ವಸತಿ ಸಚಿವನಾದ ಬಳಿಕ ಎಲ್ಲವನ್ನೂ ಸರಿಪಡಿಸಿದ್ದೇನೆ' ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ಮನೆಗೆ ಜಾಗವನ್ನೂ ಗುರುತಿಸದೆಯೇ, ಒಂದೇ ಒಂದು ಮನೆಯನ್ನೂ ನಿರ್ಮಿಸದೆಯೇ, ಅರ್ಜಿ ಹಾಕಿದವರಿಗೆ ಮನೆ ನೀಡಲಾಗುವುದು ಎಂದು ಪತ್ರ ಬರೆಯಲಾಗಿತ್ತು ಎಂದು ಅವರು ದೂರಿದರು.

'ಫಲಾನುಭವಿಗಳ ಆಯ್ಕೆಗೆ ಅವಕಾಶ ನೀಡದ ಕಾರಣಕ್ಕೆ ಈ ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡಲು ಶಾಸಕರು ಮುಂದೆ ಬರಲಿಲ್ಲ. ಹೀಗಾಗಿ ಮನೆ ನಿರ್ಮಾಣ ಆಗಲಿರುವ ಕ್ಷೇತ್ರದ ಶಾಸಕರನ್ನೂ ವಿಶ್ವಾಸಕ್ಕೆ ಪಡೆದು ಯೋಜನೆ ಅನುಷ್ಠಾನಗೊಳಿಸಲಿದ್ದೇವೆ. ಸ್ಥಳೀಯ ಶೇ 50ರಷ್ಟು ಫಲಾನುಭವಿಗಳ ಪಟ್ಟಿಯನ್ನು ಆಯಾ ಕ್ಷೇತ್ರದ ಶಾಸಕರು ಒದಗಿಸಲು ಅವಕಾಶ ನೀಡಿದ್ದೇವೆ. ಒಟ್ಟು 23 ಸಾವಿರ ಫಲಾನುಭವಿಗಳ ಪಟ್ಟಿಯನ್ನು ಶಾಸಕರು ನೀಡಲಿದ್ದಾರೆ. ಉಳಿದ ಶೇ 50ರಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲು ಏಜೆನ್ಸಿ ನೇಮಿಸಲಾಗುತ್ತಿದೆ. ಅತ್ಯಂತ ಪಾರದರ್ಶಕವಾಗಿ ಫಲಾನುಭವಿಗಳ ಆಯ್ಕೆ ಮಾಡಲಾಗುವುದು' ಎಂದು ವಿವರಿಸಿದರು.

'ಆರಂಭಿಕ ಹಂತದಲ್ಲಿ ಆಗಸ್ಟ್‌ನಲ್ಲಿ 5 ಸಾವಿರ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗುವುದು. 2022ರ ನವೆಂಬರ್ ವೇಳೆಗೆ ಈ ಯೋಜನೆಯ ಎಲ್ಲ ಪ್ರಕ್ರಿಯೆಗಳನ್ನೂ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ' ಎಂದರು.

'ಫಲಾನುಭವಿಯ ವಾರ್ಷಿಕ ಆದಾಯ ಮಿತಿಯನ್ನು ₹3 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ. ₹83 ಸಾವಿರ ವಾರ್ಷಿಕ ಆದಾಯ ಇದ್ದವರು ₹7 ಲಕ್ಷದ ತನಕ ಹಣ ಹೊಂದಿಸಲು ಆಗುವುದಿಲ್ಲ. ಯೋಜನೆಯ ಉದ್ದೇಶ ಸಾರ್ಥಕ ಆಗಬೇಕು ಎಂಬ ಕಾರಣದಿಂದ ಈ ಬದಲಾವಣೆ ಮಾಡಲಾಗಿದೆ. ಹೀಗಾಗಿಯೇ, ಹೊಸದಾಗಿ ಅರ್ಜಿ ಆಹ್ವಾನಿಸಲಾಗಿದೆ' ಎಂದು ಸಮರ್ಥಿಸಿಕೊಂಡರು.

ಹಲವು ಸಲ ಕರೆ ಮಾಡಿದರೂ ಈ ಬಗ್ಗೆ ಪ್ರತಿಕ್ರಿಯೆಗೆ ಎಂ.ಕೃಷ್ಣಪ್ಪ ಲಭ್ಯರಾಗಲಿಲ್ಲ.

ಅರ್ಜಿ ಹಾಕಿರುವವರಿಗೆ ತೊಂದರೆ


ಅಖಂಡ ಶ್ರೀನಿವಾಸಮೂರ್ತಿ

ಹೊಸದಾಗಿ ಅರ್ಜಿ ಆಹ್ವಾನಿಸಿದರೆ ಈಗಾಗಲೇ ಅರ್ಜಿ ಹಾಕಿ ಕಾಯುತ್ತಿರುವವರಿಗೆ ತೊಂದರೆ ಆಗಲಿದೆ ಎಂದು ಶಾಸಕ ಅಖಂಡ ಶ್ರೀನಿವಾಸಮೂರ್ತಿ ಹೇಳಿದರು.

ಬಡವರು, ಕೂಲಿ ಕಾರ್ಮಿಕರು ಮನೆಗಳಿಗಾಗಿ ಅರ್ಜಿ ಹಾಕಿದ್ದಾರೆ. ಸರ್ಕಾರ ಪದೇ ಪದೇ ಬದಲಾವಣೆ ಮಾಡದೆ ಈಗಾಗಲೇ ಅರ್ಜಿ ಹಾಕಿದವರಿಗೆ ಮನೆಗಳನ್ನು ನೀಡಬೇಕು ಎಂದು ಆಗ್ರಹಿಸಿದರು.

ಕಾನೂನು ಹೋರಾಟಕ್ಕೆ ಸಿದ್ಧತೆ


ಐಸಾಕ್ ಅಮೃತರಾಜ್

'ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಅರ್ಜಿ ಸ್ವೀಕರಿಸಿದವರಿಗೆ ತಿಳಿವಳಿಕೆ ಪತ್ರವನ್ನೂ ಸರ್ಕಾರ ಕಳುಹಿಸಿದೆ. ಅವರಿಗೆ ಅನ್ಯಾಯ ಮಾಡಿ ಬೇರೆಯವರಿಗೆ ಲಾಭ ಮಾಡುವುದು ನ್ಯಾಯವೇ' ಎಂದು ಸ್ಲಂ ಜನರ ಸಂಘಟನೆ ರಾಜ್ಯ ಸಂಚಾಲಕ ಐಸಾಕ್ ಅಮೃತರಾಜ್ ಪ್ರಶ್ನಿಸಿದರು.

'ಶಾಸಕರು ತಮ್ಮ ಹಿಂಬಾಲಕರು, ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಲು ಹೊಸದಾಗಿ ಅರ್ಜಿ ಆಹ್ವಾನಿಸಲು ಮುಂದಾಗಿದ್ದಾರೆ. ಈಗಾಗಲೇ ಅರ್ಜಿ ಹಾಕಿ ಕಾಯುತ್ತಿರುವ ಜನರು ಇದರಿಂದ ವಂಚನೆಗೆ ಒಳಗಾಗಲಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು.

'ಸರ್ಕಾರದ ಈ ನಡೆಯ ವಿರುದ್ಧ ಕಾನೂನು ಹೋರಾಟಕ್ಕೆ ಸಿದ್ಧತೆ ನಡೆಸಲಾಗುತ್ತಿದೆ. ಶೀಘ್ರದಲ್ಲೇ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಹಾಸಿಗೆಗಳು ಖಾಲಿ ಇರುವ ಕಾರಣ ಖಾಸಗಿ ಆಸ್ಪತ್ರೆಗಳಿಗೆ ನಡೆಯದ ಶಿಫಾರಸು

ಕೋವಿಡ್: ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಕೋವಿಡ್ ಚಿಕಿತ್ಸೆಗೆ ಗುರುತಿಸಲಾದ ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ 75ಕ್ಕೂ ಅಧಿಕ ಹಾಸಿಗೆಗಳು ಸದ್ಯ ಖಾಲಿಯಿವೆ. ಹೀಗಾಗಿ, ಸೋಂಕಿತರಿಗೆ ಶಿಫಾರಸು ವ್ಯವಸ್ಥೆಯಡಿ ಖಾಸಗಿ ಆಸ್ಪತ್ರೆಗಳಿಗೆ ಅಲೆದಾಟ ತಪ್ಪಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಮಾರ್ಚ್ ಎರಡನೇ ವಾರದ ಬಳಿಕ ಏರಿಕೆ ಕಂಡ ಕಾರಣ ಸರ್ಕಾರವು ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆಯನ್ನು ರೂಪಿಸಿತ್ತು. ಸರ್ಕಾರಿ ಕೋಟಾದಡಿ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲು ಶೇ 50 ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿ, ಆದೇಶ ಹೊರಡಿಸಿತ್ತು. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ನಗರದಲ್ಲಿ 5 ಸಾವಿರಕ್ಕೂ ಅಧಿಕ ಹಾಸಿಗೆಗಳು ದೊರೆತಿದ್ದವು.

ಕೆಲ ದಿನಗಳಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖ ಕಂಡಿದ್ದು, ಸೋಂಕು ದೃಢ ಪ್ರಮಾಣವು ನಗರದಲ್ಲಿ ಶೇ 2ರ ಗಡಿಯ ಆಸುಪಾಸಿಗ ಬಂದಿದೆ. ಈ ಪ್ರಮಾಣ ಕಳೆದ ತಿಂಗಳ ಮೊದಲ ವಾರ ಶೇ 40ರ ಗಡಿಗೆ ಏರಿಕೆ ಕಂಡಿತ್ತು. ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಇಳಿಕೆಯಾಗಿರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ ಗುರುತಿಸಲಾದ ಹಾಸಿಗೆಗಳಲ್ಲಿ 2.5 ಸಾವಿರಕ್ಕೂ ಅಧಿಕ ಹಾಸಿಗೆಗಳು ಸದ್ಯ ಖಾಲಿ ಉಳಿದಿವೆ.

ಕಳೆದ ಒಂದು ವಾರದಿಂದ ಸೋಂಕಿತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ. ಹೀಗಾಗಿ, ಖಾಸಗಿ ಆಸ್ಪತ್ರೆಗಳು ಗುರುತಿಸಲಾಗಿರುವ ಹಾಸಿಗೆಗಳನ್ನು ಕೋವಿಡೇತರ ಸೇವೆಗೆ ಬಳಸಿಕೊಳ್ಳಲು ಮುಂದಾಗಿದ್ದು, ಸರ್ಕಾರದ ಅನುಮತಿಗೆ ಎದುರು ನೋಡುತ್ತಿವೆ. ಇನ್ನೊಂದೆಡೆ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವುದರಿಂದ ಕೋವಿಡೇತರ ಕಾಯಿಲೆಗಳ ಸಂಬಂಧ ತಪಾಸಣೆಗೆ ಆಸ್ಪತ್ರೆಗಳಿಗೆ ತೆರಳುವವರ ಸಂಖ್ಯೆ ಶೇ 20ರಷ್ಟು ಹೆಚ್ಚಳವಾಗಿದೆ.

ದಾಖಲಾತಿ ಇಳಿಕೆ: ಕೋವಿಡ್ ಹೊಸ ಪ್ರಕರಣಗಳಲ್ಲಿ ಶೇ 90 ರಷ್ಟು ಮಂದಿ ಮನೆ ಆರೈಕೆಗೆ ಒಳಪಡುತ್ತಿದ್ದಾರೆ. ಹೀಗಾಗಿ, ದಿನವೊಂದಕ್ಕೆ ಆಸ್ಪತ್ರೆಗಳಿಗೆ ದಾಖಲಾಗುವ ಸೋಂಕಿತರ ಸಂಖ್ಯೆ ಕೆಲ ದಿನಗಳಿಂದ 100ರ ಗಡಿಯ ಆಸುಪಾಸಿನಲ್ಲಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿಯೇ 2 ಸಾವಿರಕ್ಕೂ ಅಧಿಕ ಹಾಸಿಗೆಗಳು ಖಾಲಿಯಿವೆ. ವಿಕ್ಟೋರಿಯಾ ಆಸ್ಪತ್ರೆಯೊಂದರಲ್ಲಿಯೇ 374 ಎಚ್‌ಡಿಯು, 24 ಐಸಿಯು ಹಾಗೂ 42 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು ಖಾಲಿ ಉಳಿದಿವೆ.

'ಕೋವಿಡ್ ಚಿಕಿತ್ಸೆ ಸಂಬಂಧ ಆಸ್ಪತ್ರೆಗೆ ಬರುವವರ ಸಂಖ್ಯೆ ಗಣನೀಯ ಇಳಿಕೆಯಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಹಾಸಿಗೆಗಳು ಖಾಲಿಯಿವೆ. ಐಸಿಯು ಹಾಸಿಗೆಗಳು ಕೂಡ ಇವೆ. ಹಾಗಾಗಿ, ಖಾಸಗಿ ಆಸ್ಪತ್ರೆಗಳಿಗೆ ಸೋಂಕಿತರನ್ನು ಶಿಫಾರಸು ಆಧಾರದಲ್ಲಿ ಕಳುಹಿಸುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಅನ್ಸರ್ ಅಹಮದ್ ತಿಳಿಸಿದರು.

ಪ್ರಜಾವಾಣಿ ವಿಶೇಷ

ಶೇ 88ರಷ್ಟು ಹಾಸಿಗೆಗಳು ಲಭ್ಯ

ಸರ್ಕಾರಿ ವ್ಯವಸ್ಥೆಯಡಿ ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ 5,258 ಎಚ್‌ಡಿಯು ಹಾಗೂ ಸಾಮಾನ್ಯ ಹಾಸಿಗೆಗಳನ್ನು ಗುರುತಿಸಲಾಗಿತ್ತು. ಅವುಗಳಲ್ಲಿ ಸದ್ಯ 4,630 ಹಾಸಿಗೆಗಳು ಖಾಲಿಯಿವೆ. ಅಂದರೆ, ಶೇ 88 ರಷ್ಟು ಹಾಸಿಗೆಗಳು ಚಿಕಿತ್ಸೆಗೆ ಲಭ್ಯವಿವೆ. ಅದೇ ರೀತಿ, 569 ಐಸಿಯು ಹಾಸಿಗೆಗಳಲ್ಲಿ 415 ಹಾಸಿಗೆಗಳು, 643 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳಲ್ಲಿ 425 ಹಾಸಿಗೆಗಳು ಖಾಲಿ ಉಳಿದಿವೆ.

'ಕೋವಿಡ್ ಚಿಕಿತ್ಸೆಗೆ ಗುರುತಿಸಲಾದ ಹಾಸಿಗೆಗಳನ್ನು ಕೋವಿಡೇತರ ಸೇವೆಗಳಿಗೆ ಬಳಸಿಕೊಳ್ಳಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಒಂದು ವೇಳೆ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಏರಿಕೆ ಕಂಡಲ್ಲಿ ಹಾಸಿಗೆಗಳನ್ನು ಒದಗಿಸಲಾಗುತ್ತದೆ. ಮೂರನೇ ಅಲೆಗೆ ಮಾಡಿಕೊಳ್ಳಬೇಕಾದ ಸಿದ್ಧತೆಗಳು ಹಾಗೂ ಎರಡನೇ ಅಲೆಯಲ್ಲಿ ಎದುರಿಸಿದ ಸಮಸ್ಯೆಗಳ ಬಗ್ಗೆ ವರದಿ ತಯಾರಿಸಲು ಆಂತರಿಕ ಸಮಿತಿ ರಚಿಸಲಾಗಿದೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್‌.ಎಂ. ತಿಳಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ವಿವರ (ಸರ್ಕಾರಿ ಕೋಟಾ)

ವಿಧ	ಮೀಸಲು	ಖಾಲಿ
ಸಾಮಾನ್ಯ ಹಾಸಿಗೆ	1,818	1,670
ಐಸಿಯು ಹಾಸಿಗೆ	456	328
ಎಚ್‌ಡಿಯು ಹಾಸಿಗೆ	1,904	1,678
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	413	264

ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆ ವಿವರ

ವಿಧ	ಮೀಸಲು	ಖಾಲಿ
ಸಾಮಾನ್ಯ ಹಾಸಿಗೆ	696	549
ಐಸಿಯು ಹಾಸಿಗೆ	113	87
ಎಚ್‌ಡಿಯು ಹಾಸಿಗೆ	840	733
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	230	161

ಕೋವಿಡ್ ಅಂಕಿ-ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.17 ಕೋಟಿ ▲	3.02 ಕೋಟಿ
ಸಕ್ರಿಯ ಪ್ರಕರಣ	1.15 ಕೋಟಿ	5.70 ಲಕ್ಷ ▼
ಗುಣಮುಖ	16.62 ಕೋಟಿ ▼	2.92 ಕೋಟಿ
ಸಾವು	39.36 ಲಕ್ಷ ▲	3.96 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.70 ಲಕ್ಷ ▼	44,220 ▼
ಗುಣಮುಖ	3.13 ಲಕ್ಷ ▼	54,035 ▼
ಸಾವು	7,578 ▼	853 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
- ಕೊಲಂಬಿಯಾ 33,594 ▲
- ಬ್ರೆಜಿಲ್ 64,131 ▼
- ರಷ್ಯಾ 21,665

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
- ಅಮೆರಿಕ 49.57 ▼
- ಬ್ರೆಜಿಲ್ 12.92 ▲
- ರಷ್ಯಾ 3.54 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
- ಮಹಾರಾಷ್ಟ್ರ 1.21 ಲಕ್ಷ ▲
- ದೆಹಲಿ 24,965 ▲
- ತಮಿಳುನಾಡು 32,290 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
- ಮಹಾರಾಷ್ಟ್ರ 60.36 ▲
- ಕೇರಳ 28.88 ▲
- ತಮಿಳುನಾಡು 24.65 ▲

ಪ್ರಜಾವಾಣಿ ಗ್ರಾಫಿಕ್ಸ್

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಾಹಿತಿ

'ಡೆಲ್ಟಾ ಪ್ಲಸ್: ರಾಜ್ಯಕ್ಕೆ ಬಂದವರಿಗೆ ಪರೀಕ್ಷೆ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನೆರೆಯ ರಾಜ್ಯಗಳಲ್ಲಿ ಡೆಲ್ಟಾ ಪ್ಲಸ್ ತಳಿಯ ವೈರಾಣು ಕಾಣಿಸಿಕೊಂಡ ಕಾರಣ ಮಹಾರಾಷ್ಟ್ರ ಮತ್ತು ಕೇರಳ ಗಡಿಭಾಗದ ಜಿಲ್ಲೆಗಳಲ್ಲಿ ವಿಶೇಷ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗಿದೆ. ರಾಜ್ಯ ಪ್ರವೇಶಿಸುವವರಿಗೆ ರ‍್ಯಾಂಡಮ್ ಆಗಿ ಪರೀಕ್ಷೆ ನಡೆಸಲು ಸೂಚಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, 'ಬೇರೆ ರಾಜ್ಯಗಳಿಂದ ಬರುವವರನ್ನು ನೂರಕ್ಕೆ ನೂರು ವೈದ್ಯಕೀಯ ತಪಾಸಣೆ ಮಾಡಲು ಸಾಧ್ಯವಾಗುತ್ತಿಲ್ಲ. ಆದರೂ ಸಾಧ್ಯವಾದಷ್ಟು ಜನರಿಗೆ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ಕೇರಳ ಒಂದರಿಂದಲೇ ಲಕ್ಷಾಂತರ ಜನರು ರಾಜ್ಯಕ್ಕೆ ಬರುತ್ತಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ, ಸಾಧ್ಯವಾದಷ್ಟು ಜನರಿಗೆ ಪರೀಕ್ಷೆ ಮಾಡಲಾಗುತ್ತಿದೆ' ಎಂದರು.

'ಕೋವಿಡ್ ಹೊಸ ವೈರಾಣು ನಿಯಂತ್ರಣಕ್ಕೆ ವೈರಾಣುವಿನ ಅನುಕ್ರಮಣಿಕೆ ನಡೆಸಲಾಗುತ್ತಿದೆ. 600 ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಈವರೆಗೆ ರಾಜ್ಯದಲ್ಲಿ ಇಬ್ಬರಿಗೆ ಮಾತ್ರ ಡೆಲ್ಟಾ ಪ್ಲಸ್ ವೈರಾಣು ತಗುಲಿರುವುದು ದೃಢಪಟ್ಟಿದೆ' ಎಂದರು.

'ಬೆಂಗಳೂರಿನಲ್ಲಿ 50 ಲಕ್ಷಕ್ಕೂ ಅಧಿಕ ಜನರಿಗೆ ಕೋವಿಡ್ ಲಸಿಕೆ ನೀಡಲಾಗಿದೆ. ದೇಶದ ಯಾವುದೇ ನಗರದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಲಸಿಕೆ ನೀಡಿಲ್ಲ. ರಾಜ್ಯದಲ್ಲಿ ಮೊದಲನೇ ಡೋಸ್ ಪಡೆದವರ ಪ್ರಮಾಣ ಶೇ 40 ರಷ್ಟಿದೆ (1.85 ಕೋಟಿ). 45 ಲಕ್ಷಕ್ಕೂ ಅಧಿಕ ಜನರು ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ. 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪಾಲಕರಿಗೆ ಪ್ರಾಶಸ್ತ್ಯದಲ್ಲಿ ಲಸಿಕೆ ನೀಡಲಾಗುವುದು' ಎಂದರು.

ಕಪ್ಪು ಶಿಲೀಂಧ್ರ: 6 ಮಂದಿಗೆ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೊಸದಾಗಿ 6 ಮಂದಿಗೆ ಕಪ್ಪು ಶಿಲೀಂಧ್ರ ಸೋಂಕು ತಗುಲಿರುವುದು ದೃಢಪಟ್ಟಿದೆ. ಈವರೆಗೆ ಈ ಸೋಂಕಿಗೆ ಒಳಗಾದವರ ಒಟ್ಟು ಸಂಖ್ಯೆ 1,039ಕ್ಕೆ ಏರಿಕೆಯಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತ ವ್ಯಕ್ತಿಯೊಬ್ಬರಿಗೆ ಕಪ್ಪು ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದೆ. ಅಲ್ಲಿ ಈವರೆಗೆ 201 ಮಂದಿ ದಾಖಲಾಗಿದ್ದಾರೆ. ಅದೇ ರೀತಿ, ಬೌರಿಂಗ್ ಆಸ್ಪತ್ರೆಯಲ್ಲಿ ಐವರಿಗೆ ಸೋಂಕು ತಗುಲಿರುವುದು ಖಚಿತಪಟ್ಟಿದೆ. ಅಲ್ಲಿ ಒಟ್ಟು 282 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ.

ಕಪ್ಪು ಶಿಲೀಂಧ್ರ ಸೋಂಕಿತರಲ್ಲಿ ಈವರೆಗೆ 485 ಮಂದಿ ಸರ್ಕಾರಿ ವ್ಯವಸ್ಥೆಯಡಿ ದಾಖಲಾಗಿದ್ದಾರೆ. ಇನ್ನುಳಿದವರು ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಸೋಂಕಿತರಲ್ಲಿ 81 ಮಂದಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.


ನಗರದ ಕೋವಿಡ್ ಅಂಕಿ–ಅಂಶ
- 12,11,430 ▲ ಒಟ್ಟು ಪ್ರಕರಣಗಳು (12,10,642 ನಿನ್ನೆಯ ವಿವರ)
- 63,473 ▼ ಸಕ್ರಿಯ ಪ್ರಕರಣಗಳು
- 11,32,375 ▲ ಗುಣಮುಖರಾದವರು
- 15,581 ▲ ಒಟ್ಟು ಸಾವು

ಗುರುವಾರದ ಏರಿಕೆ
- ಹೊಸ ಪ್ರಕರಣ 788 ▼
- ಗುಣಮುಖ 3,301 ▲
- ಸಾವು 11 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಲಸಿಕೆ ಮನೆಗೆ ತಲುಪಿಸಲು ಬಿಬಿಎಂಪಿ ಸಿದ್ಧತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕೋವಿಡ್ ಲಸಿಕೆ ಪಡೆಯದವರಿಗೆ ಡೆಲ್ಟಾ ಅಥವಾ ಡೆಲ್ಟಾ ಪ್ಲಸ್ ಸೋಂಕು ತಗಲುವ ಸಾಧ್ಯತೆ ಹೆಚ್ಚು. ಲಸಿಕೆ ಪಡೆದವರಿಗೆ ಸೋಂಕು ತಗುಲಿದರೂ ಅದರ ಭೀಕರತೆ ಕಡಿಮೆ ಇರಲಿದೆ. ಹಾಗಾಗಿ ಅರ್ಹರೆಲ್ಲರೂ ಲಸಿಕೆ ಪಡೆಯಬೇಕು. ಅಲ್ಲಲ್ಲಿ ಲಸಿಕಾ ಶಿಬಿರಗಳನ್ನು ಆಯೋಜಿಸುತ್ತಿದ್ದೇವೆ. ಜನರ ಮನೆ ಬಾಗಿಲಿನಲ್ಲೇ ಲಸಿಕೆ ಒದಗಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ಬಿಬಿಎಂಪಿ ಆಯುಕ್ತ ಗೌರವ್ ಗುಪ್ತ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಕೋವಿಡ್ ಮೂರನೇ ಅಲೆ ನಿಯಂತ್ರಣ ಮಾಡುವಲುವಾಗಿ ನಗರದ ಎಲ್ಲರಿಗೂ ಲಸಿಕೆ ನೀಡುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದೇವೆ. ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಕಚೇರಿಗಳಲ್ಲಿ ಲಸಿಕಾ ಶಿಬಿರಗಳನ್ನು ಈಗಾಗಲೇ ಹಮ್ಮಿಕೊಳ್ಳುತ್ತಿದ್ದೇವೆ. ಇದನ್ನು ಇನ್ನಷ್ಟು ವಿಸ್ತರಣೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದೇವೆ. ಲಸಿಕೆಯ ಲಭ್ಯತೆ ಆಧಾರದಲ್ಲಿ ಶಿಬಿರಗಳನ್ನು ಏರ್ಪಡಿಸಲಿದ್ದೇವೆ' ಎಂದರು.

'ಶುಕ್ರವಾರ ಹಾಗೂ ಶನಿವಾರ ತಲಾ 1 ಲಕ್ಷಕ್ಕೂ ಅಧಿಕ ಮಂದಿಗೆ ಲಸಿಕೆ ನೀಡಲಾಗಿದ್ದು, ಇದನ್ನು ಮುಂದುವರಿಸಲಿದ್ದೇವೆ. ಇನ್ನೆರಡು ದಿನಗಳಲ್ಲಿ ನಗರದ ಎಲ್ಲ ವಯಸ್ಕರು ಲಸಿಕೆ ಪಡೆಯಲಿದ್ದು, ತನ್ಮೂಲಕ ಬಿಬಿಎಂಪಿ ಹೊಸ ಮೈಲಿಗಲ್ಲು ಸಾಧಿಸಲಿದೆ. ಜುಲೈ ಅಂತ್ಯದ ಒಳಗೆ ನಗರದ ನಿವಾಸಿಗಳಲ್ಲಿ ಶೇ 70ರಷ್ಟು ವಯಸ್ಕರು ಲಸಿಕೆ ಪಡೆಯುವಂತೆ ನೋಡಿಕೊಳ್ಳಲಿದ್ದೇವೆ. ಎರಡನೇ ಡೋಸ್ ಪಡೆಯಲು ಅರ್ಹರಾದವರಿಗೂ ಲಸಿಕೆ ನೀಡಲೂ ಸಿದ್ಧತೆ ನಡೆದಿದೆ' ಎಂದರು.

'ಕೋವಿಶೀಲ್ಡ್ ಅಥವಾ ಕೊವ್ಯಾಕ್ಸಿನ್ ಲಸಿಕೆಗಳ ಕೊರತೆ ಇಲ್ಲ. ಈ ಲಸಿಕೆಗಳನ್ನು ತುಂಬಾ ದಿನಗಳ ಕಾಲಾ ದಾಸ್ತಾನು ಇಡಲು ಸಾಧ್ಯವಿಲ್ಲ. ಸರ್ಕಾರದಿಂದ ಪೂರೈಕೆ ಆದಂತೆ, ಅದೇ ದಿನ ಅವುಗಳನ್ನು ಲಸಿಕಾ ಕೇಂದ್ರಗಳಿಗೆ ತಲುಪಿಸುತ್ತಿದ್ದೇವೆ. ಮರುದಿನ ಮತ್ತಷ್ಟು ಲಸಿಕೆ ಪೂರೈಕೆ ಆಗುತ್ತಿದೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನೆಟ್‌ವರ್ಕ್ ಸಮಸ್ಯೆಗೆ ಪರಿಹಾರ ಕಂಡುಕೊಂಡ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕ

ಮುಳ್ಳೂರು: ಅಟ್ಟಣಿಗೆಯಲ್ಲಿ ಆನ್‌ಲೈನ್ ಕ್ಲಾಸ್

• ಶ.ಗ.ನಯನತಾರಾ

ಮುಖ್ಯಾಂಶಗಳು
- ವಿದ್ಯಾರ್ಥಿಗಳಿಗೆ ನಿತ್ಯ ಆನ್‌ಲೈನ್ ಪಾಠ
- ಕೋವಿಡ್ ಲಾಕ್‌ಡೌನ್ ಸಮಯ ಸದುಪಯೋಗ
- 20 ಅಡಿ ಎತ್ತರದ ಅಟ್ಟಣಿಗೆ

ಶನಿವಾರಸಂತೆ (ಕೊಡಗು): ನೆಟ್‌ವರ್ಕ್ ಸಮಸ್ಯೆ ಇರುವುದರಿಂದ ಮುಳ್ಳೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸಿ.ಎಸ್.ಸತೀಶ್, 20 ಅಡಿ ಎತ್ತರದಲ್ಲಿ ಮರದ ಅಟ್ಟಣಿಗೆ ನಿರ್ಮಿಸಿ ಆನ್‌ಲೈನ್ ಕ್ಲಾಸ್ ಮಾಡಲು ಉಪಾಯ ಕಂಡುಕೊಂಡಿದ್ದಾರೆ.

ಚಿಕ್ಕಕೊಳತ್ತೂರು ಗ್ರಾಮದ ಮನೆಯ ಆವರಣದಲ್ಲಿ ಬೊಂಬು, ಬೈನೆ ಮರದ ತಡಿಕೆಗಳು, ತಂತಿ, ಬಲೆ ಹಾಗೂ ಹುಲ್ಲು ಬಳಸಿ 'ಟ್ರೀ ಹೌಸ್' ಮಾದರಿಯಲ್ಲಿ ತರಗತಿ ಕೋಣೆ ನಿರ್ಮಿಸಿದ್ದಾರೆ.

ಮೊಬೈಲ್ ಫೋನ್ ಬಳಸಿ ಅವರು ತರಗತಿ ನಡೆಸುತ್ತಾರೆ. ₹ 500 ವೆಚ್ಚದ ಮೊಬೈಲ್ ಸ್ಟ್ಯಾಂಡ್ ಮತ್ತು ರೆಕಾರ್ಡರ್ ಖರೀದಿಸಿ ಬೋಧನೆಗೆ ಬಳಸಿಕೊಂಡಿದ್ದಾರೆ. ವಿದ್ಯಾರ್ಥಿಗಳನ್ನು ಆಕರ್ಷಿಸುವಂಥ ಚಟುವಟಿಕೆಗಳನ್ನು ಮಾಡಿಸುತ್ತಾರೆ. ಪಾಠ ಮಾಡಲು 3 ಬಗೆಯ ಕಪ್ಪು ಹಲಗೆಗಳು ಹಾಗೂ ಮನೆಯಲ್ಲಿ ಸಿಗುವ ವಸ್ತುಗಳನ್ನು ಬಳಸುತ್ತಾರೆ.

ಪಠ್ಯದ ಜೊತೆಗೆ ಯೋಗಾಸನ, ಒಳಾಂಗಣ ಆಟಗಳು, ಕಥೆ, ಇಂಗ್ಲಿಷ್, ಸಾಕು ಪ್ರಾಣಿಗಳ ಮಾಹಿತಿ ನೀಡುತ್ತಾರೆ. ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಮಕ್ಕಳ ಕಲಿಕೆಗೆ ನೆರವಾಗುತ್ತಿದ್ದಾರೆ.

'ಲಾಕ್‌ಡೌನ್ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ಕಲಿಕಾ ಸಂಪರ್ಕ ಸಾಧಿಸುವ ಕಾರ್ಯಕ್ರಮ ನಡೆಯುತ್ತಿದೆ. ಸ್ಮಾರ್ಟ್ ಫೋನ್ ಇರುವ ಮಕ್ಕಳಿಗೆ ಆನ್‌ಲೈನ್ ಮೂಲಕ ಬೋಧನೆ, ವಾಟ್ಸ್‌ಆ್ಯಪ್ ಮೂಲಕ ಹೋಮ್ ವರ್ಕ್ ಮಾಡಿಸುತ್ತಾರೆ. ನೆಟ್‌ವರ್ಕ್ ಸಮಸ್ಯೆ ಇದ್ದರೆ ಕರೆ ಮಾಡಿ ಮಾಹಿತಿ ನೀಡುತ್ತಾರೆ. ಸತೀಶ್ ಅವರು ನೆಟ್‌ವರ್ಕ್ ಸಮಸ್ಯೆಗೆ ಪರಿಹಾರ ಕಂಡುಕೊಂಡಿರುವುದು ವಿಶೇಷವಾಗಿದೆ' ಎಂದು ಸೋಮವಾರಪೇಟೆ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಕೆ.ಪಾಂಡು ಹೇಳುತ್ತಾರೆ.


ಶಿಕ್ಷಕ ಸಿ.ಎಸ್.ಸತೀಶ್ ಅವರು ಮನೆಯಂಗಳದಲ್ಲಿ ನಿರ್ಮಿಸಿಕೊಂಡಿರುವ ಆನ್‌ಲೈನ್ ಕ್ಲಾಸ್ ರೂಂ

ಆಯುಕ್ತರಿಂದ ಪ್ರಶಂಸೆ: 'ರಾಜ್ಯ ಸರ್ಕಾರವು ವಿದ್ಯಾಗಮ ಯೋಜನೆ ಆರಂಭಿಸುವ ಮೊದಲೇ ಅಂತಹ ಕಾರ್ಯಕ್ರಮ ಮುಳ್ಳೂರಿನಲ್ಲಿ ನಡೆಯುತ್ತಿತ್ತು. ಇಲಾಖೆಯ ಆಯುಕ್ತರು ಶಿಕ್ಷಕ ಸತೀಶ್ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದರು' ಎಂದು ಹಂಡ್ಲಿ ಕ್ಲಸ್ಟರ್‌ನ ಸಮೂಹ ಸಂಪನ್ಮೂಲ ವ್ಯಕ್ತಿ ಎಂ.ಟಿ.ಮನೋಹರ್ ಪ್ರತಿಕ್ರಿಯಿಸುತ್ತಾರೆ.

'ಶಿಕ್ಷಕರು ನಮಗೆ ಬೆಳಗ್ಗಿನ ಅವಧಿಯಲ್ಲಿ ಕಲಿಕಾಂಶದ ಮಾಹಿತಿ ಒಳಗೊಂಡಿರುವ ಕಾರ್ಡ್‌ನ ಫೋಟೊ ಮತ್ತು ಅದನ್ನು ವಿವರಿಸುವ ವಾಯ್ಸ್ ರೆಕಾರ್ಡ್ ಕಳುಹಿಸುತ್ತಾರೆ. ಅದನ್ನು ನಾವು ಸಂಜೆವರೆಗೂ ಅಭ್ಯಾಸ ಮಾಡುತ್ತೇವೆ' ಎಂದು ವಿದ್ಯಾರ್ಥಿನಿ ಪುಣ್ಯಾ ಹೇಳುತ್ತಾಳೆ.

> ಮನೆಯಲ್ಲಿ ನೆಟ್‌ವರ್ಕ್ ಸಿಗದ ಕಾರಣ ಅಟ್ಟಣಿಗೆ ನಿರ್ಮಿಸಿ ಮಕ್ಕಳಿಗೆ ಆನ್‌ಲೈನ್ ತರಗತಿ ತೆಗೆದುಕೊಳ್ಳುತ್ತಿದ್ದೇನೆ. ಸ್ವಂತ ಖರ್ಚಿನಲ್ಲಿ ಈ ವ್ಯವಸ್ಥೆ ಮಾಡಿಕೊಂಡಿದ್ದೇನೆ
>
> **ಸಿ.ಎಸ್. ಸತೀಶ್,** ಶಿಕ್ಷಕ

'ಸಿ.ಎಂ ಆಗಬೇಕೆಂಬ ಆಸೆ ಇಟ್ಟುಕೊಳ್ಳುವುದು ತಪ್ಪಲ್ಲ'

ಪ್ರಜಾವಾಣಿ ವಾರ್ತೆ


ಎಂ.ಬಿ.ಪಾಟೀಲ

ಮೈಸೂರು: 'ಮುಖ್ಯಮಂತ್ರಿ ಆಗಬೇಕೆಂಬ ಆಸೆ ನಿಶ್ಚಿತವಾಗಿ ನನಗೂ ಇದೆ. ಎಲ್ಲರಿಗೂ ಅಂತಹ ಆಸೆ ಇರುತ್ತದೆ. ಆಸೆ ಇಟ್ಟುಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ, ಅದು ದುರಾಸೆ ಆಗಬಾರದಷ್ಟೆ' ಎಂದು ಶಾಸಕ, ಕಾಂಗ್ರೆಸ್ ಮುಖಂಡ ಎಂ.ಬಿ.ಪಾಟೀಲ ಭಾನುವಾರ ಇಲ್ಲಿ ಹೇಳಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿ, 'ಮುಂದಿನ ಮುಖ್ಯಮಂತ್ರಿ ವಿಚಾರದಲ್ಲಿ ಕೆಲವರು ಅಭಿಮಾನದಿಂದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಭಿಮಾನದ ಮಾತುಗಳಿಗೆ ಕಡಿವಾಣ ಹಾಕಲು ಹೈಕಮಾಂಡ್ ಸೂಚಿಸಿದೆ. ವರಿಷ್ಠರ ಸೂಚನೆಯನ್ನು ನಾನು ಒಳಗೊಂಡಂತೆ ಎಲ್ಲರೂ ಪಾಲಿಸಬೇಕು. ಮುಂದಿನ ಮುಖ್ಯಮಂತ್ರಿ ವಿಚಾರ ಈಗ ಮುಗಿದ ಅಧ್ಯಾಯ' ಎಂದರು.

'ಕಾಂಗ್ರೆಸ್ ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಣೆ ಮಾಡಿ ಯಾವುದೇ ಚುನಾವಣೆ ಎದುರಿಸಿಲ್ಲ. ಕರ್ನಾಟಕ ಮಾತ್ರವಲ್ಲ; ಬೇರೆ ರಾಜ್ಯದಲ್ಲೂ ಮಾಡಿಲ್ಲ. ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸುವೆವು. 150 ಸ್ಥಾನಗಳನ್ನು ಪಡೆದು ಅಧಿಕಾರಕ್ಕೇರುವುದು ನಮ್ಮ ಗುರಿ' ಎಂದು ಹೇಳಿದರು.

ಪರ್ಯಾಯ ನಾಯಕರಿದ್ದಾರೆ: 'ಯಡಿಯೂರಪ್ಪ ಬಳಿಕ ಲಿಂಗಾಯತರಲ್ಲಿ ಪರ್ಯಾಯ ನಾಯಕರಿಲ್ಲ ಎಂಬುದು ಸುಳ್ಳು. ನಮ್ಮ ಪಕ್ಷದಲ್ಲಿ ನಾನು, ಶರಣಪ್ರಕಾಶ ಪಾಟೀಲ, ಈಶ್ವರ ಖಂಡ್ರೆ ಇದ್ದೇವೆ. ಬಿಜೆಪಿಯಲ್ಲಿ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಯತ್ನಾಳ, ವಿ.ಸೋಮಣ್ಣ ಸೇರಿದಂತೆ ಹಲವರು ಇದ್ದಾರೆ. ಸಮುದಾಯ ದೊಡ್ಡದಿದೆ' ಎಂದರು.

'ಯಾರು ಮುಖ್ಯಮಂತ್ರಿ ಆಗಬೇಕೆಂದು ಅವರಾಗಿಯೇ ಘೋಷಣೆ ಮಾಡಿದರೆ ಆಗುವುದಿಲ್ಲ. ಜನರು ಬಯಸಬೇಕು, ಪಕ್ಷ ಅಧಿಕಾರಕ್ಕೆ ಬರಬೇಕು, ಅಂತಿಮವಾಗಿ ಶಾಸಕರು ಮತ್ತು ಹೈಕಮಾಂಡ್ ಸೂಚಿಸಬೇಕು' ಎಂದು ತಿಳಿಸಿದರು.

ಆಮ್ಲಜನಕ ದುರಂತ: ಕೆಪಿಸಿಸಿಯಿಂದ 36 ಕುಟುಂಬಗಳಿಗೆ ತಲಾ ₹1 ಲಕ್ಷ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಮೇ 2ರಂದು ಸಂಭವಿಸಿದ ಆಮ್ಲಜನಕ ಕೊರತೆಯಿಂದ ಮೃತಪಟ್ಟಿದ್ದಾರೆ ಎನ್ನಲಾದ 36 ಮಂದಿಯ ಕುಟುಂಬಗಳಿಗೆ ಕೆಪಿಸಿಸಿಯು ತಲಾ ₹1 ಲಕ್ಷ ಪರಿಹಾರ ನೀಡಿದೆ.

ಭಾನುವಾರ ಜಿಲ್ಲೆಗೆ ಭೇಟಿ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 36 ಮಂದಿಯ ಮನೆಗಳಿಗೂ ತೆರಳಿ ಕಾಂಗ್ರೆಸ್ ಪಕ್ಷದ ವತಿಯಿಂದ ಚೆಕ್ ಹಸ್ತಾಂತರಿಸಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳ ಸಂಕಷ್ಟಕ್ಕೆ ಸ್ಪಂದಿಸುವ ಉದ್ದೇಶದಿಂದ ಕಾಂಗ್ರೆಸ್ ವತಿಯಿಂದ ಒಂದು ತಿಂಗಳವರೆಗೆ ಹಮ್ಮಿಕೊಂಡಿರುವ ಅಭಿಯಾನಕ್ಕೂ ಅವರು ಚಾಲನೆ ನೀಡಿದರು.

'ಆಮ್ಲಜನಕ ದುರಂತದಲ್ಲಿ 60ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಹೈಕೋರ್ಟ್ ನೇಮಿಸಿದ ತನಿಖಾ ಸಮಿತಿಯು 36 ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಹೇಳಿದೆ. ಇದರ ಆಧಾರದಲ್ಲಿ 36 ಜನರ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ. ಸರ್ಕಾರ 24 ಮಂದಿಯ ಕುಟುಂಬಗಳಿಗೆ ತಲಾ ₹ 2 ಲಕ್ಷ ಪರಿಹಾರ ನೀಡಿದೆ. ಉಳಿದವರಿಗೆ ಪರಿಹಾರ ನೀಡಲು ಮೀನ–ಮೇಷ ಎಣಿಸುತ್ತಿದೆ. ಇದು ಸರ್ಕಾರವೇ ಮಾಡಿರುವ ಕೊಲೆ. ಇದುವರೆಗೆ ಯಾರನ್ನೂ ಹೊಣೆಗಾರರನ್ನಾಗಿ ಮಾಡಿಲ್ಲ. ಅಧಿಕಾರಿಗಳು, ಮಂತ್ರಿಗಳ ಮೇಲೆ ಪ್ರಕರಣ ದಾಖಲಿಸಿ ಬಂಧಿಸಬೇಕು' ಎಂದು ಸುದ್ದಿಗೋಷ್ಠಿಯಲ್ಲಿ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

'ಮುಖ್ಯಮಂತ್ರಿ ಹಾಗೂ ಮಂತ್ರಿಗಳು ಬಂದು ಸಂತ್ರಸ್ತರ ಕುಟುಂಬಗಳಿಗೆ ಸಾಂತ್ವನ ಹೇಳಿಲ್ಲ. ಈ ಸರ್ಕಾರಕ್ಕೆ ಕಣ್ಣು, ಕಿವಿ, ಹೃದಯ ಇಲ್ಲ. ನಾವೂ ಇದುವರೆಗೆ ಕಾದೆವು. ಪಕ್ಷದ ಕಾರ್ಯಕರ್ತರು ನೀಡಿದ ಹಣವನ್ನು ಕೆಪಿಸಿಸಿಯ ವತಿಯಿಂದ ವಿತರಿಸುತ್ತಿದ್ದೇವೆ' ಎಂದರು.


ಮೇ 2ರಂದು ಚಾಮರಾಜನಗರದ ಕೋವಿಡ್ ಆಸ್ಪತ್ರೆಯಲ್ಲಿ ಮೃತರಾದ ಕೊಳ್ಳೇಗಾಲ ತಾಲ್ಲೂಕಿನ ಪಾಳ್ಯ ಗ್ರಾಮದ ಬಿಳಿಗಿರಿನಾಯಕ ಅವರ ಪತ್ನಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭಾನುವಾರ ಸಾಂತ್ವನ ಹೇಳಿದರು

'ಸಿ.ಎಂ.ಗೆ ಕುರ್ಚಿಯೇ ಮುಖ್ಯ'

'ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಕುರ್ಚಿ ಮುಖ್ಯವೇ ಹೊರತು ಜನರಲ್ಲ. ಜನರು ಎಲ್ಲಿ ರೊಚ್ಚಿಗೇಳುತ್ತಾರೋ, ಹೊಡೆದು ಬಿಡುತ್ತಾರೋ ಎಂಬ ಭಯ ಅವರಿಗಿದೆ. ಜನರಲ್ಲಿ ಆಕ್ರೋಶ ಇದೆ ಎಂದು ಗುಪ್ತಚರ ಇಲಾಖೆ ಮಾಹಿತಿ ನೀಡಿದೆ. ಹೀಗಾಗಿ, ಅವರು ಇಲ್ಲಿಗೆ ಬರುವ ಧೈರ್ಯ ಮಾಡಿಲ್ಲ' ಎಂದು ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

ಸಾವಿನ ಲೆಕ್ಕ ಸುಳ್ಳು: 'ರಾಜ್ಯದಲ್ಲಿ ಕೋವಿಡ್‌ನಿಂದ 3,27,985 ಮಂದಿ ಮೃತಪಟ್ಟಿದ್ದಾರೆ ಎಂಬ ಮಾಹಿತಿ ಇದೆ. ಆದರೆ, 29 ಸಾವಿರ ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಇದೆಲ್ಲಾ ಸರ್ಕಾರವೇ ಮಾಡಿರುವ ಕೊಲೆ. ಅದನ್ನು ಮುಚ್ಚಿಡುವುದಕ್ಕಾಗಿ ಸಾವಿನ ಸುಳ್ಳು ಲೆಕ್ಕ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

ಸುದ್ದಿ 2 ನಿಮಿಷ

9 ಮಕ್ಕಳ ದತ್ತು ಪಡೆದ ಸುಧಾಕರ್ ನೇತೃತ್ವದ ಸಾಯಿಕೃಷ್ಣ ಟ್ರಸ್ಟ್

ಚಿಕ್ಕಬಳ್ಳಾಪುರ: ಕೋವಿಡ್‌ನಿಂದ ತಂದೆ ಮತ್ತು ತಾಯಿಯನ್ನು ಕಳೆದುಕೊಂಡು ಅನಾಥರಾದ ಜಿಲ್ಲೆಯ 9 ಮಕ್ಕಳನ್ನು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ನೇತೃತ್ವದ ಸಾಯಿಕೃಷ್ಣ ಟ್ರಸ್ಟ್ ದತ್ತು ಪಡೆದಿದೆ. ಪ್ರತಿ ಮಕ್ಕಳ ಹೆಸರಿನಲ್ಲಿ ₹ 1 ಲಕ್ಷ ಠೇವಣಿ ಸಹ ಇರಿಸಲಾಗಿದೆ.

ಭಾನುವಾರ ಇಲ್ಲಿ ನಡೆದ ಕೆಂಪೇಗೌಡ ಜಯಂತಿಯಲ್ಲಿ ಠೇವಣಿಯ ಬಾಂಡ್‌ಗಳನ್ನು ಮಕ್ಕಳಿಗೆ ನೀಡಿ ಮಾತನಾಡಿದ ಸುಧಾಕರ್, 'ಕೋವಿಡ್‌ನಿಂದ ಬಹಳಷ್ಟು ಮಕ್ಕಳು ಪೋಷಕರನ್ನು ಕಳೆದುಕೊಂಡು ಅನಾಥರಾಗಿದ್ದಾರೆ. ಅವರ ನೆರವಿಗೆ ನಿಲ್ಲಬೇಕಾದುದು ನಮ್ಮ ಕರ್ತವ್ಯ. ತಂದೆ, ತಾಯಿ ಇಬ್ಬರನ್ನೂ ಕಳೆದುಕೊಂಡ ಜಿಲ್ಲೆಯ ಮಕ್ಕಳನ್ನು ದತ್ತು ಪಡೆಯುವೆ' ಎಂದರು.

'ನಮ್ಮ ಸಾಯಿಕೃಷ್ಣ ಚಾರಿಟಬಲ್ ಟ್ರಸ್ಟ್ ಮೂಲಕ ಶೈಕ್ಷಣಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಲಾಗುವುದು. ಈಗ ಮಕ್ಕಳ ಹೆಸರಿನಲ್ಲಿ ವೈಯಕ್ತಿಕವಾಗಿ ಠೇವಣಿ ಇಟ್ಟಿದ್ದೇನೆ' ಎಂದರು.



ರಾಜ್ಯ ಸರ್ಕಾರ ಸಹಜವಾಗಿ ಉಸಿರಾಡುತ್ತಿದೆ: ಸಚಿವ ಜೋಶಿ

ಧಾರವಾಡ: 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರದ ಶ್ವಾಸಕೋಶ ಸರಿಯಾಗಿದೆ. ಸರ್ಕಾರ ಸಹಜವಾಗಿ ಉಸಿರಾಡುತ್ತಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾರ್ಮಿಕವಾಗಿ ನುಡಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯ ಬಿಜೆಪಿಯಲ್ಲಿ ಆಂತರಿಕ ಕಚ್ಚಾಟವಿಲ್ಲ. ಸುತ್ತೂರು ಶ್ರೀಗಳ ತಾಯಿ ನಿಧನರಾದ ಕಾರಣ ಅವರನ್ನು ಭೇಟಿಯಾಗಲು ರಾಜಕಾರಣಿಗಳು ಹೋಗಿದ್ದು ತಪ್ಪಾ? ಎಲ್ಲವನ್ನೂ ರಾಜಕೀಯ ಎಂದರೆ ಹೇಗೆ' ಎಂದು ಪ್ರಶ್ನಿಸಿದರು.

'ಪರೀಕ್ಷೆ ಫಲಿತಾಂಶಕ್ಕೆ ಕಾಯುತ್ತಿದ್ದೇವೆ' ಎಂಬ ಸಚಿವ ಸಿ.ಪಿ.ಯೋಗೇಶ್ವರ್ ಹೇಳಿಕೆಗೆ ಪ್ರತಿಕ್ರಿಸಿದ ಅವರು, 'ಯೋಗೇಶ್ವರ್ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಪರೀಕ್ಷೆ ಬರೆದಿದ್ದಾರೆಯೋ ಅದರ ಕುಲಪತಿ ಅರುಣ್ ಸಿಂಗ್ ಈಗಾಗಲೇ ಉತ್ತರ ಕೊಟ್ಟಿದ್ದಾರೆ' ಎಂದು ತಿರುಗೇಟು ನೀಡಿದರು.

'ಕೇಂದ್ರದ ಸಚಿವ ಸಂಪುಟ ವಿಸ್ತರಣೆ ವಿಚಾರ ಮಾಧ್ಯಮಗಳ ಸೃಷ್ಟಿ. ಆ ಬಗ್ಗೆ ಪ್ರಧಾನಿ ತೀರ್ಮಾನ ಕೈಗೊಳ್ಳುತ್ತಾರೆ. ಯಾರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು, ಯಾರನ್ನು ಬಿಡಬೇಕು ಅವರಿಗೆ ಗೊತ್ತು. ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.

4 ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ ಒಳನಾಡಿನಲ್ಲಿ ಮುಂಗಾರು ಬಿರುಸುಗೊಂಡಿರುವುದರಿಂದ ಜೂ.28 ರಂದು ಈ ಭಾಗದ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಕರಾವಳಿ ಜಿಲ್ಲೆಗಳಲ್ಲಿ ಜುಲೈ 1 ರವರೆಗೆ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದಾಗಿ ಮಾಹಿತಿ ಬಂದಿತ್ತು. ಆದರೆ, ದಿಢೀರ್ ಬದಲಾವಣೆಯಿಂದ ಮುಂಗಾರು ಉತ್ತರ ಒಳನಾಡಿನಲ್ಲಿ ಚುರುಕಾಗಿದೆ'.

'ಈ ಭಾಗದ ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ್ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಆರೆಂಜ್ ಅಲರ್ಟ್' ಹಾಗೂ ಕೊಪ್ಪಳದಲ್ಲಿ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ' ಎಂದು ಇಲಾಖೆ ಮಾಹಿತಿ ನೀಡಿದೆ.

'ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಮೋಡ ಕವಿದ ವಾತಾವರಣ ಇರಲಿದೆ. ಕೆಲವೆಡೆ ಸಾಧಾರಣ ಮಳೆಯಾಗಬಹುದು' ಎಂದು ಹೇಳಿದೆ.

ಮಳೆ– ಎಲ್ಲಿ, ಎಷ್ಟು?: ರಾಯಚೂರು ಜಿಲ್ಲೆಯ ಮಸ್ಕಿ ಭಾಗದಲ್ಲಿ 14 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಮಂಗಳೂರು, ಯಲಬುರ್ಗಾ 6, ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ 5, ಕೊಪ್ಪಳ 4, ಸುಳ್ಯ, ಬೆಳ್ತಂಗಡಿ, ಪುತ್ತೂರು 3, ಗದಗ, ಕುಂದಾಪುರ, ಮೂಡುಬಿದರೆ, ತೊಂಡೇಬಾವಿ 2, ಕಾರವಾರ, ಬಾಗಲಕೋಟೆ, ಮಡಿಕೇರಿ, ಹಾಸನ, ಗಂಗಾವತಿ, ಮಾಲೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	94.58	3,328	7,987
ಹಾರಂಗಿ	2,859	2,840.11	527	80
ಕಬಿನಿ	2284.00	2,275.54	1,649	700
ಹೇಮಾವತಿ	2,922	2,895.13	1,745	200
ಲಿಂಗನಮಕ್ಕಿ	1,819	1,785.60	4467	-
ಸೂಪಾ (ಮೀ)	564	539.17	4,175	4,175
ಮಾಣಿ	594	573.76	325	-
ತುಂಗಭದ್ರಾ	1,633	1,608.06	12,049	266
ಮಲಪ್ರಭಾ	2079.5	2,062.40	1,201	194
ಘಟಪ್ರಭಾ	2175	2,132.83	5,043	120
ಭದ್ರಾ	186	154	2512	81
ಆಲಮಟ್ಟಿ (ಮೀ)	519.6	517.39	21,990	20,451
ನಾರಾಯಣಪುರ (ಮೀ)	492.25	489.13	25,000	31,720

*ನೆಲಮಟ್ಟದಿಂದ


ರಾಯಚೂರು ಜಿಲ್ಲೆಯ ಮಸ್ಕಿಯ ಗಾಂಧಿನಗರದ ವಾರ್ಡ್ ಜಲಾವೃತಗೊಂಡಿರುವುದು



ಪ್ರಗತಿಪರ ಚಿಂತಕ ಪ್ರಶಸ್ತಿ

ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿನ ಬೈಲೂರು ನಿಷ್ಕಲ ಮಂಟಪದಲ್ಲಿ ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನವು ಸಂಶೋಧಕ ಡಾ.ಎಂ.ಎಂ. ಕಲಬುರ್ಗಿ ಅವರ ಹೆಸರಿನಲ್ಲಿ ನೀಡಿದ 'ಪ್ರಗತಿಪರ ಚಿಂತಕ ಪ್ರಶಸ್ತಿ'ಯನ್ನು ನಿಜಗುಣಪ್ರಭು ಸ್ವಾಮೀಜಿ ಅವರಿಗೆ ಭಾನುವಾರ ಪ್ರದಾನ ಮಾಡಲಾಯಿತು. ಧಾರವಾಡದ ಜಾನಪದ ಸಂಶೋಧನಾ ಕೇಂದ್ರದ ವಿಶ್ವೇಶ್ವರಿ ಹಿರೇಮಠ, ಅಥಣಿಯ ವಿಮೋಚನಾ ಸಂಸ್ಥೆಯ ಬಿ.ಎಲ್. ಪಾಟೀಲ, ಸಾಹಿತಿ ಡಾ.ಬಾಳಣ್ಣ ಶೀಗೆಹಳ್ಳಿ, ಜಾನಪದ ಸಂಶೋಧನಾ ಕೇಂದ್ರದ ಅಧ್ಯಕ್ಷ ಬಸವಲಿಂಗಯ್ಯ ಹಿರೇಮಠ, ಪ್ರೊಬೆಷನರಿ ತಹಶೀಲ್ದಾರ್ ಮಹೇಶ್ ಪತ್ರಿ ಇದ್ದಾರೆ –ಪ್ರಜಾವಾಣಿ ಚಿತ್ರ

'ಕೈ' ತಿಕ್ಕಾಟ: ವರಿಷ್ಠರ ಭೇಟಿಗೆ 'ತಟಸ್ಥ' ಬಣ

ಒಂದನೇ ಪುಟದಿಂದ

ಪರಮೇಶ್ವರ– ದಿನೇಶ್ ಭೇಟಿ: ಈ ಮಧ್ಯೆ, ಮುಂದಿನ ಮುಖ್ಯಮಂತ್ರಿ ಬಗ್ಗೆ ಶಾಸಕರು ನೀಡುತ್ತಿರುವ ಹೇಳಿಕೆಗಳು ಮತ್ತು ಪಕ್ಷದಲ್ಲಿ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಕೆಪಿಸಿಸಿ ಮಾಜಿ ಅಧ್ಯಕ್ಷರೂ ಆಗಿರುವ ಶಾಸಕ ಜಿ. ಪರಮೇಶ್ವರ ಮತ್ತು ದಿನೇಶ್ ಗುಂಡೂರಾವ್ ಭಾನುವಾರ ಚರ್ಚೆ ನಡೆಸಿದ್ದಾರೆ.

ಚರ್ಚೆಯ ನಂತರ ಮಾತನಾಡಿದ ಪರಮೇಶ್ವರ, 'ನಮ್ಮ ಭೇಟಿಗೆ ರಾಜಕೀಯದ ಅರ್ಥ ಕಲ್ಪಿಸುವುದು ಬೇಕಿಲ್ಲ. ರಾಜಕೀಯ ಬೆಳವಣಿಗೆ ಎಂಬ ಅರ್ಥ ಕಲ್ಪಿಸುವುದು ಬೇಡ. ಕೋವಿಡ್ ಕಾರಣದಿಂದ ಇತ್ತೀಚೆಗೆ ನಮ್ಮ ಭೇಟಿ ಸಾಧ್ಯವಾಗಿರಲಿಲ್ಲ' ಎಂದರು.

'ಭಾವಿ ಮುಖ್ಯಮಂತ್ರಿ' ಬಗ್ಗೆ ಕೇಳಿದ ಪ್ರಶ್ನೆಗೆ, 'ಇದೆಲ್ಲ ನೀವೇ (ಮಾಧ್ಯಮಗಳು) ಕಲ್ಪಿಸಿರುವುದು. ನೀವೇ ಹೇಳುವುದರಿಂದ ವಿಷಯ ದೊಡ್ಡದಾಗುತ್ತಿದೆ. ಈ ಹೇಳಿಕೆಗಳಿಗೆ ನಾವು ಯಾರೂ ಬದ್ಧರಾಗಿಲ್ಲ. ಶಾಸಕರು ಸಾಂದರ್ಭಿಕವಾಗಿ ಹೇಳಿಕೆಗಳನ್ನು ನೀಡಿರಬಹುದು ಅಷ್ಟೆ' ಎಂದರು.

'ಮೈಲಾರಿ' ವ್ಯವಸ್ಥಾಪಕ ನಿರ್ದೇಶಕ ಬಂಧನ

ಬೆಂಗಳೂರು: ಅಧಿಕ ಬಡ್ಡಿ ಆಮಿಷವೊಡ್ಡಿ ಸಾರ್ವಜನಿಕರಿಂದ ಹಣ ಸಂಗ್ರಹಿಸಿ ವಂಚಿಸಿರುವ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಧಾನಸೌಧ ಠಾಣೆ ಪೊಲೀಸರು, 'ಮೈಲಾರಿ ಆಗ್ರೋ ಪ್ರೊಡಕ್ಟ್' ಕಂಪನಿ ವ್ಯವಸ್ಥಾಪಕ ನಿರ್ದೇಶಕ ಮಹೇಶ್ (42) ಅವರನ್ನು ಬಂಧಿಸಿದ್ದಾರೆ.

ಹಣ ಹೂಡಿಕೆ ಮಾಡಿ ವಂಚನೆಗೀಡಾಗಿದ್ದ ಜೆ.ಪಿ. ನಗರದ ಮಹೇಶ್ ಎಂಬುವರು ದೂರು ನೀಡಿದ್ದರು. ಅದರನ್ವಯ ಭರತ್, ಮಹೇಶ್, ಪ್ರಕಾಶ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

'ಆರೋಪಿ ಭರತ್ ತೀರಿಕೊಂಡಿದ್ದಾರೆ. ಇನ್ನೊಬ್ಬ ಆರೋಪಿ ಪ್ರಕಾಶ್ ವಿಚಾರಣೆ ಮಾಡಲಾಗಿದ್ದು, ಅವರ ಪಾತ್ರ ಪ್ರಕರಣದಲ್ಲಿ ಕಂಡುಬಂದಿಲ್ಲ. ತಾವೇ ಕಂಪನಿ ಸೃಷ್ಟಿಸಿಕೊಂಡಿದ್ದ ಆರೋಪಿ ಮಹೇಶ್, ಇತರರನ್ನು ನಿರ್ದೇಶಕರನ್ನಾಗಿ ಮಾಡಿಕೊಂಡಿದ್ದರು. ಆದರೆ, ಕಂಪನಿ ಬಗ್ಗೆ ನಿರ್ದೇಶಕರಿಗೆ ಯಾವುದೇ ಮಾಹಿತಿಯನ್ನು ಮಹೇಶ್ ತಿಳಿಸುತ್ತಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದೆ' ಎಂದೂ ತಿಳಿಸಿವೆ.


ಮಹೇಶ್

₹ 2.50 ಕೋಟಿ ವಂಚನೆ ದಾಖಲೆ: '₹ 10 ಸಾವಿರ, ₹ 25 ಸಾವಿರ, ₹ 50 ಸಾವಿರ ಹಾಗೂ ₹ 1 ಲಕ್ಷ ಮೊತ್ತದ ಹೂಡಿಕೆ ಯೋಜನೆಗಳನ್ನು ಕಂಪನಿಯಿಂದ ರೂಪಿಸಲಾಗಿತ್ತು. ಬೆಂಗಳೂರು, ತುಮಕೂರು, ಮೈಸೂರು ಹಾಗೂ ರಾಜ್ಯದ ಹಲವು ಜಿಲ್ಲೆಗಳ ಜನ ಹಣ ಹೂಡಿಕೆ ಮಾಡಿರುವ ಮಾಹಿತಿ ಇದೆ. ಸುಮಾರು ₹ 2.50 ಕೋಟಿಯಷ್ಟು ವಂಚನೆಯಾಗಿರುವುದಕ್ಕೆ ಸದ್ಯ ದಾಖಲೆ ಸಿಕ್ಕಿದೆ' ಎಂದೂ ಮೂಲಗಳು ತಿಳಿಸಿವೆ.

'ಪ್ರಕರಣದಲ್ಲಿ ಹೆಚ್ಚು ಜನರಿಗೆ ವಂಚನೆಯಾಗಿರುವ ಮಾಹಿತಿ ಇದೆ. ಮೈಲಾರಿ ಆಗ್ರೋ ಪ್ರೊಡಕ್ಟ್ ಕಂಪನಿಯಲ್ಲಿ ಹೂಡಿಕೆ ಮಾಡಿ ಹಣ ಕಳೆದುಕೊಂಡವರು ಯಾರಾದರೂ ಇದ್ದರೆ ಠಾಣೆಗೆ ಮಾಹಿತಿ ನೀಡಬಹುದು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಕೋವಿಡ್: ನೂರರ ಗಡಿಯೊಳಗೆ ಮರಣ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರ ಜತೆಗೆ ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಕೂಡ ಇಳಿಮುಖ ಕಂಡಿದೆ. ಹೊಸದಾಗಿ 3,604 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರಲ್ಲಿ 89 ಮಂದಿ ಸಾವಿಗೀಡಾಗಿದ್ದಾರೆ.

ಏಪ್ರಿಲ್ ಮೂರನೇ ವಾರದಲ್ಲಿ ದಿನವೊಂದಕ್ಕೆ ದೃಢಪಡುತ್ತಿದ್ದ ಮರಣ ಪ್ರಕರಣ ಸಂಖ್ಯೆ ನೂರರ ಗಡಿ ದಾಟಿತ್ತು. ಮೇ ತಿಂಗಳ ಮೊದಲ ವಾರದಲ್ಲಿ ಈ ಸಂಖ್ಯೆ 500ರ ಗಡಿಗೆ ಏರಿಕೆ ಕಂಡಿತ್ತು.

ಒಂದು ದಿನದ ಅವಧಿಯಲ್ಲಿ 1.64 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 2.18 ರಷ್ಟು ವರದಿಯಾಗಿದೆ. ರಾಜ್ಯದ 29 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗಿವೆ. ಬೆಂಗಳೂರಿನಲ್ಲಿ 788 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಸಂಖ್ಯೆ 13 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.34 ಲಕ್ಷ ದಾಟಿದೆ.

ಮರಣ ಪ್ರಮಾಣ ದರವು ಶೇ 2.46 ರಷ್ಟು ವರದಿಯಾಗಿದೆ. ರಾಜ್ಯದ 21 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ಮೈಸೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 15 ಮಂದಿ, ಬೆಂಗಳೂರಿನಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 34,743ಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 1.01 ಲಕ್ಷಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 7,699 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 26.98 ಲಕ್ಷ ದಾಟಿದೆ.

ಒಳನೋಟ
ಮುಗಿಯದ ಋಣಭಾರ

ಬೆಂಗಳೂರು: 'ಕೃಷಿ ಸಾಲ, ಜಟಿಲ ವರ್ತುಲ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜೂ.27) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಸಾಲ ನೀಡುವಲ್ಲಿ ತಾರತಮ್ಯ



ಕೃಷಿಗೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ಕಾಯ್ದೆಗಳನ್ನು ಜಾರಿಗೆ ತರುವ ಮುನ್ನ ಅದರ ಸಾಧಕ ಬಾಧಕಗಳನ್ನು ಅರಿಯಬೇಕು. ಇಲ್ಲದಿದ್ದರೆ, ಮುಂದೆ ಅಪಾಯ ತಪ್ಪಿದ್ದಲ್ಲ. ಕೃಷಿ ಸಾಲ ಪಡೆಯುವ ಬಹುತೇಕರು ದೊಡ್ಡ ಹಿಡುವಳಿದಾರರೇ ಆಗಿರುತ್ತಾರೆ. ಸಣ್ಣ ಹಿಡುವಳಿದಾರರಿಗೆ ಹೆಸರಿಗೆ ಮಾತ್ರ ಸಾಲ ನೀಡುತ್ತಾರೆ. ಈ ತಾರತಮ್ಯ ನಿಲ್ಲಬೇಕು.

ಎನ್.ಎಂ.ಅಂಬಲಿಯವರ, ಗದಗ

ಷರತ್ತುಗಳು ಏಕೆ?



ಸಾಲದ ಸುಳಿಯಲ್ಲಿ ಸಿಲುಕಿಕೊಂಡಿರುವ ಅನೇಕ ರೈತರು ತಮ್ಮ ಸಂಕಷ್ಟಗಳಿಗೆ ಸರ್ಕಾರ ಸ್ಪಂದಿಸುತ್ತದೆ ಎಂಬ ನಿರೀಕ್ಷೆಯಲ್ಲಿದ್ದಾರೆ. ಇದರ ನಡುವೆ ಅಲ್ಪಾವಧಿ ಕೃಷಿ ಸಾಲಕ್ಕೆ ಷರತ್ತುಗಳನ್ನು ವಿಧಿಸುವುದು ಎಷ್ಟರಮಟ್ಟಿಗೆ ಸರಿ? ಸರ್ಕಾರ ರೈತರ ಸಂಕಷ್ಟಗಳಿಗೆ ಸ್ಪಂದಿಸಬೇಕು. ಗಾಯದ ಮೇಲೆ ಬರೆ ಎಳೆಯಬಾರದು.

ಸುರೇಶ, ಬೆಳಗಾವಿ

ಹೆಸರಿಗೆ ಮಾತ್ರ ಸಾಲ ಮನ್ನಾ



ರೈತರ ವಿಚಾರದಲ್ಲಿ ರಾಜಕಾರಣಿಗಳು ಭಾಷಣಕ್ಕೆ ಹಾಗೂ ಅಧಿಕಾರಿಗಳು ವರದಿ ನೀಡುವುದಕ್ಕೆ ಮಾತ್ರ ಸೀಮಿತ. ಅನ್ನದಾತರಿಗೆ ಬೆಳೆಗೆ ತಕ್ಕ ಮಳೆಯಾಗುವುದಿಲ್ಲ. ಉತ್ತಮ ಗುಣಮಟ್ಟದ ಬೀಜ ಸಿಗುತ್ತಿಲ್ಲ. ಬೆಳೆಗಳಿಗೆ ಉತ್ತಮ ಬೆಲೆ ಸಿಗುವುದೇ ವಿರಳ. ಬೆಳೆ ಸಾಲ ಮನ್ನಾ ಎಂದು ಸರ್ಕಾರ ಹೇಳುತ್ತದೆ. ಆದರೆ, ಬ್ಯಾಂಕಿನವರ ಉತ್ತರ ಬೇರೆಯೇ ಇರುತ್ತದೆ.

ಶ್ರೀನಿವಾಸ್, ಬೆಂಗಳೂರು

ಸಾಲದ ಸುಳಿಯಿಂದ ಮುಕ್ತಿ ನೀಡಿ



'ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲೇ ಸಾಯುತ್ತಾನೆ' ಎಂದು ಶಾಲಾ ದಿನಗಳಲ್ಲಿ ಕೇಳಿದ್ದ ಮಾತು ಇಂದಿಗೂ ಪ್ರಸ್ತುತವಾಗಿದೆ. ರೈತರು ಮಾಡುವ ಕೃಷಿ ಸಾಲವೇ ಇದಕ್ಕೆ ಕಾರಣವಾಗಿದೆ. ಮಾಡಿದ ಸಾಲ ತೀರಿಸಲಾರದೆ, ಪರದಾಟ ತಪ್ಪಿದ್ದಲ್ಲ. ಕೆಲವರು ದಿಕ್ಕು ತೋಚದೆ, ಸಾವಿನ ದಾರಿಯೂ ಹಿಡಿಯುವರು. ಈ ದುಸ್ಥಿತಿಯನ್ನು ಸರ್ಕಾರಗಳೇ ನಿವಾರಿಸಬೇಕು.

ಅನುರಾಧ, ದಾವಣಗೆರೆ

ಸಾಲ ತೀರಿಸಲು ಕಾಲಾವಕಾಶ ನೀಡಲಿ



ಬೆಳೆಯಿಂದ ಸಿಗುವ ಆದಾಯಕ್ಕಿಂತ ಬೆಳೆಗೆ ತಗಲುವ ವೆಚ್ಚವೇ ಅಧಿಕವಾಗಿರುತ್ತದೆ. ಈ ಸಂಕಷ್ಟದಿಂದ ಪಾರಾಗಲು ಸಾಲದ ಮೊರೆ ಹೋಗುತ್ತಾರೆ, ಮತ್ತೊಂದು ದೊಡ್ಡ ಸಂಕಷ್ಟಕ್ಕೆ ಸಿಲುಕುತ್ತಾರೆ. ಕಾರಣಾಂತರಗಳಿಂದ ಪಡೆದ ಸಾಲ ಹಿಂಪಾವತಿಗೆ ಸಾಧ್ಯವಾಗುವುದಿಲ್ಲ. ಸಾಲ ವಸೂಲಾತಿ ವಿಧಾನಗಳಿಗೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸಾಲ ತೀರಿಸಲು ರೈತರಿಗೆ ಕಾಲಾವಕಾಶ ಹಾಗೂ ವಿನಾಯಿತಿ ಸಿಗುವಂತಾಗಲಿ.

ಎಸ್.ಮರಳಸಿದ್ಧೇಶ್ವರ, ಚಿತ್ರದುರ್ಗ

ಸಾಹುಕಾರನಾಗಲು ಸಾಲದ ಅಡ್ಡಿ



ಸಹಕಾರ ಸಂಘಗಳಿಂದ ಸಿಗುವ ಸಾಲದ ಪ್ರಯೋಜನವನ್ನು ಅಧಿಕಾರಿಶಾಹಿ ಹಾಗೂ ರಾಜಕಾರಣಿಗಳ ಆಪ್ತರು ಮಾತ್ರ ಹೆಚ್ಚಾಗಿ ಪಡೆದುಕೊಳ್ಳುತ್ತಿದ್ದಾರೆ. ಸಾಮಾನ್ಯ ರೈತ ಸಾಲ ಕೇಳಿದರೆ, ಈ ಬಾರಿ ಬಜೆಟ್ ಇಲ್ಲ, ನಿಮ್ಮ ಸಾಲದ ಅರ್ಜಿ ಪಾಸಾಗಿಲ್ಲ ಎಂದು ಸಬೂಬುಗಳನ್ನು ಹೇಳುತ್ತಾರೆ. ರೈತ ಸಾಹುಕಾರನಾಗದೆ, ಸಾಲಗಾರನಾಗಿಯೇ ಉಳಿಯುತ್ತಿದ್ದಾನೆ. ಸಾಲ ನೀಡಲು ಇರುವ ಮಾನದಂಡಗಳನ್ನು ಪರಿಷ್ಕೃತಗೊಳಿಸಿ, ರೈತರ ಪರ ನಿಲ್ಲಬೇಕು.

ಮೃತ್ಯುಂಜಯ, ಹಾವೇರಿ

ಶಿಕ್ಷಣ ಎಂದರೆ ಖಾಲಿ ಡಬ್ಬಿ ತುಂಬುವುದಲ್ಲ, ದೀಪ ಹಚ್ಚುವುದು

–ಡಬ್ಲ್ಯೂ.ಬಿ. ಯೇಟ್ಸ್



ಕಲಿಕೆಗೆ ಮೆಟ್ಟಿಲು ಸಂಗೀತ, ಕಲೆ

ಪ್ರೊ. ಎಸ್.ಕೆ. ಜಾರ್ಜ್

ಮಕ್ಕಳಿಗೆ ಪ್ರೀತಿಯಿಂದ ಕಲಿಸಿ, ಕಲಿಕೆಯಲ್ಲಿ ಸ್ವಾತಂತ್ರ್ಯ ನೀಡಿ. ಇದರಿಂದ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡುತ್ತದೆ ಎಂಬುದನ್ನು ಚಿಂತಕರು ಹೇಳುತ್ತಲೇ ಬಂದಿದ್ದಾರೆ. ಇದರ ಜೊತೆಗೆ ಕಲ್ಪನೆ ಹಾಗೂ ಸೃಜನಶೀಲತೆ ಮೂಲಕ ಪ್ರತಿಯೊಂದು ಮಗುವಿನ ಸರ್ವಾಂಗೀಣ ವಿಕಾಸಕ್ಕೆ ನೆರವಾಗಲು ಸಾಧ್ಯ ಎಂಬುದು ಕೂಡ ಸಾಬೀತಾಗಿದೆ. ಈ ತರಹದ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ನೀಡ ಬಯಸುವ ಪೋಷಕರು 'ವಾಲ್ಡಾರ್ಫ್' ವಿಧಾನವನ್ನು ಯತ್ನಿಸಬಹುದು.

ವಾಲ್ಡಾರ್ಫ್ ವಿಧಾನವು ಮಕ್ಕಳಿಗೆ ಸಮಗ್ರವಾಗಿ ಶಿಕ್ಷಣ ಕಲಿಸುವುದು. ಅಂದರೆ ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕವಾಗಿ ಸಂಪೂರ್ಣ ಕಲಿಕೆಯನ್ನು ಇದು ಒಳಗೊಂಡಿದೆ. ಕಲಿಕೆಯಲ್ಲಿ ಪಠ್ಯವಲ್ಲದೇ ಕಲೆ, ಸಂಗೀತ, ದೈಹಿಕ ಹಾಗೂ ಪ್ರಾಯೋಗಿಕ ಚಟುವಟಿಕೆಗಳಿರುತ್ತವೆ. ಹಾಗೆಯೇ ಪ್ರಕೃತಿಯ ಬಗ್ಗೆ ಪಾಠಗಳೂ ಇರುತ್ತವೆ. ಚಿತ್ರಕಲೆ, ಶಿಲ್ಪಕಲೆ, ಕಸೂತಿ, ಅಡುಗೆ, ಹೊಲಿಗೆ ಮೊದಲಾದವುಗಳ ಬಗ್ಗೆ ಕಲಿಸುವ ಮೂಲಕ ಕಲಿಕೆಯ ಬಗ್ಗೆ ಆಸಕ್ತಿ ಮೂಡಿಸುವುದು ಇದರ ಉದ್ದೇಶ. ಮಕ್ಕಳಿಗೆ ಪರೀಕ್ಷೆ ನಡೆಸುವುದು ಅಥವಾ ಅಂಕ ನೀಡುವ ಅಗತ್ಯವಿಲ್ಲ ಎಂದು ಈ ವಿಧಾನ ಪ್ರತಿಪಾದಿಸುತ್ತದೆ. ಶಿಕ್ಷಣದ ಕುರಿತು ಆಸ್ಟ್ರಿಯಾದ ರುಡಾಲ್ಫ್ ಸ್ಟೀನರ್ ಚಿಂತನೆಗಳನ್ನು ಆಧರಿಸಿ 20ನೇ ಶತಮಾನದ ಆರಂಭದಲ್ಲಿ ಈ ಶಿಕ್ಷಣ ಪದ್ಧತಿಯನ್ನು ಆರಂಭಿಸಲಾಯಿತು. ಈಗ ಬೆಂಗಳೂರು ಸೇರಿದಂತೆ ಭಾರತದ ಬಹುತೇಕ ದೊಡ್ಡ ನಗರಗಳಲ್ಲಿ ಈ ತರಹದ ಶಾಲೆಗಳಿವೆ.

ವಾಲ್ಡಾರ್ಫ್ ವಿಧಾನ



ಶಾಲೆಯಲ್ಲಿ ಮನೆಯಂತಹ ವಾತಾವರಣ ಕಲ್ಪಿಸುವುದರಿಂದ ಯಾವುದೇ ಭಯ, ಹಿಂಜರಿಕೆಯಿಲ್ಲದೇ ಮಕ್ಕಳು ಕಲಿಕೆಯಲ್ಲಿ ಸಂಪೂರ್ಣ ತೊಡಗಿಕೊಳ್ಳುತ್ತಾರೆ. 2–3 ವರ್ಷದ ಮಕ್ಕಳಿಂದ 7– 8 ವರ್ಷ ವಯಸ್ಸಿನವರೆಗಿನ ಮಕ್ಕಳು ತಮ್ಮಲ್ಲಿರುವ ಸಾಮರ್ಥ್ಯ, ಆಸಕ್ತಿ ಕಂಡುಕೊಳ್ಳುವುದು ಸಂಪೂರ್ಣ ಸ್ವಾತಂತ್ರ್ಯವಿರುವ ಕಲಿಕಾ ವಾತಾವರಣವನ್ನು ಒದಗಿಸಿದಾಗಲೇ.

ಮಕ್ಕಳು ಯಾವ ವಯಸ್ಸಿನವರು, ಅವರ ಕಲಿಕಾ ಸಾಮರ್ಥ್ಯ ಎಷ್ಟಿದೆ ಎಂಬುದರ ಮೇಲೆ ಪಠ್ಯವನ್ನು ರೂಪಿಸಲಾಗುತ್ತದೆ. ಅದು ಅವರ ಮಾನಸಿಕ ಬೆಳವಣಿಗೆಗೆ ಪೂರಕವಾಗಿರಬೇಕು. ಉದಾಹರಣೆಗೆ ಚಿಕ್ಕ ಮಕ್ಕಳು ತಮ್ಮ ಓರಗೆಯ ಮಕ್ಕಳೊಂದಿಗೆ ಆಟವಾಡುತ್ತ, ನಿಧಾನವಾಗಿ ಸಾಮಾಜಿಕ ಬಾಂಧವ್ಯ ಬೆಳೆಸಿಕೊಳ್ಳುತ್ತಾರೆ. ಹಾಗೆಯೇ ಈ ಒಳಾಂಗಣ ಅಥವಾ ಹೊರಾಂಗಣ ಆಟದಲ್ಲಿ ಹೆಚ್ಚಾಗಿ ಸೃಜನಶೀಲತೆ, ಕಲ್ಪನೆಯನ್ನು ಉತ್ತೇಜಿಸುವಂತಹ ಉದ್ದೇಶವಿರುತ್ತದೆ. ಮಕ್ಕಳು ಮಣ್ಣಿನಲ್ಲಿ ಆಟವಾಡಲು ಬಿಡುವುದು ಕೂಡ ಇದೇ ಉದ್ದೇಶವನ್ನು ಹೊಂದಿದೆ.

ಕುತೂಹಲ ತಣಿಸಿ: ಮಕ್ಕಳು ಎಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸಿ ಮತ್ತು ಅನುಭವಿಸಿ ಕಲಿಯುತ್ತಾರೆ. ಹಾಗೆಯೇ ಅವರಿಗೆ ಕುತೂಹಲ ಕೂಡ ಹೆಚ್ಚು. ಉದಾಹರಣೆಗೆ ಮಕ್ಕಳಿಗೆ ಅಕ್ಷರ ಕಲಿಸಬೇಕಾದರೆ ಚಿತ್ರವನ್ನು ತೋರಿಸಿ ಅಥವಾ ಕಥೆ ಹೇಳಿ ಕಲಿಸಬೇಕಾಗುತ್ತದೆ. ಅ– ಅರಸ ಅಥವಾ ಎ ಫಾರ್ ಆ್ಯಪಲ್ ಎಂದು ಲಾಗಾಯ್ತಿನಿಂದಲೇ ಕಲಿಸಲಾಗುತ್ತಿದೆ. ಹಾಗೆ ಹೇಳುತ್ತಲೇ ಅಕ್ಷರವನ್ನು ತೋರಿಸಿ ಅವರಲ್ಲಿ ಒಂದು ಕಲ್ಪನೆಯನ್ನು ಮೂಡಿಸುತ್ತೇವೆ. ನಂತರ ಆ ಅಕ್ಷರವನ್ನು ಅವರು ನಕಲು ಮಾಡಿ ತಿದ್ದಲು ಶುರು ಮಾಡುತ್ತಾರೆ. ಗೋಡೆಯ ಮೇಲೆ, ಸಿಕ್ಕಸಿಕ್ಕಲ್ಲಿ ಗೀಚಲು ಶುರು ಮಾಡುತ್ತಾರೆ. ಹಾಗೆಯೇ ವಿಜ್ಞಾನವನ್ನು ಕೂಡ ಅವರಿಗೆ ಅನುಭವಕ್ಕೆ ತಂದು ಕಲಿಸುವುದು ಪದ್ಧತಿ.

ಹೆಚ್ಚಿನ ವಾಲ್ಡಾರ್ಫ್ ಶಾಲೆಗಳಲ್ಲಿ ಐದನೇ ತರಗತಿಯವರೆಗೂ ಪಠ್ಯ ಪುಸ್ತಕಗಳಿರುವುದಿಲ್ಲ. ಹೀಗಾಗಿ ತಾವು ಕಲಿತಿದ್ದನ್ನು ಮಕ್ಕಳು ಕಲೆ, ಹಾಡು, ಬರವಣಿಗೆ ಮೂಲಕ ವ್ಯಕ್ತಪಡಿಸುತ್ತಾರೆ. ಹಾಗೆಯೇ ಪಠ್ಯದಲ್ಲಿ ಕಲಿತಿದ್ದನ್ನು ಇತರ ಚಟುವಟಿಕೆಯಲ್ಲಿ ತೋರಿಸುವ ಮೂಲಕ ಅವರ ಮನಸ್ಸಿನಲ್ಲಿ ಅದು ಕೂರುವಂತೆ, ನೆನಪಿರುವಂತೆ ಮಾಡಲಾಗುತ್ತದೆ. ಉದಾಹರಣೆಗೆ ವಿಜ್ಞಾನ ಪುಸ್ತಕದಲ್ಲಿ ಚಿಟ್ಟೆಯ ಬಗ್ಗೆ ಕಲಿತರೆ ನಂತರ ಹಾಡು, ನೃತ್ಯದಲ್ಲಿ, ಚಿತ್ರಕಲೆ– ಪೇಪರ್ ಕ್ರಾಫ್ಟ್‌ನಲ್ಲಿ ಇನ್ನಷ್ಟು ಮನದಟ್ಟು ಮಾಡಿಕೊಳ್ಳುತ್ತಾರೆ. ವರ್ಕ್‌ಶೀಟ್‌ಗಳನ್ನೂ ಬಳಸಲಾಗುತ್ತದೆ.

ಈ ರೀತಿ ಕಲಿತ ಮಗು ಮುಖ್ಯ ವಾಹಿನಿಯ ಶಾಲೆಗೆ ಹೋಗಲು ಆರಂಭಿಸಿದಾಗ ಹೊಂದಿಕೊಳ್ಳುವ ಬಗ್ಗೆ ಪೋಷಕರಲ್ಲಿ ಅನುಮಾನ ಮೂಡುವುದು ಸಹಜ. ಆದರೆ ಚಿಕ್ಕ ಮಕ್ಕಳಲ್ಲಿ ಆಟದ ಮೂಲಕ ಪಾಠ ಕಲಿಸಿದರೆ, ಐದನೇ ತರಗತಿಯ ನಂತರ ಪಠ್ಯವನ್ನು ಅವಲಂಬಿಸಿಯೇ ಶಿಕ್ಷಣ ನೀಡಲಾಗುತ್ತದೆ. ಐದನೇ ತರಗತಿಯವರೆಗೂ ಕೂಡ ಪರೀಕ್ಷೆ ಬರೆಯುವ ವಿಧಾನವಿಲ್ಲ ಎಂಬುದನ್ನು ಬಿಟ್ಟರೆ, ಅವರಿಗೆ ಪ್ರಶ್ನೆ ಕೇಳುತ್ತ, ಉತ್ತರ ದೊರಕಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಮುಖ್ಯವಾದ ಅಂಶ ಏನೆಂದರೆ ಮಕ್ಕಳಿಗೆ ಸರಿಯಾದ ವಯಸ್ಸಿನಲ್ಲಿ ಪಠ್ಯದ ಆಧಾರದ ಮೇಲೆ ಕಲಿಕೆ ಶುರು ಮಾಡುವುದು. ಆಗ ಅವರು ಭಾಷೆ, ಗಣಿತ, ವಿಜ್ಞಾನ ಯಾವುದೇ ಇರಲಿ ಹೆಚ್ಚು ಆತ್ಮವಿಶ್ವಾಸದಿಂದ ಕಲಿಯಲು ಶುರು ಮಾಡುತ್ತಾರೆ. ಕಲಿಕೆಯನ್ನು ಆನಂದಿಸುವುದನ್ನು ಮಕ್ಕಳು ಕಲಿಯುತ್ತಾರೆ. ಹೀಗಾಗಿ ಬೇರೆ ಶಾಲೆಗೆ ಹೋದರೂ ಕೂಡ ಅಲ್ಲಿರುವ ಪಠ್ಯಕ್ರಮಕ್ಕೆ ಹೊಂದಿಕೊಳ್ಳುತ್ತಾರೆ ಎನ್ನುವುದು ತಜ್ಞರ ಅಭಿಮತ.

ವೃತ್ತಿಯಲ್ಲಿ ಮೇಲೇರಲು

ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್



ಡಾ. ಗಿರೀಶ ಯರಲಕಟ್ಟಿಮಠ

ಒಂದು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಂಜಿನಿಯರ್ ಕೇವಲ ತಾಂತ್ರಿಕ ಕೌಶಲಗಳನ್ನು ಹೊಂದಿದ್ದರೆ ಸಾಲದು, ಅವರು ಕಂಪನಿಯಲ್ಲಿ ತಮ್ಮ ವ್ಯಕ್ತಿಗತ ಹಾಗೂ ಸಂಸ್ಥೆಯ ಗುರಿಗಳನ್ನು ಮುಟ್ಟಲು ಅಲ್ಲಿಯ ತಂಡಗಳ ನಾಯಕರಾಗಿ ಮುನ್ನಡೆಸುವ ಅನಿವಾರ್ಯತೆ ಇರುತ್ತದೆ. ಹೀಗಾಗಿ ಅವರು ನಿರ್ವಹಣಾ ಕೌಶಲಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಈ ರೀತಿಯ ತಾಂತ್ರಿಕ ಹಾಗೂ ನಿರ್ವಹಣಾ ಕೌಶಲಗಳನ್ನು 'ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್' (ಎಂಇ) ಸ್ನಾತಕೋತ್ತರ ಪದವಿಯ ಮೂಲಕ ತಮ್ಮದಾಗಿಸಿಕೊಳ್ಳಬಹುದು.

ಏನಿದು ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್?

ಎಂಜಿನಿಯರಿಂಗ್ ಎನ್ನುವುದು ಗೊತ್ತೇ ಇದೆ. ಇದರಲ್ಲಿ ವಿಜ್ಞಾನ ಮತ್ತು ಗಣಿತ ಸೇರಿಕೊಂಡಿರುತ್ತದೆ. ವಿವಿಧ ಯಂತ್ರಗಳು, ಸಾಫ್ಟ್‌ವೇರ್ ನಿಭಾಯಿಸುವುದು ಎಂಜಿನಿಯರ್‌ಗಳ ಹೊಣೆ. ಮ್ಯಾನೇಜ್‌ಮೆಂಟ್ ಅಥವಾ ನಿರ್ವಹಣೆ ಎನ್ನುವುದು ಉದ್ಯಮಗಳನ್ನು, ಕಾರ್ಯಾಚರಣೆಯನ್ನು ಅಥವಾ ವ್ಯಕ್ತಿಗಳನ್ನು ನಿಯಂತ್ರಿಸುವುದು ಅಥವಾ ಅವರ ಜೊತೆ ವ್ಯವಹರಿಸುವುದು. ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಒಬ್ಬ ಎಂಜಿನಿಯರ್‌ಗೆ ನಿರ್ವಹಣೆಯ ಕೌಶಲಗಳನ್ನು ಕಲಿಸಲಾಗುತ್ತದೆ. ಅಂದರೆ ಒಂದು ಕಂಪನಿಯಲ್ಲಿ ಆರಂಭದಿಂದ ಹಿಡಿದು ಕೊನೆಯವರೆಗೂ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಹೊಣೆಗಾರಿಕೆಯಿಂದ ನಿಭಾಯಿಸಲು ಪರಿಪೂರ್ಣತೆ ಪಡೆಯುವುದು. ತಾಂತ್ರಿಕವಾಗಿ ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ ವ್ಯವಹಾರ ಕೌಶಲ ಹಾಗೂ ನಿರ್ವಹಣೆಯನ್ನು ಇಲ್ಲಿ ಕಲಿಯಬಹುದು. ಕಾರ್ಯಕ್ಷಮತೆಯಿಂದ ನಿರ್ವಹಿಸುವ ಅಥವಾ ಮೇಲ್ವಿಚಾರಣೆ ಮಾಡುವ ಸಲುವಾಗಿ ಹಾಗೂ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ಮ್ಯಾನೇಜ್‌ಮೆಂಟ್ ಅಥವಾ ನಿರ್ವಹಣೆಯ ಅಧ್ಯಯನದಲ್ಲಿ ಬರುವ ಪರಿಕಲ್ಪನೆಗಳನ್ನು ಅನ್ವಯಿಸಿ ಯಶಸ್ಸು ಪಡೆಯಬಹುದು. ಈ ಸ್ನಾತಕೋತ್ತರ ಪದವಿಯಿಂದ ಒಬ್ಬ ಎಂಜಿನಿಯರಿಂಗ್ ಪದವೀಧರ ತಾಂತ್ರಿಕ ಮತ್ತು ನಿರ್ವಹಣಾ ಕೌಶಲಗಳನ್ನು ಏಕಕಾಲದಲ್ಲಿ ತನ್ನದಾಗಿಸಿಕೊಳ್ಳಬಹುದಾಗಿದೆ.

> ಎಂಜಿನಿಯರಿಂಗ್ ಪದವಿ ಪಡೆದವರು ವೃತ್ತಿಯಲ್ಲಿ ಮೇಲೇರಲು ಈ ಮ್ಯಾನೇಜ್‌ಮೆಂಟ್ ಕೋರ್ಸ್ ನೆರವಾಗುತ್ತದೆ. ಎಂಜಿನಿಯರಿಂಗ್ ಕೌಶಲಗಳ ಜೊತೆ ನಿರ್ವಹಣೆಯ ಹೊಣೆಗಾರಿಕೆಯನ್ನೂ ಈ ಕೋರ್ಸ್‌ನಿಂದ ಕಲಿಯಬಹುದು.

ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಕೋರ್ಸ್ ಎನ್ನುವುದು ಎಂಜಿನಿಯರಿಂಗ್ ತಂತ್ರಜ್ಞಾನ ಮತ್ತು ನಿರ್ವಹಣೆಯ ನಡುವಿನ ಅಂತರವನ್ನು ನಿವಾರಿಸಲು 'ಪ್ರತ್ಯೇಕವಾಗಿ ವಿನ್ಯಾಸಗೊಳಿಸಲಾದ' ವೃತ್ತಿಪರ ಕೋರ್ಸ್. ಇದು ಇತ್ತೀಚಿನ ದಿನಗಳಲ್ಲಿ ಒಂದು ಜನಪ್ರಿಯ ಕೋರ್ಸ್ ಆಗಿದ್ದು, ಎಂಜಿನಿಯರಿಂಗ್ ಎಂಬಿಎ ಎನ್ನಲಾಗುತ್ತಿದೆ.

ಯಾರು ಈ ಕೋರ್ಸ್‌ಗೆ ಸೇರಬಹುದು?

ನೀವು ಎಂಜಿನಿಯರಿಂಗ್ ಅಥವಾ ವಿಜ್ಞಾನ ಪದವೀಧರರಾಗಿದ್ದರೆ ಮತ್ತು ಸಾಂಪ್ರದಾಯಿಕವಲ್ಲದ ಸ್ನಾತಕೋತ್ತರ ಪದವಿಯನ್ನು ಹುಡುಕುತ್ತಿದ್ದರೆ, ಈ ಕೋರ್ಸ್ ಸರಿಯಾದ ಆಯ್ಕೆ ಆಗಬಹುದು. ಯಾವುದೇ ನಿರ್ದಿಷ್ಟ ಎಂಜಿನಿಯರಿಂಗ್ ವಿಭಾಗದ ಹಿನ್ನಲೆಯ ಅಗತ್ಯವಿಲ್ಲ. ವಿದ್ಯಾರ್ಥಿಗಳಿಗೆ ಸಂಶೋಧನೆ ಮತ್ತು ಅಭಿವೃದ್ಧಿ ನಿರ್ವಹಣೆ, ತಂತ್ರಜ್ಞಾನ, ಉದ್ಯಮಶೀಲತೆ, ಕೈಗಾರಿಕಾ ನಿರ್ವಹಣೆ, ಗುಣಮಟ್ಟ ನಿಯಂತ್ರಣ, ಬೌದ್ಧಿಕ ನಿರ್ವಹಣೆ, ದತ್ತಾಂಶ ವಿಶ್ಲೇಷಣೆಯಲ್ಲಿ ಆಸಕ್ತಿ ಇದ್ದಲ್ಲಿ ಈ ಕೋರ್ಸ್ ಹೆಚ್ಚು ಸೂಕ್ತ.

ಅರ್ಹತೆಗಳೇನು?

ಈ ಕೋರ್ಸ್ ಅನ್ನು ಅಮೆರಿಕ, ಕೆನಡಾ ಹಾಗೂ ಆಸ್ಟ್ರೇಲಿಯಾ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಮಾಡುವುದು ಹೆಚ್ಚು ಸೂಕ್ತ. ಈ ಕೋರ್ಸ್ ಪೂರ್ಣಕಾಲಿಕ, ಅರೆಕಾಲಿಕ ಹಾಗೂ ದೂರ ಶಿಕ್ಷಣ ವಿಧಾನಗಳ ಮೂಲಕ ಕಲಿಯಬಹುದು. ಪ್ರವೇಶದ ನಿಯಮಗಳು ಮತ್ತು ಕಲಿಕಾ ವಿಧಾನಗಳು ವಿಶ್ವವಿದ್ಯಾಲಯದಿಂದ ವಿಶ್ವವಿದ್ಯಾಲಯಕ್ಕೆ ಬದಲಾಗುತ್ತವೆ.

- ಉತ್ತಮ ವಿಶ್ವವಿದ್ಯಾಲಯಗಳಿಗೆ ಪ್ರವೇಶ ಪಡೆಯಲು ಜಿ.ಮ್ಯಾಟ್ ಮತ್ತು ಜಿಆರ್‌ಇ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಉತ್ತಮ ಅಂಕಗಳನ್ನು ಪಡೆದಿರಬೇಕು. ಐದು ವರ್ಷಗಳಿಗಿಂತ ಹೆಚ್ಚು ಕೆಲಸದ ಅನುಭವಿದ್ದರೆ, ಈ ಅಂಕಗಳ ಮಿತಿಯಿಂದ ವಿನಾಯಿತಿ ಪಡೆಯಬಹುದು.
- ಅಭ್ಯರ್ಥಿಯ ಶೈಕ್ಷಣಿಕ, ಕೆಲಸ ಹಾಗೂ ನಾಯಕತ್ವ ಕೌಶಲಗಳನ್ನು ಪ್ರದರ್ಶಿಸುವ ಎರಡು ಅಥವಾ ಮೂರು ಶಿಫಾರಸು ಪತ್ರಗಳು.
- ಸ್ಥಳೀಯ ವಿದ್ಯಾರ್ಥಿಗಳಿಗೆ ಅಥವಾ ಇಂಗ್ಲಿಷ್ ಮಾತೃ ಭಾಷೆಯಲ್ಲದ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಟೋಫೆಲ್ ಅಥವಾ ಐ.ಇ.ಎಲ್.ಟಿ.ಎಸ್. ಅಂಕಗಳು.
- ಅಭ್ಯರ್ಥಿಯು ಗಣಿತ, ಸಂಖ್ಯಾಶಾಸ್ತ್ರದಂತಹ ವಿಷಯಗಳಲ್ಲಿ ಹೆಚ್ಚು ಪರಿಣತಿ ಹೊಂದಿರಬೇಕು.

ಪಠ್ಯ ಹೇಗಿರುತ್ತದೆ?

1) ಕಂಪ್ಯೂಟರ್ ಸಿಮ್ಯುಲೇಶನ್ ಫಾರ್ ರಿಸ್ಕ್ ಅಂಡ್ ಆಪರೇಶನಲ್ ಅನಾಲಿಟಿಕ್ಸ್, 2) ಪ್ರಾಜೆಕ್ಟ್ ಮ್ಯಾನೇಜ್ ಮೆಂಟ್, 3) ಪ್ರಾಡಕ್ಟ್ ಮ್ಯಾನೇಜ್‌ಮೆಂಟ್, 4) ಮ್ಯಾನು ಫ್ಯಾಕ್ಚರಿಂಗ್ ಮ್ಯಾನೇಜ್ ಮೆಂಟ್, 5) ಸಿಸ್ಟಂ ಎಂಜಿನಿಯರಿಂಗ್ ಅಂಡ್ ಆರ್ಕಿಟೆಕ್ಚರ್, 6) ಎನ್ವಿರಾನ್ ಮೆಂಟಲ್ ಸಿಸ್ಟಂ ಅನಾಲಿಸಿಸ್, 7) ಎಕನಾಮಿಕ್ಸ್ ಅಂಡ್ ಪಬ್ಲಿಕ್ ಪಾಲಿಸಿ, 8) ಅಪ್ಲೈಡ್ ಮಷೀನ್ ಲರ್ನಿಂಗ್, 9) ಡೇಟಾ ಸೈನ್ಸ್ ಮತ್ತು ಮಶೀನ್ ಲರ್ನಿಂಗ್, 10) ಆಪರೇಶನ್ಸ್ ಅಂಡ್ ಸಪ್ಲೈಚೈನ್ ಮ್ಯಾನೇಜ್‌ಮೆಂಟ್, 11) ಟೆಕ್ನಾಲಜಿ ಡೆವಲೆಪ್‌ಮೆಂಟ್, 12) ನಾಯಕತ್ವ ಮತ್ತು ಆರ್ಗನೈಜೇಶನಲ್ ಬಿಹೇವಿಯರ್, ಸ್ಟ್ರಾಟೆಜಿಕ್ ಮ್ಯಾನೇಜ್‌ಮೆಂಟ್, ಅಕೌಂಟಿಂಗ್ ಅಂಡ್ ಫೈನಾನ್ಸ್.

ಕೋರ್ಸ್ ಪೂರ್ಣಾವಧಿ ಆಗಿದ್ದಲ್ಲಿ 12– 24 ತಿಂಗಳುಗಳು. ಅರೆಕಾಲಿಕ ಅಥವಾ ದೂರ ಶಿಕ್ಷಣ ಕಾರ್ಯಕ್ರಮ 6–9 ತಿಂಗಳು ಅಥವಾ ಒಂದು ವರ್ಷದವರೆಗೆ ಇರುತ್ತದೆ. ಭಾರತದಲ್ಲಿ ಜೆ.ಎಸ್.ಎಸ್. ಸೈನ್ಸ್ ಅಂಡ್ ಟೆಕ್ನಾಲಜಿಕ್ ವಿಶ್ವವಿದ್ಯಾಲಯ ಮೈಸೂರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರೂರ್ಕೆಲಾ, ನೇತಾಜಿ ಸುಭಾಷ್ ಯೂನಿವರ್ಸಿಟಿ ಆಫ್ ಟೆಕ್ನಾಲಜಿ, ನವದೆಹಲಿ, ವಿಶ್ವೇಶ್ವರಯ್ಯ ಟೆಕ್ನಾಲಾಜಿಕಲ್ ವಿಶ್ವವಿದ್ಯಾಲಯ, ಬೆಳಗಾವಿ ಮೊದಲಾದ ಕಡೆ ಈ ಕೋರ್ಸ್ ಇದೆ. ವೆಚ್ಚ ವಿಶ್ವವಿದ್ಯಾಲಯವನ್ನು ಅವಲಂಬಿಸಿರುತ್ತದೆ.

ಐ.ಬಿ.ಎಂ, ಗೂಗಲ್, ಬ್ಲ್ಯೂ ಬರ್ಗ್, ಡೆಲಾಯಿಟ್, ಆ್ಯಪಲ್, ಅಮೆಜಾನ್, ಜನರಲ್ ಮೋಟರ್ಸ್, ಗೋಲ್ಡ್‌ಮನ್ ಸ್ಯಾಚಸ್, ಮೈಕ್ರೋಸಾಫ್ಟ್, ಓರಾಕಲ್, ಕಾಗ್ನಿಜೆಂಡ್, ಟಾಟಾ ಮೊದಲಾದ ಕಡೆ ಉದ್ಯೋಗ ನಿರೀಕ್ಷಿಸಬಹುದು. ಸೀನಿಯರ್ ಎಂಜಿನಿಯರಿಂಗ್ ಮ್ಯಾನೇಜರ್, ಎಂಜಿನಿಯರಿಂಗ್ ಪ್ರಾಡಕ್ಟ್ ಮ್ಯಾನೇಜರ್, ಎಂಜಿನಿಯರಿಂಗ್ ಸೂಪರ್‌ವೈಸರ್, ಸೀನಿಯರ್ ಲೀಡ್ ಅನಾಲಿಸ್ಟ್, ಆಪರೇಷನ್ಸ್ ಅನಾಲಿಸ್ಟ್ ಮೊದಲಾದ ಹುದ್ದೆಗಳಿಗೆ ಬೇಡಿಕೆ ಇದೆ. ಭಾರತದಲ್ಲಿ ಸುಮಾರು 15– 30 ಲಕ್ಷ ರೂಪಾಯಿ ವಾರ್ಷಿಕ ವರಮಾನವನ್ನು ನಿರೀಕ್ಷಿಸಬಹುದು.

(ಲೇಖಕರು: ವೃತ್ತಿ ಸಲಹೆಗಾರರು, ಸಹಾಯಕ ಪ್ರಾಧ್ಯಾಪಕರು, ಎಂಬಿಎ ವಿಭಾಗ, ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯ, ತುಮಕೂರು)

ವಿದ್ಯಾರ್ಥಿ ವೇತನ ಕೈಪಿಡಿ

ಡಿಆರ್‌ಡಿಒ–ಐಟಿಆರ್ ಚಾಂಡೀಪುರ್ ಜೂನಿಯರ್ ರಿಸರ್ಚ್ ಫೆಲೋಷಿಪ್ 2021

- **ವಿವರ:** ಬಿ.ಇ., ಬಿ.ಟೆಕ್, ಎಂ.ಇ., ಎಂ.ಟೆಕ್ ಪದವಿ ಹೊಂದಿದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಬಿ.ಇ., ಬಿ.ಟೆಕ್, ಎಂ.ಇ., ಎಂ.ಟೆಕ್ ಪದವಿಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀಣಗೊಂಡಿರಬೇಕು. ಗೇಟ್ ಪರೀಕ್ಷೆಯನ್ನೂ ಪಾಸಾಗಿರಬೇಕು. ಅರ್ಜಿದಾರರ ವಯೋಮಾನ 28 ಮೀರಿರಬಾರದು.
- **ಆರ್ಥಿಕ ಸಹಾಯ:** ಪ್ರತೀ ತಿಂಗಳು ₹31 ಸಾವಿರ ಜೊತೆಗೆ ಎಚ್‌ಆರ್‌ಎ ಮತ್ತು ವೈದ್ಯಕೀಯ ಸೌಲಭ್ಯ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 9 ಜುಲೈ, 2021
- **ಅರ್ಜಿ ಸಲ್ಲಿಕೆ ವಿಧಾನ:** ಇ–ಮೇಲ್ ಮುಖಾಂತರ ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/DRR2 **ಕೃಪೆ:** buddy4study.com

ಉನ್ನತ ಶಿಕ್ಷಣಕ್ಕಾಗಿ ಈಗ ವಿದೇಶಗಳಿಗೆ ಹೋಗಬಹುದೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಸೈಕಾಲಜಿ, ಎಕನಾಮಿಕ್ಸ್ ಮತ್ತು ಸೋಷಿಯಾಲಜಿ ವಿಷಯಗಳಲ್ಲಿ 2020ರಲ್ಲಿ ಪದವಿಯನ್ನು ಗಳಿಸಿ ವಿದೇಶದಲ್ಲಿ ಸ್ನಾತಕೋತ್ತರ ಕೋರ್ಸ್ ಮಾಡುವ ಯೋಜನೆಯಿದ್ದು ಕೋವಿಡ್ ಕಾರಣದಿಂದ ಕಳೆದ ವರ್ಷ ಮಾಡಲಾಗಲಿಲ್ಲ. ಹಾಗಾಗಿ ಈ ವರ್ಷ ಸೂಕ್ತವೇ? ಅಥವಾ ಈ ಪಿಡುಗು ಶಮನವಾಗುವ ತನಕ ಕಾಯುವುದು ಒಳ್ಳೆಯದೇ, ತಿಳಿಸಿ.

ಆಕಾಶ್, ಕೊಪ್ಪ

ನೀವು ನೀಡಿರುವ ಮಾಹಿತಿಯಂತೆ ಈಗಾಗಲೇ ನಿಮ್ಮ ಯೋಜನೆಯನ್ನು ಕಳೆದ ವರ್ಷದಿಂದ ಈ ವರ್ಷಕ್ಕೆ ಮುಂದೂಡಿದ್ದೀರಿ. ಈಗ ಅನೇಕ ವಿದ್ಯಾರ್ಥಿಗಳು ಲಸಿಕೆ ಹಾಕಿಸಿಕೊಂಡು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗುವ ಅಂತಿಮ ತಯಾರಿಯಲ್ಲಿದ್ದಾರೆ. ಜೊತೆಗೆ ವಿದೇಶಗಳಲ್ಲಿನ ಹಲವಾರು ವಿಶ್ವವಿದ್ಯಾಲಯಗಳು ಪ್ರವೇಶದ ನಿಯಮಾವಳಿಗಳನ್ನು ಬದಲಿಸಿ ವಿದ್ಯಾರ್ಥಿ-ಸ್ನೇಹಿ ಸುಧಾರಣೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಹಾಗಾಗಿ, ನೀವು ಉನ್ನತ ಶಿಕ್ಷಣ ಬಯಸುವ ದೇಶ ಮತ್ತು ವಿಶ್ವವಿದ್ಯಾಲಯದ ನಿಯಮಗಳು ಮತ್ತು ಅಲ್ಲಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ನಿರ್ಧರಿಸಿ.

2. ನಾನು ಬಿಬಿಎ ಪದವಿ ಮುಗಿಸಿದ್ದೇನೆ. ಎಂಎ ಎಕನಾಮಿಕ್ಸ್ ಮಾಡಬೇಕು ಎಂಬ ಆಸೆ ಇದೆ ಮತ್ತು ಪಿಎಚ್‌ಡಿ ಮಾಡಿ ಡಾಕ್ಟರೇಟ್ ಗೌರವ ಪಡೆಯುವ ಕನಸು ಇದೆ. ನಾನು ಪದವಿ ಮಾಡುವ ವಿಷಯದಲ್ಲಿಯೇ ಮಾಡಬೇಕೆ? ಅಧ್ಯಾಪಕ ವೃತ್ತಿಯಲ್ಲಿ ಆಸಕ್ತಿಯಿಲ್ಲ. ದಯವಿಟ್ಟು ಪರಿಹಾರ ತಿಳಿಸಿ.

ಜಿ.ಎಮ್. ಮಹೇಶ್, ಸಿದ್ದಾಪುರ

ಈಗ ನೂತನ ರಾಷ್ಟ್ರೀಯ ಶಿಕ್ಷಣ ನೀತಿ– 2020ರಂತೆ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿಗಳ ಉದ್ದೇಶ, ನಿಯಮ ಮತ್ತು ಪ್ರವೇಶ ಪ್ರಕ್ರಿಯೆಯಲ್ಲಿ ತೀವ್ರವಾದ ಬದಲಾವಣೆಗಳಿವೆ. ಆದರೆ, ಅನುಷ್ಠಾನದ ಪ್ರಕ್ರಿಯೆ ಈಗಷ್ಟೇ ಶುರುವಾಗುತ್ತಿದೆ. ಹಾಗಾಗಿ, ಈ ವಿಷಯದಲ್ಲಿ ನಿಖರವಾದ ಮಾಹಿತಿಗಾಗಿ ನೇರವಾಗಿ ನೀವು ಮಾಡಬೇಕೆಂದು ಇಚ್ಛಿಸಿರುವ ವಿಶ್ವವಿದ್ಯಾಲಯದಲ್ಲಿ ವಿಚಾರಿಸಿ.

3. ಬಿಟೆಕ್ (ಎಐ ಮತ್ತು ಮೆಷೀನ್ ಲರ್ನಿಂಗ್) ಮತ್ತು ಬಿಟೆಕ್ (ಡೇಟಾ ಸೈನ್ಸ್) ನಡುವೆ ಯಾವ ಕೋರ್ಸಿಗೆ ಹೆಚ್ಚು ವೃತ್ತಿಯ ಅವಕಾಶಗಳಿವೆ?

ಡೀಲಾನ್ ಲಾಸ್ರಾಡೊ, ಊರು ತಿಳಿಸಿಲ್ಲ

ಈ ಎರಡೂ ಕೋರ್ಸ್‌ಗಳಿಗೆ ಈಗ ಬೇಡಿಕೆಯಿದ್ದು ಹೆಚ್ಚಿನ ಅವಕಾಶಗಳಿವೆ. ಹಾಗಾಗಿ, ನಿಮಗೆ ಇಷ್ಟವಿರುವ ವಿಭಾಗವನ್ನು ಆಯ್ಕೆ ಮಾಡಿಕೊಳ್ಳಬಹುದು.

4. ನಾನು ಈಗ ಬಿಎ ಎರಡನೇ ಸೆಮಿಸ್ಟರ್ ಓದುತ್ತಾ ಇದ್ದೀನಿ. ನಾನು ಐಎಎಸ್ ಪರೀಕ್ಷೆ ಬರೆಯಬೇಕು. ಹಾಗಾಗಿ, ಐಎಎಸ್ ಪರೀಕ್ಷೆಯ ತಯಾರಿ ಬಗ್ಗೆ ತಿಳಿಸಿ.

ಮಲ್ಲಿಕಾರ್ಜುನ ಪೂಜೇರಿ, ಊರು ತಿಳಿಸಿಲ್ಲ.

ಐಎಎಸ್ ಪರೀಕ್ಷೆಯ ಪ್ರಕ್ರಿಯೆಯಲ್ಲಿ ಮೂರು ಹಂತಗಳಿವೆ.
1. ಪೂರ್ವಭಾವಿ. 200 ಅಂಕಗಳ ಎರಡು ಪ್ರಶ್ನೆಪತ್ರಿಕೆಗಳು.
2. ಮುಖ್ಯ ಪರೀಕ್ಷೆ. ಪ್ರಬಂಧ ರೂಪದ ಲಿಖಿತ ಪರೀಕ್ಷೆ. 250 ಅಂಕಗಳ ಒಂಬತ್ತು ಪ್ರಶ್ನೆಪತ್ರಿಕೆಗಳು.
3. ಸಂದರ್ಶನ/ವ್ಯಕ್ತಿತ್ವ ಪರೀಕ್ಷೆ.

ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ ಖುದ್ದಾಗಿ ಅಥವಾ ಕೋಚಿಂಗ್ ಮುಖಾಂತರ ತಯಾರಿ ಮಾಡಬಹುದು. ಯೂಟ್ಯೂಬ್‌ನಲ್ಲಿ ತಯಾರಿ ಕುರಿತ ಮಾಹಿತಿಯುಳ್ಳ ಉಪಯುಕ್ತ ವಿಡಿಯೊಗಳನ್ನು ವೀಕ್ಷಿಸಿ. ಐಎಎಸ್ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಸಮಗ್ರವಾದ ಮತ್ತು ಆಳವಾದ ಓದು ಇರಬೇಕು. ಜೊತೆಗೆ, ಸಾಕಷ್ಟು ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ.

5. ನಾನು ಡಿಪ್ಲೊಮಾ ಇ ಅಂಡ್ ಸಿ ಮಾಡಿದ್ದು ಲ್ಯಾಟರಲ್ ಎಂಟ್ರಿ ಎಂಜಿನಿಯರಿಂಗ್ ಆಗಿದೆ. ಕಾನ್‌ಸ್ಟೆಬಲ್ ಮತ್ತು ಎಸ್‌ಡಿಎ ಗೆ ಅರ್ಹತೆ ಇದೆಯೇ? ಹಾಗೂ ಕೆಎಎಸ್, ಪಿಡಿಒ, ಎಸ್‌ಡಿಎ ಪರೀಕ್ಷೆ ಬರೆಯಬಹುದೇ?

ಕೀರ್ತಿ ರಾಜ್ ಎನ್, ಊರು ತಿಳಿಸಿಲ್ಲ.

ನೀವು ಎಂಜಿನಿಯರಿಂಗ್ ಪದವೀಧರರಾಗಿದ್ದಲ್ಲಿ ಈ ಎಲ್ಲಾ ಪರೀಕ್ಷೆಗಳನ್ನು ಬರೆಯಬಹುದು. ನಿಮ್ಮಲ್ಲಿ ಎನ್‌ಐಒಎಸ್ ಸರ್ಟಿಫಿಕೇಟ್ ಇಲ್ಲದಿದ್ದರೆ ಅರ್ಜಿ ಸಲ್ಲಿಸಿ ಪಡೆಯುವುದು ಉತ್ತಮ.

6. ನಾನು ಬಿಬಿಎಂ ಡಿಗ್ರಿ ಮುಗಿಸಿದ್ದೇನೆ. ಪಿಎಸ್‌ಐ ಪರೀಕ್ಷೆಗೆ ತಯಾರಾಗಬೇಕೆಂದುಕೊಂಡಿದ್ದೇನೆ. ಆದರೆ, 3ಬಿ ಕೋಟಾದಡಿಯಲ್ಲಿ ಕೆಲಸ ಸುಲಭವಾಗಿ ಸಿಗುವುದಿಲ್ಲ ಎನ್ನುತ್ತಾರೆ. ಖಾಸಗಿ ಕೆಲಸ ಒಳ್ಳೆಯದೇ?

ಚೇತನ್ ಸುಂಕಡ್, ಊರು ತಿಳಿಸಿಲ್ಲ.

ವೃತ್ತಿ ನಮ್ಮ ಇಡೀ ಜೀವನವನ್ನ ಆವರಿಸಿಕೊಳ್ಳೋ ಒಂದು ಆಯಾಮ. ಕಲಿತ ವಿದ್ಯೆಗೂ, ನಿಮ್ಮಲ್ಲಿರುವ ಸ್ವಾಭಾವಿಕ ಕೌಶಲಗಳಿಗೂ ಸರಿಹೊಂದುವಂತಹ, ನಿಮ್ಮ ಇಷ್ಟ, ಅಭಿರುಚಿಗೆ ಸ್ಪಂದಿಸುವಂತಹ ವೃತ್ತಿಯನ್ನುಗುರುತಿಸಬೇಕು.ಹಾಗಾಗಿ, ಇಲ್ಲಿಮುಖ್ಯವಾದಪ್ರಶ್ನೆಯೆಂದರೆ ನಿಮಗೆ ಒಲವಿರುವ ವೃತ್ತಿ ಯಾವುದು? ಅದನ್ನು ಗುರುತಿಸಿ, ಅದರಂತೆ ನಿಮ್ಮ ವೃತ್ತಿಯ ಆಯ್ಕೆ ಇರಲಿ. ಸಾಧನೆಯ ಹಾದಿಯಲ್ಲಿ ಸುಲಭವಾದದ್ದು ಯಾವುದೂ ಇಲ್ಲ; ಅದರಂತೆಯೇ ಅಸಾಧ್ಯವೆನ್ನುವುದೂ ಇಲ್ಲ.

7. ನಾನು ಬಿಇ (ಇಸಿಇ) ನಾಲ್ಕನೇ ವರ್ಷದಲ್ಲಿ ಓದುತ್ತಿದ್ದು ಈ ವಿಭಾಗದಲ್ಲಿ ಆಸಕ್ತಿ ಇದೆ. ಈ ಕೋರ್ಸ್ ಆದ ನಂತರ ಯಾವ ಕೋರ್ಸ್ ಮಾಡಬಹುದು? ಸಂಬಳ ಹೆಚ್ಚು ಸಿಗುವ ಕೋರ್ಸ್ ಕುರಿತು ಸಲಹೆ ನೀಡಿ.

ಹೆಸರು, ಊರು ತಿಳಿಸಿಲ್ಲ.

ಎಂಜಿನಿಯರಿಂಗ್ ಪದವಿಯ ನಂತರ ನೀವು ರೊಬೊಟಿಕ್, ಎಲೆಕ್ಟ್ರಾನಿಕ್ಸ್, ಟೆಲಿಕಮ್ಯೂನಿಕೇಷನ್, ಮೈಕ್ರೊ ಎಲೆಕ್ಟ್ರಾನಿಕ್ಸ್, ವಿ.ಎಲ್.ಎಸ್.ಐ. ಮುಂತಾದ ವಿಷಯಗಳಲ್ಲಿ ಎಂಟೆಕ್ ಮಾಡಿ ಪ್ಲೇಸ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸಿ. ವೃತ್ತಿಯಲ್ಲಿ ಸಿಗುವ ಆದಾಯಕ್ಕಿಂತ ಸಾಧನೆಯ ಮಾರ್ಗದಲ್ಲಿ ಸಿಗುವ ಸಂತೃಪ್ತಿ ಹೆಚ್ಚು ಮುಖ್ಯ. ಹಾಗಾಗಿ, ನಿಮಗೆ ಇಷ್ಟವಿರುವ ವಿಷಯದಲ್ಲಿ ಉನ್ನತ ಶಿಕ್ಷಣವನ್ನು ಮುಂದುವರಿಸಿ.

8. ನಾನು ಈಗ ಎಂಎಸ್‌ಸಿ ಮೊದಲನೇ ವರ್ಷದಲ್ಲಿ ಓದುತ್ತಿದ್ದೇನೆ. ಈಗ, ಎಂಎಸ್‌ಸಿ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವುದು ಸರಿಯೇ?

ಗುರುಕಿರಣ್ ಮಾಲಿಪಾಟೀಲ್, ಊರು ತಿಳಿಸಿಲ್ಲ

ನಿಮಗೆ ಐಎಎಸ್ ಅಂತಹ ಕಠಿಣವಾದ ಪರೀಕ್ಷೆಗಳ ಬಗ್ಗೆ ಉತ್ಸುಕತೆಯಿದ್ದರೆ ಈಗಿನಿಂದಲೇ ತಯಾರಿ ಮಾಡುವುದು ಒಳ್ಳೆಯದು. ಬೇರೆ ಸ್ಪರ್ಧಾತ್ಮಕ ಪರೀಕ್ಷೆಗಳಾದರೆ ಮುಂದಿನ ವರ್ಷದಿಂದ ತಯಾರಿ ಮಾಡಬಹುದು. ಆದರೆ, ಇದರಿಂದ ನಿಮ್ಮ ಕೋರ್ಸ್ ಮೇಲೆ ಪರಿಣಾಮವಾಗದಂತೆ ಸಮಯದ ನಿರ್ವಹಣೆಯಿರಲಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ **ವಿ. ಪ್ರದೀಪ್ ಕುಮಾರ್** ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -13

171. ಕರ್ನಾಟಕ ಏಕೀಕರಣಗೊಂಡ ಬಳಿಕ ಅಧಿಕಾರಕ್ಕೆ ಬಂದ ಮೊದಲ ಮುಖ್ಯಮಂತ್ರಿ ಯಾರು?
ಎ) ಎಸ್.ನಿಜಲಿಂಗಪ್ಪ
ಬಿ) ಬಿ.ಡಿ.ಜತ್ತಿ
ಸಿ) ದೇವರಾಜ ಅರಸ್
ಡಿ) ಮೇಲ್ಕಂಡ ಯಾರೂ ಅಲ್ಲ

172. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಏನೆಂದು ಮರು ನಾಮಕರಣ ಮಾಡಲಾಗಿದೆ?
ಎ) ಕಂಠೀರವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
ಬಿ) ಡಾ.ರಾಜಕುಮಾರ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
ಸಿ) ಸಂಗೊಳ್ಳಿ ರಾಯಣ್ಣ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
ಡಿ) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

173. ವಿಶ್ವ ಆರೋಗ್ಯ ಸಂಸ್ಥೆಯ (WHO) ಕೇಂದ್ರ ಸ್ಥಾನ ಎಲ್ಲಿದೆ?
ಎ) ಜಿನೇವಾ
ಬಿ) ಇಸ್ಲಾಮಾಬಾದ್
ಸಿ) ನ್ಯೂಯಾರ್ಕ್
ಡಿ) ಹೇಗ್

174. ರಕ್ತದೊತ್ತಡವನ್ನು ಅಳೆಯುವ ಉಪಕರಣ ಯಾವುದು?
ಎ) ಸ್ಪೀಡೊಮೀಟರ್
ಬಿ) ನ್ಯಾನೊಮೀಟರ್
ಸಿ) ಅಸಿಲೋಸ್ಕೋಪ್
ಡಿ) ಸ್ಫಿಗ್ಮೊಮಾನೋಮೀಟರ್

175. 1843ರಲ್ಲಿ ಪ್ರಾರಂಭವಾದ ಕನ್ನಡ ಪತ್ರಿಕೋದ್ಯಮದ ಪ್ರಥಮ ಕನ್ನಡ ಪತ್ರಿಕೆ ಯಾವುದು?
ಎ) ಸಂಯುಕ್ತ ಕರ್ನಾಟಕ
ಬಿ) ಪ್ರಜಾವಾಣಿ
ಸಿ) ಮಂಗಳೂರು ಸಮಾಚಾರ
ಡಿ) ವಾರ್ತಾ ಭಾರತಿ

176. ಮೂರನೇ ದುಂಡುಮೇಜಿನ ಪರಿಷತ್ತು ನಡೆದ ವರ್ಷ ಯಾವುದು?
ಎ) 1931
ಬಿ) 1933
ಸಿ) 1932
ಡಿ) 1934

177. ಬಿದಿರು ಅತ್ಯಂತ ಎತ್ತರವಾದ ………
ಎ) ಮರ
ಬಿ) ಹುಲ್ಲು
ಸಿ) ಶಿಲಾವಲ್ಕ
ಡಿ) ಪಾಚಿ

178. 'ಭಾರತ ರತ್ನ' ಪ್ರಶಸ್ತಿ ಪಡೆದ ಮೊದಲ ವ್ಯಕ್ತಿ ಯಾರು?
ಎ) ರಾಜೀವ್ ಗಾಂಧಿ
ಬಿ) ಇಂದಿರಾ ಗಾಂಧಿ
ಸಿ) ಸಿ.ರಾಜಗೋಪಾಲಾಚಾರಿ
ಡಿ) ಜವಾಹರಲಾಲ್ ನೆಹರೂ

179. 'ಸಂಸ್ಕಾರ' ಚಲನಚಿತ್ರಕ್ಕೆ ಚಿತ್ರಕಥೆ ಬರೆದವರು ಯಾರು?
ಎ) ಗಿರೀಶ್ ಕಾರ್ನಾಡ್
ಬಿ) ವೀರಭದ್ರಪ್ಪ
ಸಿ) ಯು.ಆರ್.ಅನಂತಮೂರ್ತಿ
ಡಿ) ಗಿರೀಶ್ ಕಾಸರವಳ್ಳಿ

180. ಈ ಕೆಳಗಿನವುಗಳಲ್ಲಿ ಯಾವುದು ಹಾರುವ ಸಸ್ತನಿ ಆಗಿರುತ್ತದೆ?
ಎ) ಬಾವಲಿ
ಬಿ) ಹದ್ದು
ಸಿ) ಕಾಗೆ
ಡಿ) ಗಿಳಿ

181. 'ಲಿಥೋಸ್ಪಿಯರ್' ಎಂದರೆ
ಎ) ಜೀವಗೋಳ
ಬಿ) ಭೂಮಿಯ ಹೊರಗಿನ ಮೇಲ್ಮೈ
ಸಿ) ಭೂಮಿಯ ಹೊರಪದರ
ಡಿ) ಭೂಗರ್ಭದಲ್ಲಿರುವ ಗೋಳ

182. ರಿಕ್ಟರ್ ಮಾಪನವನ್ನು ಈ ಕೆಳಗಿನ ಯಾವುದನ್ನು ಅಳೆಯಲು ಉಪಯೋಗಿಸುತ್ತಾರೆ?
ಎ) ಗಾಳಿಯ ವೇಗ
ಬಿ) ಭೂಕಂಪನ
ಸಿ) ಸಮುದ್ರದ ಆಳ
ಡಿ) ಭೂಗರ್ಭದ ಶಾಖ

183. 'ನೀವು ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ'- ಎಂದು ಹೇಳಿದವರು ಯಾರು?
ಎ) ಮಹಾತ್ಮಾ ಗಾಂಧೀಜಿ
ಬಿ) ಜವಾಹರಲಾಲ್ ನೆಹರೂ
ಸಿ) ಆನಿ ಬೆಸೆಂಟ್
ಡಿ) ಸುಭಾಷ್ ಚಂದ್ರ ಭೋಸ್

184. ಈ ಕೆಳಗಿನವುಗಳಲ್ಲಿ ಯಾವ ಬೆಳೆಗೆ ಗದ್ದೆಯಲ್ಲಿ ನೀರು ನಿಲ್ಲಬೇಕು?
ಎ) ಟೀ ಬಿ) ಕಾಫಿ
ಸಿ) ಭತ್ತ ಡಿ) ಸಾಸಿವೆ

185. ಈ ಕೆಳಗಿನವುಗಳಲ್ಲಿ ಯಾವ ಗ್ರಹವು ಸೂರ್ಯನಿಗೆ ಸಮೀಪದಲ್ಲಿದೆ?
ಎ) ಭೂಮಿ
ಬಿ) ಪ್ಲೂಟೋ
ಸಿ) ಗುರು
ಡಿ) ಶುಕ್ರ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ– 12ರ ಉತ್ತರ

156. ಡಿ, 157. ಡಿ, 158. ಸಿ, 159. ಬಿ, 160. ಸಿ, 161. ಸಿ, 162. ಸಿ, 163. ಡಿ, 164. ಸಿ, 165. ಬಿ, 166. ಎ, 167. ಡಿ, 168. ಬಿ, 169. ಎ, 170. ಸಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮುಚ್ಚಿದ ಬಾಗಿಲಿನತ್ತ ನಾವು ಆಗಾಗ್ಗೆ ಬಹಳ ಹೊತ್ತು ನೋಡುತ್ತಿರುತ್ತೇವೆಯೇ ವಿನಾ ನಮಗಾಗಿ ತೆರೆದಿರುವ ಬಾಗಿಲಿನತ್ತ ಗಮನ ಹರಿಸುವುದಿಲ್ಲ.

–ಹೆಲೆನ್ ಕೆಲ್ಲರ್

ಸಿನಿಮಾಟೊಗ್ರಫಿ ಕಾಯ್ದೆಗೆ ತಿದ್ದುಪಡಿ ಯತ್ನ ಕಲೆಗೆ ಮಾರಕ, ಸರ್ವಾಧಿಕಾರಕ್ಕೆ ಪೂರಕ

ಸಿನಿಮಾಟೊಗ್ರಫಿ ಕಾಯ್ದೆಗೆ ತಿದ್ದುಪಡಿ ತರುವ ಕೇಂದ್ರ ಸರ್ಕಾರದ ಪ್ರಸ್ತಾವವು ಸಿನಿಮಾ ಮಾಧ್ಯಮವನ್ನು ನಿಯಂತ್ರಿಸುವ ಹಾಗೂ 'ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು ಮೊಟಕುಗೊಳಿಸುವ ಪ್ರಯತ್ನದಂತಿದೆ. ಉದ್ದೇಶಿತ ತಿದ್ದುಪಡಿಯಿಂದಾಗಿ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಪ್ರಾಮುಖ್ಯ ಕಳೆದುಕೊಂಡು, ಸಿನಿಮಾ ಪ್ರದರ್ಶನಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ ರಾಜಕಾರಣ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಗಳಿವೆ. ಚಲನಚಿತ್ರವೊಂದು ಸಾರ್ವಜನಿಕ ಪ್ರದರ್ಶನ ಕಾಣಲು ಅಗತ್ಯವಾದ ಪ್ರಮಾಣಪತ್ರವನ್ನು ಪ್ರಸ್ತುತ ಸಿಬಿಎಫ್‌ಸಿ ನೀಡುತ್ತಿದೆ. ಮಂಡಳಿಯ ನಿರ್ಧಾರ ಒಪ್ಪಿಗೆಯಾಗದಿದ್ದಲ್ಲಿ ಮರುಪರಿಶೀಲನಾ ಸಮಿತಿಗೆ, ಅಂತಿಮವಾಗಿ ನ್ಯಾಯಾಲಯದ ಮೊರೆಹೋಗಲು ನಿರ್ಮಾಪಕರಿಗೆ ಅವಕಾಶವಿದೆ. ಈ ವ್ಯವಸ್ಥೆಯನ್ನು ಬದಲಿಸುವ ಉದ್ದೇಶವನ್ನು ಸಿನಿಮಾಟೊಗ್ರಫಿ ಕಾಯ್ದೆಯ ತಿದ್ದುಪಡಿ ಪ್ರಸ್ತಾವ ಒಳಗೊಂಡಿದೆ. ಪ್ರಮಾಣಪತ್ರ ಪಡೆದ ಸಿನಿಮಾದ ವಿರುದ್ಧ ಆಕ್ಷೇಪಗಳು ವ್ಯಕ್ತವಾದಲ್ಲಿ ಸರ್ಕಾರವೇ ಮಧ್ಯಪ್ರವೇಶಿಸಿ, ಸಿಬಿಎಫ್‌ಸಿಗೆ ತನ್ನ ನಿರ್ಧಾರವನ್ನು ಮರುಪರಿಶೀಲಿಸುವಂತೆ ಆದೇಶಿಸಲು ಅವಕಾಶ ದೊರೆಯಲಿದೆ. ಸಿನಿಮಾ ತೆರೆಕಾಣುವಲ್ಲಿ ಸಿಬಿಎಫ್‌ಸಿ ಪ್ರಮಾಣಪತ್ರದ್ದು ಅಂತಿಮಪಾತ್ರವೇ ಹೊರತು, ಸರ್ಕಾರದ್ದಲ್ಲ ಎನ್ನುವುದನ್ನು ನ್ಯಾಯಾಲಯಗಳು ಸ್ಪಷ್ಟವಾಗಿ ಹೇಳಿವೆ. ಸಿಬಿಎಫ್‌ಸಿ ನಿರ್ಧಾರಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಸರ್ಕಾರಕ್ಕಿಲ್ಲ ಎಂದು ಕರ್ನಾಟಕ ಹೈಕೋರ್ಟ್ 1991ರಲ್ಲಿ ನೀಡಿದ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಆ ಆದೇಶವನ್ನು ಅಪ್ರಸ್ತುತಗೊಳಿಸಿ, 'ಸೂಪರ್ ಸೆನ್ಸಾರ್' ಆಗಲು ಸರ್ಕಾರ ಹೊರಟಿದೆ. ತಜ್ಞರ ಸಮಿತಿಗಳ ಪ್ರಜಾಪ್ರಭುತ್ವ ವ್ಯವಸ್ಥೆಯ ಬದಲಾಗಿ ನೇರವಾಗಿ ಆಡಳಿತಯಂತ್ರವೇ ಮೂಗು ತೂರಿಸುವ ಕ್ರಮ ಸಿನಿಮಾ ಮಾಧ್ಯಮದ ಹಿತಾಸಕ್ತಿಗೆ ಒಳ್ಳೆಯದಲ್ಲ, ಸಂವಿಧಾನದ ಆಶಯಗಳನ್ನು ಈಡೇರಿಸುವ ಜವಾಬ್ದಾರಿ ಹೊತ್ತಿರುವ ಸರ್ಕಾರದ ವರ್ಚಸ್ಸಿಗೂ ತಕ್ಕುದಾದುದಲ್ಲ. ಉದ್ದೇಶಿತ ತಿದ್ದುಪಡಿಗಳು ಅನುಷ್ಠಾನಕ್ಕೆ ಬಂದಲ್ಲಿ ಚಲನಚಿತ್ರ ಪ್ರಮಾಣೀಕರಣ ಮಂಡಳಿಯು ಹಲ್ಲು ಕಿತ್ತ ಹಾವಿನಂತಾಗಲಿದೆ. ಸರ್ಕಾರದ ಆದೇಶಗಳನ್ನು ಯಾರೂ ಪ್ರಶ್ನಿಸಬಾರದು ಎನ್ನುವ ಮನೋಭಾವವನ್ನು ಮಸೂದೆಯ ಕರಡುವಿನಲ್ಲಿರುವ ಅಂಶಗಳು ಸ್ಪಷ್ಟವಾಗಿ ಪ್ರತಿಫಲಿಸುತ್ತಿವೆ.



ಡಿಜಿಟಲ್ ಜಗತ್ತಿನಲ್ಲಿ ಎಲ್ಲ ಬಗೆಯ ದೃಶ್ಯಸರಕು ತುಂಬಿ ತುಳುಕುತ್ತಿರುವಾಗ ಸಿನಿಮಾಕ್ಕೆ ಅಂಕುಶಗಳನ್ನು ಹೆಚ್ಚಿಸುತ್ತಿರುವುದು ಅರ್ಥಹೀನ ಹಾಗೂ ಸೃಜನಶೀಲ ಕಲಾ ಪ್ರಕಾರವನ್ನು ಸರ್ಕಾರದ ಹಿಡಿತದಲ್ಲಿ ಇರಿಸಿಕೊಳ್ಳುವ ಹುನ್ನಾರ

ಇತ್ತೀಚಿನ ವರ್ಷಗಳಲ್ಲಿ, ಸರ್ಕಾರ ಹಾಗೂ ಸರ್ಕಾರದ ಬೆಂಬಲಿಗರು ಸಿನಿಮಾಗಳನ್ನು ಹತ್ತಿಕ್ಕಲು ಆಡಳಿತಯಂತ್ರ ಬಳಸಿಕೊಂಡಿರುವ ಉದಾಹರಣೆಗಳಿವೆ. 'ಸರ್ಕಾರ್' ತಮಿಳು ಸಿನಿಮಾದಲ್ಲಿ ಸರ್ಕಾರಿ ಕಾರ್ಯಕ್ರಮಗಳನ್ನು ಲೇವಡಿ ಮಾಡುವ ದೃಶ್ಯಗಳಿವೆ ಎನ್ನುವ ಕಾರಣಕ್ಕಾಗಿ ಆಗ ಅಧಿಕಾರದಲ್ಲಿದ್ದ ಎಐಎಡಿಎಂಕೆ ಪಕ್ಷದ ಕಾರ್ಯಕರ್ತರು ಚಿತ್ರಮಂದಿರಗಳ ಮೇಲೆ ದಾಳಿ ನಡೆಸಿ, ಹಿಂಸಾಚಾರಕ್ಕೆ ಕಾರಣರಾಗಿದ್ದರು. 'ಪದ್ಮಾವತ್' ಸಿನಿಮಾ ಪ್ರದರ್ಶನಕ್ಕೆ ಸಮುದಾಯವೊಂದು ವ್ಯಕ್ತಪಡಿಸಿದ ಪ್ರತಿಭಟನೆಗೆ ಕೆಲವು ರಾಜ್ಯ ಸರ್ಕಾರಗಳೇ ಬೆಂಬಲ ವ್ಯಕ್ತಪಡಿಸಿ, ಸಿನಿಮಾ ಪ್ರದರ್ಶನಕ್ಕೆ ನಿಷೇಧ ಹೇರಿದ್ದವು. 'ಪದ್ಮಾವತ್' ಚಿತ್ರ ಪ್ರದರ್ಶನಕ್ಕೆ ರಕ್ಷಣೆ ನೀಡುವಂತೆ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಆದೇಶಿಸಿತ್ತು. 'ಉಡ್ತಾ ಪಂಜಾಬ್' ವಿರುದ್ಧ ಎದುರಾದ ಪ್ರತಿಭಟನೆಯಲ್ಲೂ ರಾಜಕೀಯದ ಪಾತ್ರವಿತ್ತು. ಇಂಥ ಪ್ರತಿಭಟನೆಗಳ ಸಂದರ್ಭದಲ್ಲಿ ರಾಜಕೀಯ ಹಸ್ತಕ್ಷೇಪವನ್ನು ಕಾನೂನುಬದ್ಧಗೊಳಿಸಲು ಕಾರಣವಾಗುವ ಅಂಶಗಳು ಸಿನಿಮಾಟೊಗ್ರಫಿ ಕಾಯ್ದೆ ತಿದ್ದುಪಡಿ ಮಸೂದೆಯ ಕರಡುವಿನಲ್ಲಿವೆ. ದೇಶದ ಸಾರ್ವಭೌಮತೆ ಮತ್ತು ಭದ್ರತೆಗೆ ಧಕ್ಕೆ ಉಂಟಾಗುವ ಸಂಗತಿಗಳನ್ನು ಹೊಂದಿರುವ ಚಲನಚಿತ್ರಗಳನ್ನು ಅಥವಾ ಯಾವುದೇ ಕಲಾಕೃತಿಯನ್ನು ನಿರ್ಬಂಧಿಸುವ ಅವಕಾಶ ಈಗಾಗಲೇ ಕಾನೂನಿನಲ್ಲಿದೆ. ಆ ನಿಯಮಗಳನ್ನು ಸರ್ಕಾರ ಇನ್ನಷ್ಟು ಬಲಪಡಿಸಬಹುದು. ಆದರೆ, ಮನೋವಿಕಾಸ ಮತ್ತು ಮನರಂಜನೆಯ ಉದ್ದೇಶವನ್ನು ಹೊಂದಿರುವ ಸಿನಿಮಾದಂಥ ಸೃಜನಶೀಲ ಮಾಧ್ಯಮವನ್ನು ಕಣ್ಗಾವಲಿಗೆ ಒಳಪಡಿಸುವ ಕ್ರಮ ಅನಗತ್ಯವಾದುದು. ಹತ್ತು ವರ್ಷಗಳಿಗೊಮ್ಮೆ ಸಿನಿಮಾ ಪ್ರಮಾಣೀಕರಣವನ್ನು ನವೀಕರಿಸಬೇಕು ಎನ್ನುವ ಪ್ರಸ್ತಾಪವೂ ಗೊಂದಲಗಳಿಗೆ ಎಡೆಮಾಡಿಕೊಡುವಂತಿದೆ. ಬದಲಾದ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ ಕಳೆದ ದಶಕಗಳಲ್ಲಿ ತೆರೆಕಂಡಿರುವ ಸಿನಿಮಾಗಳನ್ನು ಒರೆಗೆ ಹಚ್ಚುವ ಕ್ರಮ ಹೊಸ ವಿವಾದಗಳಿಗೆ ಆಸ್ಪದ ಕಲ್ಪಿಸುವಂತಹದ್ದು, ಭಾರತೀಯ ಚಲನಚಿತ್ರ ಪರಂಪರೆಯನ್ನೇ ಬುಡಮೇಲು ಮಾಡುವಂತಹದ್ದು.

ಭಾರತದಂತಹ ಸ್ವತಂತ್ರ, ಪ್ರಜಾಪ್ರಭುತ್ವ ಹಾಗೂ ಜಾತ್ಯತೀತ ದೇಶದಲ್ಲಿ ಸಿನಿಮಾಗಳನ್ನು ಸೆನ್ಸಾರ್‌ಗೆ ಒಳಪಡಿಸುವ ವ್ಯವಸ್ಥೆಯೇ ಸರಿಯಲ್ಲ ಎನ್ನುವ ವಾದಗಳಿವೆ. ಕಿರುತೆರೆಗಿಲ್ಲದ ಸೆನ್ಸಾರ್ ವ್ಯವಸ್ಥೆಯು ಸಿನಿಮಾಕ್ಕಿರುವುದು ವಿಚಿತ್ರವಾಗಿದೆ. ಡಿಜಿಟಲ್ ಜಗತ್ತಿನಲ್ಲಿ ಎಲ್ಲ ಬಗೆಯ ದೃಶ್ಯಸರಕು ತುಂಬಿ ತುಳುಕುತ್ತಿರುವಾಗ ಸಿನಿಮಾಕ್ಕೆ ಅಂಕುಶಗಳನ್ನು ಹೆಚ್ಚಿಸುತ್ತಿರುವುದು ಅರ್ಥಹೀನ ಹಾಗೂ ಸೃಜನಶೀಲ ಕಲಾಪ್ರಕಾರವನ್ನು ಸರ್ಕಾರದ ಹಿಡಿತದಲ್ಲಿರಿಸಿಕೊಳ್ಳುವ ಹುನ್ನಾರ. ವ್ಯಾಪಾರಿ ಸಿನಿಮಾಗಳಿಗೆ ಪರ್ಯಾಯವಾಗಿ, ಸಾಮಾಜಿಕ ಬಿಕ್ಕಟ್ಟುಗಳಿಗೆ ಸೃಜನಶೀಲ ಸ್ಪಂದನದ ರೂಪದಲ್ಲಿ ಸಿನಿಮಾಗಳನ್ನು ನಿರ್ಮಿಸುವ ನಿರ್ದೇಶಕ- ನಿರ್ಮಾಪಕರು ಇತ್ತೀಚಿನ ವರ್ಷಗಳಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಭಿನ್ನ ಧ್ವನಿಯ ಪರ್ಯಾಯ ಸಿನಿಮಾಗಳನ್ನು ರಾಷ್ಟ್ರಪ್ರಶಸ್ತಿಗಳಿಂದ ಹೊರಗಿಟ್ಟು, ಮನರಂಜನೆಯನ್ನೇ ಪ್ರಮುಖ ಉದ್ದೇಶವಾಗಿಸಿಕೊಂಡ ವ್ಯಾಪಾರಿ ಚಿತ್ರಗಳು ಹಾಗೂ ಸರ್ಕಾರದ ನೀತಿಗಳಿಗೆ ಪೂರಕವಾದ ಒಲವನ್ನು ಹೊಂದಿರುವ ಸಿನಿಮಾ ನಿರ್ಮಾತೃಗಳಿಗೆ ಪ್ರಶಸ್ತಿ, ಪುರಸ್ಕಾರ ನೀಡುವ ಬದಲಾವಣೆ ಶುರುವಾಗಿದೆ. ಈ ಮೂಲಕ, ಪರ್ಯಾಯ ಸಿನಿಮಾಗಳ ನಿರ್ಮಾತೃಗಳನ್ನು ನಿರುತ್ಸಾಹಗೊಳಿಸಲಾಗುತ್ತಿದೆ. ಪ್ರಶಸ್ತಿ ಆಯ್ಕೆ ಪ್ರಕ್ರಿಯೆಯಲ್ಲಿ ರಾಜಕಾರಣದ ಹಸ್ತಕ್ಷೇಪದಿಂದಾಗಿ, ಸಿನಿಮಾ ಮಾಧ್ಯಮದ ಸೌಂದರ್ಯಪ್ರಜ್ಞೆ ಹಾಗೂ ಸಾಧ್ಯತೆಗಳನ್ನು ಗುರುತಿಸಿ ಗೌರವಿಸುವ ರಾಷ್ಟ್ರಪ್ರಶಸ್ತಿಗಳ ಮೂಲ ಉದ್ದೇಶವೇ ಮೂಲೆಗುಂಪಾಗಿದೆ. ಪ್ರಸ್ತುತ ಸಿನಿಮಾಟೊಗ್ರಫಿ ಕಾಯ್ದೆಗೆ ತಿದ್ದುಪಡಿ ತರುವ ಪ್ರಯತ್ನವು ಭಿನ್ನ ಸಿನಿಮಾಗಳ ತಯಾರಕರಿಗೆ ಮೂಗುದಾರ ತೊಡಿಸುವ ಮತ್ತೊಂದು ಪ್ರಯತ್ನವಾಗಿದ್ದು, ತನ್ನ ಮೂಗಿನ ನೇರಕ್ಕೆ ಸಿನಿಮಾ ತಯಾರಿಸುವವರಿಗೆ ಮಾತ್ರ ಅವಕಾಶ ಎನ್ನುವುದನ್ನು ಸರ್ಕಾರ ಪರೋಕ್ಷವಾಗಿ ಹೇಳಲು ಹೊರಟಂತಿದೆ.

ಭಾಷಾ ಬೋಧನೆಯ ಸಾಂಸ್ಕೃತಿಕ ಮಹತ್ವವನ್ನು ನಮ್ಮ ನಾಯಕರು ಅರಿಯುವಂತಾಗಲಿ

ಕನ್ನಡ ಕಾಯಕ ವರ್ಷದಲ್ಲಿ ಕನ್ನಡ



ವಿಶ್ಲೇಷಣೆ

ಕೃಷ್ಣಮೂರ್ತಿ ಹನೂರು

ಜಾಗತಿಕ ಮಟ್ಟದ ಆಧುನಿಕ ಸವಾಲುಗಳನ್ನು ಎದುರಿಸುವಲ್ಲಿನ ಶಾಲಾ ಪಠ್ಯಕ್ರಮವು ಕೇಂದ್ರ ಸರ್ಕಾರದ ಅಂಗಸಂಸ್ಥೆಗಳ ವತಿಯಿಂದಲೇ ಸಿದ್ಧವಾಗುತ್ತಿದೆ ಸರಿ; ಹಾಗಾಗುವಲ್ಲಿ ನಮ್ಮ ಮಕ್ಕಳು ತಾವು ಹುಟ್ಟಿ ಬೆಳೆದ ನೆಲದ ಸುತ್ತ ಯಾವ ಪರಂಪರೆ ಇದೆ ಎಂಬುದೇ ತಿಳಿಯದಂತೆ ಬೆಳೆಯುತ್ತವೆ. ಹೀಗೆ ಪಠ್ಯ ಸಿದ್ಧಗೊಳಿಸುವಾಗ, ಅಗತ್ಯ ಬಿದ್ದಲ್ಲಿ ಆಯಾ ರಾಜ್ಯದ ತಜ್ಞರೊಂದಿಗೆ ಸಮಾಲೋಚಿಸಲಾಗುತ್ತದೆ ಎಂಬ ಸಮಾಧಾನದ ಮಾತು ಹೊಸ ಪಠ್ಯ-ನೀತಿಯಲ್ಲಿದೆ. ಆದರೆ ರಾಜಕಾರಣ ಸಂಬಂಧದ, ಜನಹಿತದ ತುರ್ತು ಬೇಡಿಕೆಗಳೇ ಮೇಲಿನವರ ಕಿವಿಗೆ ಬೀಳದಿರುವಾಗ ಈ ಪಠ್ಯ ತಯಾರಿಕೆಯಲ್ಲಿ ಆಯಾ ರಾಜ್ಯದ ತಜ್ಞರನ್ನು ನೆನಪಿಸಿಕೊಳ್ಳುವುದುಂಟೇ? ಹಾಗೆ ನೇಮಿಸಿಕೊಂಡರೂ ಅವರು ಯಾರಾಗಿರುತ್ತಾರೆ?

ಇನ್ನು ಹೊಸ ಶಿಕ್ಷಣ ನೀತಿಯ ಪಠ್ಯದ ನಿಮಿತ್ತ ಸಾವಿರಾರು ಶಿಕ್ಷಕರನ್ನು ನಿಯೋಜಿಸಿಕೊಳ್ಳಬೇಕಾದ ಅಗತ್ಯವೂ ಇದೆ. ಇದು ಸಾಧ್ಯವಾಗುವುದು ಎಂದಿಗೆ? ಯಾವುದೇ ಪಕ್ಷದ ಯಾವುದೇ ಆಯ್ಕೆಯಲ್ಲಿ ಯಾರು ಯಾವ ಯಾವ ಮಾನದಂಡಗಳಿಂದ ಆಯ್ಕೆಯಾಗಿ ಬರುತ್ತಾರೆ ಎಂಬುದು ಮುಚ್ಚುಮರೆಯ ವಿಷಯವೇ?

ಇನ್ನು ಹೊಸ ಪಠ್ಯನೀತಿಯಂತೆ, ಶಾಲಾ ಸಂಕೀರ್ಣಗಳು ಹತ್ತಾರು ಊರುಗಳ ಮಧ್ಯೆ ನಿರ್ಮಾಣವಾಗುತ್ತವೆ ಸರಿ. ಬೆಳೆದ ಹೆಣ್ಣುಮಕ್ಕಳು, ಹುಡುಗರೇ ತಮ್ಮ ಸ್ನಾತಕೋತ್ತರ ಪದವಿಗಾಗಿ ಚಾಮರಾಜನಗರದಿಂದ ಮೈಸೂರಿಗೆ ಬರುವುದಿಲ್ಲ. ಬಿಳಿಗಿರಿರಂಗನ ಬೆಟ್ಟದ ಆಸುಪಾಸಿನ ಪೋಡುಗಳಲ್ಲಿ ಅಂಗನವಾಡಿ ಓದಿದ ಮಕ್ಕಳು ಮಾಧ್ಯಮಿಕ, ಪ್ರೌಢಶಾಲೆ ಕಲಿಯಲು ಬೆಟ್ಟದವರೆಗೆ ಬರುವುದಿಲ್ಲ. ಇದು ಬುಡಕಟ್ಟು ಮಕ್ಕಳ ಸಮಸ್ಯೆ ಮಾತ್ರವಲ್ಲ, ಹಿಂದುಳಿದ ಜಿಲ್ಲೆಗಳ ಸಣ್ಣಪುಟ್ಟ ಗ್ರಾಮಗಳಲ್ಲಿರುವ ಮಕ್ಕಳ ಸ್ಥಿತಿಗತಿ ಯಥಾವಿಧಿಯಾಗಿಯೇ ಇದೆ.


ಹಲಕೆಲವು ಸರ್ಕಾರಿ ಯೋಜನೆಗಳ ಸಹಾಯದಿಂದ ತಳ ಸಮೂಹದವರ ಜೀವನಕ್ರಮ ಅಷ್ಟಿಷ್ಟು ಸುಧಾರಿಸಿದೆ ಎಂದರೂ ಶಿಕ್ಷಣ ಮಾತ್ರ ಈಗಲೂ ಉಸಿರಾಡಿ ಎದ್ದು ನಿಲ್ಲುವ ಸ್ಥಿತಿಯಲ್ಲಿಲ್ಲ. ತಾವಿರುವ ಜಾಗದಲ್ಲೇ ವಿದ್ಯಾಭ್ಯಾಸ ಕ್ರಮದಲ್ಲಿ ಕಲಿಕೆಯಲ್ಲಿ ಕೊಂಚ ಏರುಪೇರಾದರೂ ಮಕ್ಕಳು ಶಾಲೆ ತೊರೆಯುತ್ತವೆ. ಅದನ್ನು ಕೇಳಲು ತಂದೆ ತಾಯಿಗಳು ಎದುರು ಇರುವುದಿಲ್ಲ. ಕೂಲಿ ಕಾರ್ಮಿಕರಾದ ಅವರು ಗ್ರಾಮದಿಂದ ಹೊರಗಾಗಿ, ವಾಪಸು ಬರುವುದು ರಾತ್ರಿಯೇ. ಇನ್ನು ಹೊಸ ಶಿಕ್ಷಣ ನೀತಿಯಲ್ಲಿ ಗ್ರಾಮೀಣ ಮಕ್ಕಳು ಎದುರಿಸಲಾಗದ ಕೇಂದ್ರೀಯ ಸಾಮೂಹಿಕ ಮೌಲ್ಯಮಾಪನ ಮಾದರಿಯ ಪರೀಕ್ಷೆಯ ಸೂಚನೆ ಇದೆ.

ಕೇಂದ್ರವು ಜಾರಿಗೆ ತರುತ್ತಿರುವ ಶಿಕ್ಷಣ ನೀತಿಯ ಪಠ್ಯವು ಹಲಕೆಲವು ಒಳ್ಳೆಯ ಉದ್ದೇಶಗಳಿಂದ ಕೂಡಿರಬಹುದೇನೋ? ಆದರೆ ಕರ್ನಾಟಕದ ಒಂದೊಂದೂ ಭಾಗದ ಸ್ಥಿತಿಗತಿಯೂ ಒಂದೊಂದು ತೆರನಾಗಿದೆ. ಕೌಶಲಾಧಾರಿತ ಶಿಕ್ಷಣದ ಅಗತ್ಯವಿದೆ ನಿಜ. ಪಟ್ಟಣದ ಕಾಲೇಜುಗಳ ಶ್ರೀಮಂತ ಕುಟುಂಬಗಳ ವಿದ್ಯಾರ್ಥಿಗಳು ಲಾಭ ತರುವ ಆಧುನಿಕ ತಂತ್ರಜ್ಞಾನ ಮಾದರಿಯ ಶಿಕ್ಷಣವನ್ನೇ ಹುಡುಕುತ್ತಾರೆ. ಆದರೆ ಈ ವೃತ್ತಿಕೌಶಲವೊಂದೇ ಮನುಷ್ಯನ ಬದುಕನ್ನು ನಿರ್ವಹಿಸುತ್ತದೆಯೇ? ನಮ್ಮ ಬೆನ್ನಿಗಿದ್ದವರ, ದೇಶ ಕಟ್ಟಿದವರ, ಸಾಹಿತ್ಯ- ಸಂಸ್ಕೃತಿ ನಿರ್ಮಾಪಕರ ಕಥನಗಳನ್ನು ವಿದ್ಯಾರ್ಥಿ ತಾನು ಗಳಿಸಿದ ವೃತ್ತಿ ವಿದ್ಯೆಯೊಂದಿಗೆ ಅಂತರಂಗದಲ್ಲಿ ಉಳಿಸಿಕೊಂಡಿರಬೇಕಲ್ಲವೇ? ಕೇವಲ ಹಣ, ಅಧಿಕಾರದ ಕಾಲಗತಿಗೆ ಈ ಹೊತ್ತಿನ ವಿದ್ಯಮಾನಗಳೇ ಸಾಕ್ಷಿಯಾಗುತ್ತಿವೆಯಲ್ಲ.

ಆತ್ಮಶ್ರೀಯನ್ನು ತಾವು ಬದುಕಿರುವವರೆಗೆ ಬಯಸಿದ ಮಹಾತ್ಮ ಗಾಂಧಿಗೂ ಬರಿಯ ಬೌದ್ಧಿಕ ಭಾರತದ ಕನಸನ್ನು ಕಾಣುತ್ತಿದ್ದ ನೆಹರೂ ಅವರಿಗೂ ವ್ಯತ್ಯಾಸವಿತ್ತಲ್ಲವೇ! ನ್ಯೂಯಾರ್ಕ್ ಮತ್ತು ಸ್ಟೋನಿಬ್ರೂಕ್‌ನ ಹೆದ್ದಾರಿಯಲ್ಲಿ ಆಳೆತ್ತರದ ಗಾಂಧಿಯ ಕಂಚಿನ ಪ್ರತಿಮೆ ಇದೆ. ಅಲ್ಲೆಲ್ಲಿಯೂ ನೆಹರೂ ಅವರ ಒಂದು ಚಿತ್ರಪಟವೂ ಇಲ್ಲ. ಕೇಂಬ್ರಿಜ್‌ನಲ್ಲಿ ಓದಿದ ನೆಹರೂಗೆ ಇಂಗ್ಲಿಷ್, ಕ್ರಿಕೆಟ್ ಮತ್ತು ಹಿಮದಲ್ಲಿ ಜಾರುವ ಅಭ್ಯಾಸದೊಂದಿಗೆ ಅಧಿಕಾರ ಮೋಹವಿದ್ದರೆ, ಇನ್ನೊಂದು ದಿಕ್ಕಿನಲ್ಲಿದ್ದ ಗಾಂಧಿಗೆ ಮಾತೃಭಾಷೆ, ಚರಕ, ಅಪರಿಗ್ರಹ ಬುದ್ಧಿ ಮತ್ತು ರಾಮಾಯಣ ಇಷ್ಟವಾಗಿದ್ದವು. ಬ್ರಿಟಿಷರ ಕಾಲದಲ್ಲಿ ಇಲ್ಲದೇ ಹೋಗಿದ್ದ ಮಾತೃಭಾಷೆಯ ಗೊಂದಲ ಈ ಇಪ್ಪತ್ತು ವರ್ಷಗಳಲ್ಲಿ ಅಧಿಕವಾಗಿಬಿಟ್ಟಿದೆ.

ಹೊಸ ಶಿಕ್ಷಣ ನೀತಿಯ ಕರಡು ಸಲ್ಲಿಕೆಯಾದಾಗ ಪ್ರಧಾನಿಯವರು, ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಕಲಿಕೆ ಕುರಿತಾಗಿ ಅಭಿಮಾನದಿಂದಲೇ ಮಾತನಾಡಿದ್ದರು. ಆದರೆ ಶಿಕ್ಷಣ ಕರಡನ್ನು ತಳ ಪದರದಿಂದ ನೋಡಿದಲ್ಲಿ, ಗ್ರಾಮೀಣ ಸಮೂಹದ ಮಕ್ಕಳು ತಾವಿರುವ ವಾತಾವರಣದಿಂದ ದೂರವಿರುವ ಶಾಲಾ ಸಂಕೀರ್ಣ ಸಮೂಹಕ್ಕೆ ಹೆದರಿ ತಂತಮ್ಮ ವೃತ್ತಿಗೆ ಮರಳುವ ಸ್ಥಿತಿ ಏರ್ಪಡುವಂತಿದೆ.

ಪ್ರಾಥಮಿಕ ಹಂತದಲ್ಲಿ ಭಾಷಾ ಕಲಿಕೆ ಈಗಲೇ ಅಪಾಯಕಾರಿ ಸ್ಥಿತಿಯಲ್ಲಿದ್ದು ಅದು ಪದವಿ ತರಗತಿಯವರೆಗೂ ನಾನಾ ರೀತಿಯಲ್ಲಿ ಮುಂದುವರಿಯುತ್ತಿದೆ. ಈಗಿರುವ ವೇತನ ತಾರತಮ್ಯವು ಅತಿಥಿ ಉಪನ್ಯಾಸಕ ಸಮೂಹದ ಬೋಧನಾ ಸಾಮರ್ಥ್ಯವನ್ನೇ ಕುಗ್ಗಿಸುವಂತಿದೆ. ಈ ಕೆಟ್ಟುಹೋದ ಶಿಕ್ಷಣ ಕ್ರಮವನ್ನು ಒಟ್ಟು ವಿದ್ಯಾರ್ಥಿಗಳ ತಲೆಯ ಮೇಲೆ ಹೇರಿ, 'ಅವರು ಪಾಠ ಕೇಳುವುದಿಲ್ಲ' ಎಂದು ಹೇಳಲಾಗುತ್ತಿದೆ. ಇಂಥ ವೇಳೆ ಭಾಷಾಬೋಧನೆ ಪದವಿ ಮಟ್ಟದಲ್ಲಿ ಒಂದು ವರ್ಷ ಮಾತ್ರ ಸಾಕು, ಅಗತ್ಯ ಬಿದ್ದರೆ ಆ ಮುಂದೆ ಅದನ್ನು ಐಚ್ಛಿಕವಾಗಿ ಓದಬಹುದು ಎಂಬ ಸೂಚನೆ ಇದೆ.



ಈಗ ಯಾರೂ ಉದ್ಯೋಗದ ನಿಮಿತ್ತ ಭಾಷೆ, ಸಾಹಿತ್ಯ ಓದುವುದಿಲ್ಲ. ಯಾವ ವಿಷಯಗಳ ಓದಿನ ಮೂಲಕ ವಿದ್ಯಾರ್ಥಿಗಳು ನಿರಂಕುಶಮತಿಗಳಾಗಬೇಕೆಂದು ಕುವೆಂಪು ಬಯಸಿದರೋ ಅವೇ ಸಾಂಸ್ಕೃತಿಕ ಸಂಗತಿಗಳು ಈ ಹೊತ್ತು ಬೋಧಕ ವರ್ಗ ಮತ್ತು ವಿದ್ಯಾರ್ಥಿ ಸಮೂಹದಲ್ಲಿ ಕೀಳರಿಮೆಯ ವಿಷಯಗಳಾಗಿಬಿಟ್ಟಿವೆ.

ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲೂ ಲಾಭ ತರುವ ತಾಂತ್ರಿಕ ವಿದ್ಯೆಗಿರುವ ಆಸಕ್ತಿ ಇಂಗ್ಲಿಷ್ ಓದುವುದರಲ್ಲಿ ಇಲ್ಲವೆಂದು ಅಲ್ಲಿಯ ಪ್ರಾಧ್ಯಾಪಕರೇ ಹೇಳುತ್ತಾರೆ. ಶ್ರೀಮಂತ ಪರಂಪರೆಯ ಭಾಷಾ ಸಂಗತಿಗಳ ದುಃಸ್ಥಿತಿ ಇದು! ಭಾರಿ ಗಂಟಿನ ಡೊನೇಶನ್ ತೆತ್ತು ವ್ಯಾವಹಾರಿಕ ವಿದ್ಯೆಯನ್ನು ಗಳಿಸುವವರೇ ಬುದ್ಧಿವಂತ ವಿದ್ಯಾರ್ಥಿ ಸಮೂಹ! ತಾನು ನಿಂತ ನೆಲ, ಸಮಾಜ, ದೇಶ, ಜಗತ್ತಿನ ಅರಿವಿಲ್ಲದೇ ಹೋದವನ ಪರಿಜ್ಞಾನ ಯಾವ ಮಟ್ಟದ್ದಿರುತ್ತದೆ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆ.

ಯಾವುದೇ ವಿದ್ಯಾರ್ಥಿ ಸಮೂಹವು ಕೌಶಲ ಆಧಾರಿತ ಅಥವಾ ಯಂತ್ರ ತಂತ್ರ ಇಲ್ಲವೇ ಕಲಾ ವಿಷಯಗಳನ್ನು ಕಲಿಯುವಲ್ಲಿ ಸಮಾಜದ ಸ್ವಾಸ್ಥ್ಯವನ್ನೂ ಕಾಯುವ ಹಿತದೃಷ್ಟಿಯಿಂದ ತನ್ನ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಅಂತರಂಗಕ್ಕೆ ತಂದುಕೊಳ್ಳಬೇಕಾದುದು ಅಗತ್ಯ. ಈ ಕಾರಣ, ವಿದ್ಯಾರ್ಥಿ ಆಯ್ಕೆ ಮಾಡಿಕೊಳ್ಳುವ ಯಾವುದೇ ಇತರ ಕಲೆ ಮತ್ತು ವಿಜ್ಞಾನ ವಿಷಯದೊಂದಿಗೆ ಭಾಷೆ ಮತ್ತು ಸಾಹಿತ್ಯವನ್ನು ಬೋಧಿಸಿ ಅವರ ಬುದ್ಧಿಶಕ್ತಿಯೊಂದಿಗೆ ಹೃದಯಶ್ರೀಮಂತಿಕೆಯನ್ನು ಹೆಚ್ಚಿಸುವುದರ ಹಿನ್ನೆಲೆಯಲ್ಲಿ ಭಾಷಾ ಬೋಧನೆಯನ್ನು ಈಗಿರುವಂತೆಯೇ ಉಳಿಸಿಕೊಳ್ಳಬೇಕಾಗಿರುತ್ತದೆ.

ಇದೀಗ ಕನ್ನಡ ಅಧ್ಯಾಪಕ ಸಮೂಹವಲ್ಲದೆ ಲೇಖಕರು, ಚಿಂತಕರು ಇದನ್ನು ಕುರಿತು ಮಾತನಾಡುತ್ತಿದ್ದಾರೆ. ಉನ್ನತ ಶಿಕ್ಷಣ ಸಚಿವರು, ಪದವಿ ಕಾಲೇಜುಗಳಲ್ಲಿ ಭಾಷೆ ಸಾಹಿತ್ಯ ಬೋಧನೆಯನ್ನು ಎರಡು ವರ್ಷಕ್ಕೆ ಮುಂದುವರಿಸುವುದಾಗಿ ಭರವಸೆ ನೀಡಿದ್ದಾರೆ. ಇದು ಭರವಸೆಯಾಗಿ ಉಳಿಯದಂತೆ ಸಚಿವರು, ಮುಖ್ಯಮಂತ್ರಿಗಳು ಗಮನಹರಿಸಲಿ. ದೇಶ ವಿದೇಶಗಳಿಂದ ಬಂದ ಕ್ರೈಸ್ತ ಮಿಷನರಿಗಳು ಮಾಡಿರುವ ಅಗಾಧ ಕನ್ನಡ ಕೆಲಸ ನೋಡಿದರೆ ದಿಗ್ಭ್ರಮೆಯಾಗುತ್ತದೆ. ಆ ಮಹನೀಯರಿಂದ ಆ ಬಗೆಯ ಕೆಲಸ ಕರ್ನಾಟಕದಲ್ಲಿ ಮಾತ್ರವಲ್ಲ ದೇಶದ ತುಂಬ ನಡೆದಿದೆ. ಇಂಥ ವೇಳೆ ದೇಶನಾಯಕರೇ ಪ್ರಾಂತೀಯ ಭಾಷೆಗಳಿಗೆ ಗತಿ ಕಾಣಿಸಲು ಹೊರಟಿರುವುದು ಘನತೆ ತರುವ ವಿಷಯವಲ್ಲ.

ದೊಡ್ಡ ದೊಡ್ಡ ನಗರಗಳ ವಾಣಿಜ್ಯ ಸಂಕೀರ್ಣಗಳ ಮುಂದೆ ಮೂವತ್ತು- ನಲವತ್ತು ಅಡಿ ಎತ್ತರಕ್ಕಿರುವ ಪ್ಲಾಸ್ಟಿಕ್ ಬಟ್ಟೆಯ ಗೊಂಬೆಗಳಿದ್ದು, ಅವು ನಡುಮುರಿದಂತೆ ಬಿದ್ದಿದ್ದು, ಅವಕ್ಕೆ ಗಾಳಿ ತುಂಬಲಾಗಿ ಇದ್ದಕ್ಕಿದ್ದಂತೆಯೇ ಅಕರಾಳ ವಿಕರಾಳ ಕೈ, ಕಾಲು, ತಲೆಯನ್ನು ಮೇಲುಮೇಲಕ್ಕೆ ಚಾಚಿ ಪರಾಕ್ರಮದಿಂದಲೆಂಬಂತೆ ಎದ್ದು ಆಡತೊಡಗುತ್ತವೆ. ಗಾಳಿ ಹೋದಂತಾಗಿ ಮತ್ತೆ ಕೆಳಗೆ ಬೀಳುತ್ತವೆ. ಈ ನಡುಮುರಿದೆದ್ದು ಕುಣಿಯುವ ಎತ್ತರದ ಗೊಂಬೆಗಳ ಆಟವನ್ನು ಶ್ರವಣಬೆಳಗೊಳದ ಭವ್ಯಮೂರ್ತಿ ಗೋಮಟೇಶ್ವರನಿಗೆ ಹೋಲಿಸಲು ಸಾಧ್ಯವೇ? ಆತನ ಎತ್ತರ, ಅತಿಎತ್ತರದ ಸಾಂಸ್ಕೃತಿಕ ಕಥನದ ಹಿನ್ನೆಲೆಯ ಬರಹ ಇರುವುದು ಕಾಲಾನುಕಾಲದ ಭಾಷೆ, ಸಾಹಿತ್ಯ ಪರಂಪರೆಯಲ್ಲಿ. ಅದನ್ನು ಅರಿಯದೇ ಹೋದರೆ ನಮ್ಮ ಓದಿಗೆ, ಬದುಕಿಗೆ ಅರ್ಥವಿರುವುದಿಲ್ಲ.

ಚುರುಮುರಿ



ಉಳಿತಾಯ ಮಂತ್ರ

• ಸುಮಂಗಲಾ

ವೋಟರ್ ಐಡಿ, ಆಧಾರ್ ಕಾರ್ಡು ಇತ್ಯಾದಿ ನನ್ನದೆಂಬ ಗುರುತುಗಳನ್ನು ಒಂದು ಕವರಿನಲ್ಲಿ ಜೋಪಾನವಾಗಿ ಹಾಕಿಡುತ್ತಿದ್ದೆ.

'ಆಧಾರ್ ಕಾರ್ಡ್ ಒಂದೇ ಸರಿಯಾಗಿ ಎತ್ತಿಟ್ಟುಕೋ ಸಾಕು, ಆ ವೋಟರ್ ಐಡಿ ಮುಂದೆ ಉಪಯೋಗಕ್ಕೆ ಬರಂಗಿಲ್ಲ, ಬಿಸಾಕು' ಎಂದು ಬೆಕ್ಕಣ್ಣ ಘನಗಂಭೀರವಾಗಿ ಕಣಿ ನುಡಿಯಿತು.

'ಮಂಗ್ಯಾನಂಥವ್ನೆ... ನಾ ಅಗದಿ ಜವಾಬ್ದಾರಿ ನಾಗರಿಕಳು, ಪ್ರತಿಸಲನೂ ವೋಟ್ ಮಾಡತೀನಿ' ಎಂದೆ.

'ಮಾಡಿ ಏನು ಬಂತು ಮಣ್ಣಾಂಗಟ್ಟಿ... ಇನ್ನು ಮುಂದೆ ಲೋಕಸಭೆ ಚುನಾವಣೆ ಅಗತ್ಯನೇ ಇಲ್ಲ. ಎಲ್ಲಾ ವಿರೋಧ ಪಕ್ಷಕ್ಕೂ ಉಬ್ಬಸ ರೋಗ ಬಡದೈತಿ. ಜರಾ ಚೇತರಿಸ್ಕೋತಿದ್ದಂಗೆ ಅವರೊಳಗೇ ಕಚ್ಚಾಟ ಶುರು. ಹೆಂಗೂ ಮೋದಿಮಾಮಾನೆ ಪ್ರಧಾನಿಯಾಗೂದು ಖರೇ ಇದ್ದಾಗ ಚುನಾವಣೆ ಎದಕ್ಕ. ಅದು ಹೋಗ್ಲಿ, ಹೋದಸರ್ತಿ ನಮ್ಮ ವಿಧಾನಸಭೆ ಚುನಾವಣೆಗೆ ಎಷ್ಟ್ ರೊಕ್ಕ ಖರ್ಚ್ ಮಾಡ್ಯಾರೆ ಹೇಳು'.

'ಹೋದ ಸಲದ್ದು ರೆಕಾರ್ಡ್ ಬ್ರೇಕ್ ಖರ್ಚು. ಅಭ್ಯರ್ಥಿಗಳು ಸುಮಾರು ಹತ್ತು ಸಾವಿರ ಕೋಟಿ ಖರ್ಚು ಮಾಡ್ಯಾರೆ, ಇನ್ನಾ ಚುನಾವಣೆ ನಡೆಸಾಕ ಆಯೋಗ ಎಷ್ಟ್ ಖರ್ಚು ಮಾಡೈತಿ ಗೊತ್ತಿಲ್ಲ'.

'ಎಲ್ಲ ಸೇರಿ ಅಂದಾಜು ಹದಿನೈದು ಸಾವಿರ ಕೋಟಿ ರೂಪಾಯಿಯಾದರೂ ಖರ್ಚು ಹೌದಿಲ್ಲೋ... ಉಪಯೋಗನೇ ಇಲ್ಲ. ಯಾವ ಸರ್ಕಾರ ಗೆಲ್ಲಬಕು, ಯಾರು ಮುಖ್ಯಮಂತ್ರಿಯಾಗಬೇಕು, ಯಾರಿಗೆ ಯಾವ ಖಾತೆ, ಯಾರು ಯಾವ ನಿಗಮ, ಮಂಡಲಿಗೆ ಅಧ್ಯಕ್ಷರಾಗಬೇಕು ಅಂತ ನಿರ್ಧಾರ ಮಾಡೋದು ಮಠಗಳು ಹೌದಿಲ್ಲೋ. ಇಷ್ಟೆಲ್ಲ ಖರ್ಚು ಮಾಡಿ ಚುನಾವಣೆ ನಡೆಸೂ ಬದಲಿಗೆ ಮಠದ ಸ್ವಾಮಿಗಳು ಮಾತ್ರ ವೋಟ್ ಮಾಡಿ, ಅವರೊಳಗೆ ತೀರ್ಮಾನಿಸಿ ಮುಖ್ಯಮಂತ್ರಿ ಆಯ್ಕೆ ಮಾಡಿದ್ರಾತು. ಚುನಾವಣೆ ಖರ್ಚು ಉಳಿತೈತಿ, ಆಪರೇಶನ್ ಕಮಲದ ರೊಕ್ಕನೂ ಉಳಿತೈತಿ, ಹಿಂಗ ಉಳಿದಿದ್ದ ರೊಕ್ಕನ ಮತ್ತ ಮಠಕ್ಕೆ ಹಂಚಿಬಿಟ್ರಾತು. ನಾ ಚುನಾವಣೆ ಬಗ್ಗೆ ಅಧ್ಯಯನ ಮಾಡಿ ರಾಷ್ಟ್ರಪತಿಗೆ ಸಲ್ಲಿಸೂ ವರದಿ ವಳಗ ಇದೇ ಪ್ರಪೋಸಲ್ ಇಟ್ಟೀನಿ' ಬೆಕ್ಕಣ್ಣ ವಿವರಿಸುತ್ತಲೇ ಇತ್ತು!

ದಿನದ ಟ್ವೀಟ್



ಏನಾದರೂ ಮಾಡಿದೆಯೇ?

ಓಲಾ ಎಲೆಕ್ಟ್ರಿಕ್ ಕಂಪನಿಯು ಟಿವಿಎಸ್‌ನಂತೆಯೇ ಹೊಸೂರಿನಲ್ಲಿ ಕಾರ್ಖಾನೆಯನ್ನು ಸ್ಥಾಪಿಸುತ್ತಿದೆ. ಬಹುತೇಕ ಉದ್ಯೋಗಿಗಳು ಬೆಂಗಳೂರಿನಲ್ಲಿಯೇ ನೆಲೆಸುತ್ತಾರೆ, ಹತ್ತಿರದಲ್ಲಿರುವ ವಿಮಾನ ನಿಲ್ದಾಣ ಸೌಕರ್ಯವೆಂದರೆ ಬೆಂಗಳೂರು, ಉತ್ತಮ ವೈದ್ಯಕೀಯ ಸೌಲಭ್ಯಗಳು ಬೆಂಗಳೂರಿನಲ್ಲಿ ಲಭ್ಯವಿವೆ. ಆದರೆ ತೆರಿಗೆ ಹಣ ಮಾತ್ರ ತಮಿಳುನಾಡು ಸರ್ಕಾರಕ್ಕೆ ಹೋಗುತ್ತದೆ. ಈ ಬಗ್ಗೆ ಕರ್ನಾಟಕ ಸರ್ಕಾರ ಏನನ್ನಾದರೂ ಮಾಡಿದೆಯೇ? ನಿದ್ರೆ, ಒಳಜಗಳ ಮತ್ತು ಉದಾಸೀನ ಮನಃಸ್ಥಿತಿ!

ರೋಹಿತ್ ಸಿಂಹ, ಎಂಜಿನಿಯರ್



ಅತಿರೇಕ ಸಲ್ಲದು

ತಾರೆಯರಿಗೆ ಖಾಸಗಿ ಜೀವನ ಇದೆ. ಅಭಿಮಾನಿಗಳು ಅತಿರೇಕದಿಂದ ಆಡುವುದು ಬಿಡಬೇಕು. ಹೊರಗೆ ಕಂಡಲ್ಲಿ ಇರುವೆಯಂತೆ ಮುತ್ತುವುದು, ಕಾಡುವುದು ಎಲ್ಲಾ ಅಸಹ್ಯ. ತೆರೆಯಲ್ಲಿ ಹತ್ತಿರ ಕಂಡಕೂಡಲೇ ಅವರು ನಮ್ಮ ನೆಂಟರಾಗುವುದಿಲ್ಲ. ಇವರು ಅಭಿಮಾನಿ ಅಲ್ಲ ಮಾನಸಿಕ ಅಸ್ವಸ್ಥರು.

(ನಟಿ ರಶ್ಮಿಕಾ ಮಂದಣ್ಣ ಅವರನ್ನು ಹುಡುಕಿಕೊಂಡು ಅವರ ಅಭಿಮಾನಿಯೊಬ್ಬ ತೆಲಂಗಾಣದಿಂದ ಕೊಡಗಿಗೆ ಬಂದಿದ್ದಕ್ಕೆ ಪ್ರತಿಕ್ರಿಯೆ)

ಕ್ರುಶಿಕ ಎ.ವಿ., ನಾಗರಿಕ

---

50 ವರ್ಷಗಳ ಹಿಂದೆ

ಸೋಮವಾರ, 28-6-1971

• **ರಾಜಸ್ಥಾನ ಮುಖ್ಯಮಂತ್ರಿ ಸುಖಾಡಿಯಾ ರಾಜೀನಾಮೆ**

ಜಯಪುರ, ಜೂನ್ 27– ರಾಜಸ್ಥಾನ ಮುಖ್ಯಮಂತ್ರಿ ಸ್ಥಾನ ತ್ಯಜಿಸುವುದಾಗಿ ಶ್ರೀ ಮೋಹನ್ ಲಾಲ್ ಸುಖಾಡಿಯಾ ಅವರು ಆಡಳಿತ ಕಾಂಗ್ರೆಸ್ ಶಾಸಕರ ಜಂಟಿ ಸಭೆಯಲ್ಲಿ ಇಂದು ಪ್ರಕಟಿಸಿದರು.

1954ನೇ ನವೆಂಬರ್ ತಿಂಗಳಲ್ಲಿ ತಮ್ಮ 37ನೇ ವಯಸ್ಸಿನಲ್ಲಿ ರಾಜಸ್ಥಾನದ ಮುಖ್ಯಮಂತ್ರಿಯಾದ ಶ್ರೀ ಸುಖಾಡಿಯಾ ಅವರು, ರಾಷ್ಟ್ರಪತಿ ಆಳ್ವಿಕೆಯ ದಿನಗಳನ್ನು ಬಿಟ್ಟರೆ ಉಳಿದ ಕಾಲದಲ್ಲೆಲ್ಲಾ ಅಧಿಕಾರದಲ್ಲಿದ್ದರು. ಅಧಿಕಾರ ತ್ಯಜಿಸಲು ಪ್ರಧಾನಮಂತ್ರಿಯಾಗಲೀ ಅಥವಾ ಇನ್ನು ಯಾರಾದರೂ ಆಗಲಿ ತಮ್ಮನ್ನು ಒತ್ತಾಯಪಡಿಸಲಿಲ್ಲ, ಇದು ತಮ್ಮ ಸ್ವಂತ ನಿರ್ಧಾರವೆಂದು ಶ್ರೀ ಸುಖಾಡಿಯಾ ಅವರು ತಮ್ಮ ಸಹೋದ್ಯೋಗಿಗಳಿಗೆ ತಿಳಿಸಿದಾಗ ಅವರ ಕಣ್ಣಲ್ಲಿ ಅಶ್ರು ಧಾರಾಕಾರವಾಗಿ ಹರಿಯಿತು.

ಇದರಿಂದ ರಾಜಸ್ಥಾನ ಆಡಳಿತ ಕಾಂಗ್ರೆಸ್ಸಿನಲ್ಲಿನ ಬಿಕ್ಕಟ್ಟು ಬೆಳಕಿಗೆ ಬಂದಿದೆ.

ಚರ್ಚೆ

ದಿವ್ಯೋದ್ಯೋಗವೋ ಪೊಳ್ಳು ನಂಬಿಕೆಯೋ?

ಅರ್ಚಕತ್ವ ಎನ್ನುವುದನ್ನು ವರ್ಣೋತ್ತಮರ ಸ್ವತ್ತನ್ನಾಗಿ ಮಾಡಿಕೊಳ್ಳುವ ಹುನ್ನಾರವಲ್ಲದೆ ಬೇರೇನೂ ಅಲ್ಲ

• ಮೀನಾಕ್ಷಿ ಬಾಳಿ

ಸಾರ್ವಜನಿಕ ದೇವಸ್ಥಾನಗಳಲ್ಲಿ ಪೂಜಾ ಕೈಂಕರ್ಯಕ್ಕೆ ಬ್ರಾಹ್ಮಣೇತರರನ್ನು ನೇಮಿಸಬಾರದೇಕೆ ಎಂಬ ಚರ್ಚೆಯು ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಈ ಚರ್ಚೆಯಲ್ಲಿ ಭಾಗವಹಿಸಿದ್ದ ಗ.ನಾ.ಭಟ್ಟ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಜೂನ್ 26) 'ಅರ್ಚಕ ವೃತ್ತಿಯು ಹೊರಗಿನ ತರಬೇತಿಗೆ ದಕ್ಕುವುದಿಲ್ಲ. ಅದು ಸಿದ್ಧಿಸುವುದು ವಿದ್ಯೆ ಮತ್ತು ಸಂಸ್ಕಾರದಿಂದ' ಎಂದಿದ್ದಾರೆ. ಅಲ್ಲದೆ, 'ಸಂಸ್ಕೃತ ಮತ್ತು ವೇದಭಾಷೆಯಲ್ಲಿ ಪರಿಣತರಾದವರು ಮಾತ್ರ ಆ ವೃತ್ತಿಗೆ ಅರ್ಹರು. ಅಷ್ಟಕ್ಕೂ ವೇದಮಂತ್ರಗಳ ಉಚ್ಚಾರಣೆಯಿಂದಾಗುವ ಆನಂದವು ಪ್ರಾದೇಶಿಕ ಭಾಷೆಯಿಂದ ಉಂಟಾಗುವುದಿಲ್ಲ' ಎಂದಿದ್ದಾರೆ.

ಅರ್ಚಕ ವೃತ್ತಿಯೆಂಬುದು ದಿವ್ಯೋದ್ಯೋಗ, ಅದಕ್ಕೆ ವಿಶೇಷ ಅರ್ಹತೆ ಬೇಕು, ಬ್ರಾಹ್ಮಣರು ತುಂಬಾ ಕಷ್ಟಪಟ್ಟು ಅದನ್ನು ಸಂಪಾದಿಸಿಕೊಂಡಿದ್ದಾರೆ ಎಂಬ ಅವರ ಈ ವಾದವು ಮತ್ತದೇ ಹಳಸಲು ವ್ಯಾಧಿಯೆನ್ನದೆ ಗತ್ಯಂತರವಿಲ್ಲ. ದೇವಸ್ಥಾನದ ತಂಪಿನಲ್ಲಿ ಕುಳಿತು ಪೂಜೆ ಮಾಡುವುದೇ ಇಷ್ಟು ಕಷ್ಟವಾದರೆ ಮಳೆ, ಬಿಸಿಲು, ಚಳಿಯಲ್ಲಿ ಬೆವರಿಳಿಸಿ ದುಡಿಯುವ ರೈತರು, ಕೂಲಿಕಾರ್ಮಿಕರು ಅದೆಷ್ಟು ಕಷ್ಟ ಪಡುತ್ತಿರಬಹುದು?

ಸಂಸ್ಕೃತ ಭಾಷೆಯಲ್ಲಿ ಪೂಜೆ ಮಾಡಿದರೆ ದೇವರಿಗೆ ಅರ್ಪಿತ, ಮನಸ್ಸಿಗೆ ಶಾಂತಿ ಎಂಬ ವಾದವನ್ನು 12ನೇ ಶತಮಾನದ ವಚನಕಾರ ನಗೆಯ ಮಾರಿತಂದೆ ಅಂದೇ ಖಂಡಿಸಿದ್ದಾನೆ: 'ಕಲ್ಲಿಯ ಹಾಕಿ ನೆಲ್ಲವ ತುಳಿದು/ ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ/ ವಾಗದ್ವೈತವ ಕಲಿತು/ ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು/ ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ/ ಅದೇತರ ನುಡಿ, ಮಾತಿನ ಮರೆ/ ಆತುರವೈರಿ ಮಾರೇಶ್ವರಾ'.

ಯಾವತ್ತೂ ಬಹುಜನರಿಗೆ ಅರ್ಥವಾಗದಿದ್ದ ಭಾಷೆಯಲ್ಲಿ ಮಂತ್ರಾದಿಗಳನ್ನು ಪಠಿಸಿ ಜನರನ್ನು ಸಮ್ಮೋಹನಗೊಳಿಸುವ, ಅದಕ್ಕಿಂತಲೂ ಹೆಚ್ಚಾಗಿ ದೇವರು-ಧರ್ಮ-ಕರ್ಮಗಳ ಹೆಸರಲ್ಲಿ ಭಯಗ್ರಸ್ತಗೊಳಿಸುವ ಹುನ್ನಾರವನ್ನು ನಗೆಯ ಮಾರಿತಂದೆಯು ಬಲೆಯಲ್ಲಿ ನೆಲ್ಲು ಚೆಲ್ಲಿ ಗುಬ್ಬಿಯನ್ನು ಹಿಡಿಯುವ ಕಪಟ ವಿದ್ಯೆ ಎಂದೇ ಸ್ಪಷ್ಟಪಡಿಸಿದ್ದಾನೆ. ಸಂಸ್ಕೃತ ಭಾಷಾ ಶ್ರೇಷ್ಠತೆಯ ವ್ಯಸನಿಗಳು, ಆ ಮೂಲಕ ಉಳಿದ ಭಾಷೆಗಳು ಹಾಗೂ ಆ ಭಾಷಿಕ ಸಮುದಾಯಗಳ ಸಂಸ್ಕೃತಿಯನ್ನು ನಗಣ್ಯಗೊಳಿಸುತ್ತಿರುವ ಪುರೋಹಿತರ ಬಗೆಗೆ ಎಚ್ಚರವಿರಬೇಕು ಎನ್ನುತ್ತಾನೆ.

ಸಂಸ್ಕೃತ ಭಾಷೆಯ ಎತ್ತರ-ಬಿತ್ತರ, ಅಲ್ಲಿನ ದಾರ್ಶನಿಕ ಧಾರೆಗಳ ಕುರಿತು ಯಾರದ್ದೂ ತಕರಾರು ಇಲ್ಲ. ಆದರೆ ಉಳಿದ ಭಾಷೆಗಳಿಗೆ ಆ ಹೊಳಹು ಇಲ್ಲ ಎನ್ನುವುದು ಎಷ್ಟರಮಟ್ಟಿಗೆ ಸರಿ? ಪ್ರತಿಯೊಂದು ಭಾಷೆಗೂ ತನ್ನದೇ ಆದ ಶಕ್ತಿ, ಸಾಮರ್ಥ್ಯಗಳು ಇರುತ್ತವೆ. ಭಾಷೆ ಎಂಬುದು ಯಾವತ್ತಿದ್ದರೂ ಒಂದು ಸಾಧನ ಅಥವಾ ಮಾಧ್ಯಮ ತಾನೇ? ಕನ್ನಡಕ್ಕೆ ಜಗತ್ತಿನೆಲ್ಲ ದಾರ್ಶನಿಕ ಧಾರೆಗಳನ್ನು ಬಸಿದುಕೊಳ್ಳುವ ಶಕ್ತಿ ಇದೆ ಎಂಬುದನ್ನು ಶರಣರು, ತತ್ವಪದಕಾರರು, ದಾಸರು ಉದ್ದಕ್ಕೂ ತೋರಿಸಿಕೊಟ್ಟಿದ್ದಾರೆ. ಹಾಗೇ ಉಳಿದ ಪ್ರಾದೇಶಿಕ ಭಾಷೆಗಳಿಗೂ ಇಂಥದ್ದೊಂದು ಧಾರಣಶಕ್ತಿ ಇರಲಾರದು ಎಂದು ಭಾಷಾತಜ್ಞರೇನಾದರೂ ಹೇಳಿದ್ದಾರೆಯೇ?

ಪೌರೋಹಿತ್ಯ ಯಾವುದೇ ಒಂದೇ ಜಾತಿಯಲ್ಲಿ ಇಲ್ಲದೆ, ದೈವಭೀರುತ್ವದ ಅಮಲಿನಲ್ಲಿ ಎಲ್ಲ ಸಮುದಾಯಗಳಲ್ಲೂ ಮನೆ ಮಾಡಿಕೊಂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಸನಾತನ ಸಂಸ್ಕೃತಿಯಲ್ಲಿನ ಪೊಳ್ಳು ದೈವಿಕತೆಯನ್ನು ಬಸವಣ್ಣನವರು ಅಂದೇ ಜಗಜ್ಜಾಹೀರುಗೊಳಿಸಿದ್ದಾರೆ.

'ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು/ ಕಿಚ್ಚೆದ್ದು ಸುಡುವಾಗ/ ಬಚ್ಚಲ ನೀರು ಬೀದಿಯ ಧೂಳ ಹೊಯ್ದು/ ಬೊಬ್ಬಿಟ್ಟೆಲ್ಲರ ಕರೆವರಯ್ಯಾ/ ಕೂಡಲಸಂಗಮದೇವಾ/ ವಂದನೆಯ ಮರೆದು ನಿಂದಿಸುತ್ತಿದ್ದರು'.



ಹೋಮ ಹವನಗಳ ಅಗ್ನಿಯಲ್ಲಿ ತುಪ್ಪ, ದವಸ ಧಾನ್ಯಾದಿಗಳನ್ನು ಸುಟ್ಟು, ದೇವರಿಗೆ ಸಂದಿತು ಎನ್ನುವ ಭ್ರಮೆಜೀವಿಗಳನ್ನು ಬಸವಣ್ಣ ಉಗ್ರವಾಗಿ ಖಂಡಿಸಿದ್ದಾರೆ. ಕಿಚ್ಚು ಅರ್ಥಾತ್ ಅಗ್ನಿಯನ್ನು ದೇವರು ಎನ್ನುವಿರಾದರೆ ಅದೇ ಬೆಂಕಿ ನಿಮ್ಮ ಮನೆಗೆ ತಗುಲಿದಾಗ, ಹೊಯ್ಕೊ ಬಡ್ಕೊ ಮಾಡಿ ಬೆಂಕಿ ನಂದಿಸಲು ಬಚ್ಚಲ ನೀರು, ಬೀದಿಯ ಮಣ್ಣು ಎರಚಿ ಆರಿಸಲು ಬಡಿದಾಡುವುದೇಕೆ? ಆಗಲೂ ಅಗ್ನಿ ದೇವಾಯ ಸ್ವಾಹಾ ಅನ್ನಬಾರದೆ ಎಂದು ವಿಡಂಬಿಸಿದ್ದು ಇದೆಯಲ್ಲ ಇದು ಈ ಕ್ಷಣಕ್ಕೂ ನುಂಗಲಾರದ ತುತ್ತು.

ಇಂಥ ಮಾತುಗಳನ್ನು ಹೇಳಿದಾಗ, ಯಾವುದೇ ಜಾತಿಯ ಭಾವನೆಗಳಿಗೆ ಧಕ್ಕೆಯಾಯಿತು ಎಂದು ಬೊಬ್ಬಿಡಬೇಕಿಲ್ಲ. ಅದು ಅವರವರ ನಂಬಿಕೆ ಎಂದೂ ತೇಲಿಸಬೇಕಿಲ್ಲ. ಮೌಢ್ಯ, ಕಂದಾಚಾರಗಳು ಯಾವ ಕಾಲಕ್ಕಾದರೂ ವಿಡಂಬನೆ, ಟೀಕೆಗಳಿಗೆ ಒಳಗಾಗಲೇಬೇಕಾಗುತ್ತವೆ. ಖಂಡಿತ ಇದು ಯಾವುದೇ ಜಾತಿ, ವರ್ಗ, ವರ್ಣದ ಅವಹೇಳನವಲ್ಲ. ಬ್ರಾಹ್ಮಣ್ಯದ ಹುಸಿ ನಂಬಿಕೆಗಳು, ಅರ್ಥಹೀನ ಆಚರಣೆಗಳ ಕುರಿತು ಮೂಡಿಸುವ ಜಾಗೃತಿ ಎಂಬುದನ್ನು ಮನವರಿಕೆ ಮಾಡಿಕೊಡಬೇಕಿದೆ.

ಭಟ್ಟರು ಒಂದೆಡೆ, ಇಂದು ವೈದಿಕತೆಯನ್ನು ಕಲಿಯಲು ಬಹಳಷ್ಟು ಕಾಲೇಜುಗಳಿವೆ, ಯಾವುದೇ ಜಾತಿಯವರಾದರೂ ಓದಿ ಉತ್ತೀರ್ಣರಾಗಬಹುದು ಎಂದರೆ, ಇನ್ನೊಂದೆಡೆ, ಹೀಗೆ ತರಬೇತುಗೊಳಿಸುವುದರಿಂದ ಅರ್ಚಕ ವಿದ್ಯೆ ಕೈಗೂಡದು ಎನ್ನುತ್ತಾರೆ. ಈ ದ್ವಂದ್ವ ಯಾಕೆ? ಶಾಲಾ, ಕಾಲೇಜುಗಳಲ್ಲಿ ಓದಿಸುವುದು ಅಂದರೆ ತರಬೇತಿ ತಾನೇ? ಹುಟ್ಟಿನಿಂದ ಬ್ರಾಹ್ಮಣರಲ್ಲದವರಿಗೆ ಇವರು ಹೇಳುವ ಬ್ರಹ್ಮವಿದ್ಯೆ, ಸಂಸ್ಕಾರ ಕೈಗೆ ಎಟುಕಲಾರವು ಎಂಬುದನ್ನು ಖುಲ್ಲಂಖುಲ್ಲಾ ಹೇಳಿಲ್ಲ ವಾದರೂ ಇಡೀ ಲೇಖನದ ಧ್ವನಿ ಅದೇ ಅಲ್ಲವೇ? ಒಟ್ಟಾರೆ, ಅರ್ಚಕತ್ವ ಎನ್ನುವುದನ್ನು ವರ್ಣೋತ್ತಮರ ಸ್ವತ್ತನ್ನಾಗಿ ಮಾಡಿಕೊಳ್ಳುವ ಹುನ್ನಾರವಲ್ಲದೆ ಬೇರೇನೂ ಇಲ್ಲಿಲ್ಲ.

ವಾಚಕರ ವಾಣಿ

ರಾಷ್ಟ್ರಪತಿ ರೈಲು ಪ್ರಯಾಣದ ಹಿಂದೆ...

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಶುಕ್ರವಾರ ರೈಲಿನಲ್ಲಿ ಪ್ರಯಾಣಿಸಿದ್ದರಲ್ಲಿ (ಪ್ರ.ವಾ., ಜೂನ್ 27) ವಿಶೇಷವೇನೂ ಇಲ್ಲ. ರಾಷ್ಟ್ರಪತಿ ರೈಲಿನಲ್ಲಿ ಪಯಣಿಸುವ ಸಲುವಾಗಿ ವಿಲಾಸಿ ಬೋಗಿ, ಅದನ್ನು ಹತ್ತಲು ವಿಶೇಷ ಮೆಟ್ಟಿಲು ಮತ್ತು ಕಂಬಿಗಳು, ಅದಕ್ಕೆಂದೇ ಕೆಲವೇ ನಿಲುಗಡೆಗಳು... ಅಬ್ಬಾ ಒಂದೇ ಎರಡೇ. ಆದರೆ ಇವರು ರೈಲು ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿ ಭದ್ರತೆಗೆಂದು ವಾಹನ ಸಂಚಾರವನ್ನು ತಡೆಹಿಡಿದಾಗ, ಆಸ್ಪತ್ರೆಗೆ ತೆರಳುತ್ತಿದ್ದ ಮಹಿಳೆಯೊಬ್ಬರು ಸಂಚಾರ ದಟ್ಟಣೆಯಲ್ಲಿ ಸಿಲುಕಿ ಸಾವನ್ನಪ್ಪಿರುವುದು ದುರದೃಷ್ಟಕರ. ರಾಷ್ಟ್ರಪತಿ ಇವೆಲ್ಲವನ್ನೂ ತೊರೆದು ಸಾಮಾನ್ಯ ಪ್ರಜೆಯಂತೆ ರೈಲಿನಲ್ಲಿ ಪ್ರಯಾಣಿಸಿದ್ದರೆ ಅದೊಂದು ವಿಶೇಷ ಎನ್ನಬಹುದಿತ್ತು. ಅವರ ಈ ಪ್ರಯಾಣಕ್ಕೆ ಅದೆಷ್ಟು ರೈಲ್ವೆ, ಪೊಲೀಸ್, ಸುರಕ್ಷತೆ ಮತ್ತಿತರ ಸಿಬ್ಬಂದಿ ನಿದ್ದೆಗೆಟ್ಟು ಕಷ್ಟಪಟ್ಟಿದ್ದರೋ?

ವಿಜಯ್ ಹೆಮ್ಮಿಗೆ, ಮೈಸೂರು

ಇವೆಲ್ಲ ನಿರಾಳತೆಯ ಸಂಕೇತಗಳೇ?

'ತುರ್ತು ಪರಿಸ್ಥಿತಿಯ ಹಿಂದೆ ಮುಂದೆ' ವಿಷಯ ಕುರಿತು 'ಪ್ರಜಾವಾಣಿ' ಹಮ್ಮಿಕೊಂಡಿದ್ದ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ಚಿಂತಕ ಬರಗೂರು ರಾಮಚಂದ್ರಪ್ಪ ಅವರು 'ತುರ್ತು ಪರಿಸ್ಥಿತಿಯ ವೇಳೆ ಜನ ನಿರಾಳರಾಗಿದ್ದರು. ಅವರಿಗೆ ಈ ಕರಾಳತೆಯ ಬಿಸಿ ತಟ್ಟಲಿಲ್ಲ' ಎಂದಿದ್ದಾರೆ (ಪ್ರ.ವಾ., ಜೂನ್ 27). ಅವರ ಈ ಹೇಳಿಕೆ ವಿತಂಡವಾದದ ಮೇಲೆ ರೂಪುಗೊಂಡಿದೆ ಎನ್ನದೆ ಅನ್ಯಮಾರ್ಗವಿಲ್ಲ. ಒಂದು ವೇಳೆ ಜನರಿಗೆ ಅದರ ಬಿಸಿ ತಟ್ಟದಿದ್ದಲ್ಲಿ 1977ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯವಾಗಿ ಸೋಲಲು ಕಾರಣವೇನು? ಸ್ವತಃ ಪ್ರಧಾನಿ ಇಂದಿರಾ ಗಾಂಧಿ, ಅವರ ಪುತ್ರ ಸಂಜಯ್ ಗಾಂಧಿ ಹಾಗೂ ಅವರ ಸಂಪುಟದ ಬಹುತೇಕ ಸಚಿವರು ಘೋರ ಪರಾಭವ ಅನುಭವಿಸಿದ್ದಕ್ಕೆ ಮತ್ತ್ಯಾವ ಕಾರಣವಿದೆ? ತುರ್ತು ಪರಿಸ್ಥಿತಿಯ ಅತಿರೇಕಗಳ ವಿಚಾರಣೆಗೆ ನೇಮಕಗೊಂಡ ನ್ಯಾಯಮೂರ್ತಿ ಜೆ.ಸಿ.ಷಾ ನೀಡಿದ ವರದಿಯಲ್ಲಿ ಈ ಬಗ್ಗೆ ಏನು ಹೇಳಲಾಗಿದೆ?

ಹಾಗೆಯೇ 1980ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 352 ಸಂಸದರನ್ನು ಪಡೆದುಕೊಂಡುದು ಆ ಪಕ್ಷದ ಮೇಲಿನ ಅಭಿಮಾನದಿಂದಲ್ಲ. ಬದಲಾಗಿ ಜನತಾ ಪಕ್ಷ ನೇತೃತ್ವದ ಸರ್ಕಾರದ ನಿಷ್ಕ್ರಿಯ ಆಡಳಿತ, ಆಂತರಿಕ ಕಚ್ಚಾಟ ಮತ್ತು ನಾಯಕತ್ವಕ್ಕಾಗಿ ನಡೆಯುತ್ತಿದ್ದ ಯಾದವೀಕಲಹದಿಂದ. ವಿಭಿನ್ನ ಸಿದ್ಧಾಂತಗಳನ್ನು ಹೊಂದಿದ್ದ ನಾಲ್ಕು ಪಕ್ಷಗಳು ಸೇರಿ ರಚಿಸಿಕೊಂಡಿದ್ದ ಜನತಾ ಪಕ್ಷ ನೇತೃತ್ವದ ಸರ್ಕಾರ ಆಡಳಿತ ನಡೆಸಲಾರದೆ ಹೋದುದು ಭಾರತದ ಪ್ರಜಾಪ್ರಭುತ್ವದ ದುರಂತಗಳಲ್ಲಿ ಒಂದಾಗಿ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ತುರ್ತು ಪರಿಸ್ಥಿತಿಯ ಸಮಯದಲ್ಲಿ ಕರ್ನಾಟಕದಲ್ಲಿ ಮಾತ್ರ ಅತಿರೇಕಗಳು ಹೆಚ್ಚು ನಡೆಯದಿರಲು ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರ ನೇತೃತ್ವದ ಸರ್ಕಾರದ ಮಾನವೀಯ ಸ್ಪರ್ಶದ ಆಡಳಿತವೇ ಕಾರಣ. ಆಪತ್ಕಾಲೀನ ಪರಿಸ್ಥಿತಿಯಲ್ಲಿ ನಡೆದ ಸ್ವೇಚ್ಛಾಚಾರ, ಮೂಲಭೂತ ಹಕ್ಕುಗಳ ದಮನ, ನ್ಯಾಯಾಂಗದ ಮೇಲಿನ ಹಲ್ಲೆ, ದುರುದ್ದೇಶದ ಸಂವಿಧಾನ ತಿದ್ದುಪಡಿ, ಕೇರಳದ ವಿದ್ಯಾರ್ಥಿ ರಾಜನ್ ಕೊಲೆ ಪ್ರಕರಣ, ತುರ್ಕ್‌ಮನ್ ಗೇಟ್ ವಿವಾದ ಇತ್ಯಾದಿಗಳೆಲ್ಲಾ ಜನರ ನಿರಾಳತೆಯ ಸಂಕೇತಗಳಾಗಿ ಬರಗೂರು ಅವರಿಗೆ ಕಂಡುಬರುವುದಾದರೆ ಅದಕ್ಕೆ ವಿಷಾದಿಸಬಹುದೇ ಹೊರತು ಬೇರೇನೂ ಮಾಡಲಾಗುವುದಿಲ್ಲ.

ಮೋದೂರು ಮಹೇಶಾರಾಧ್ಯ, ಹುಣಸೂರು

ಧೂಮಲೀಲೆ!

'ಕೊರೊನಾ ತೊಲಗಿಸಲು
ಮೌಢ್ಯದ ಮೊರೆ' (ಪ್ರ.ವಾ., ಮೇ 26)
(ಒಮ್ಮೊಮ್ಮೆ ಮುಚ್ಚುಮರೆ!)
ಓಣಿ ಓಣಿಗಳಲ್ಲೂ 'ಧೂಮ
ಲೀಲೆ'ಯಂತೆ! ಗಾದೆಯೊಂದಿದೆ:
'ಹೋಗು ಎನ್ನಲಾರದೆ
ಹೊಗೆ ಹಾಕಿದರು!'
ಹೆದರುತ್ತದೆಯೇ ಹೊಗೆಗೆ ಕೊರೊನಾ;
ಬೆದರಿಸುತ್ತದೆಯೇ ಅದನ್ನು ಬೆಂಕಿ?
(ತಿಳಿಯದು ಸತ್ತವರ, ಅತ್ತವರ ಅಂಕಿ!)

ಸಿ.ಪಿ.ಕೆ., ಮೈಸೂರು

ತುರ್ತು ಪರಿಸ್ಥಿತಿ: ಟೀಕಿಸುವ ನೈತಿಕಹಕ್ಕು ಇದೆಯೇ?

ಬಿಜೆಪಿ ನಾಯಕರು ಪ್ರತಿವರ್ಷ ಜೂನ್ 26ರಂದು, ತುರ್ತುಪರಿಸ್ಥಿತಿಯನ್ನು ಖಂಡಿಸಿ, ಕಾಂಗ್ರೆಸ್ ಪಕ್ಷಕ್ಕೆ ಮತ್ತು ಇಂದಿರಾ ಗಾಂಧಿಯವರ ವರ್ಚಸ್ಸಿಗೆ ಮಸಿ ಬಳಿಯುವುದನ್ನು ಕರಗತ ಮಾಡಿಕೊಂಡಿದ್ದಾರೆ. ಇಂದಿರಾ ಅವರ 17 ವರ್ಷಗಳ ಧೀಮಂತ ಆಳ್ವಿಕೆಯಲ್ಲಿ 19 ತಿಂಗಳ 'ತುರ್ತು ಪರಿಸ್ಥಿತಿ' ಒಂದು ಕರಾಳ ಅಧ್ಯಾಯ ಮಾತ್ರ. ಅಮೆರಿಕದ ಅಂದಿನ ಪ್ರಭಾವಿ ವಿದೇಶಾಂಗ ಸಚಿವ ಹೆನ್ರಿ ಕಿಸ್ಸಿಂಗರ್ ತಮ್ಮ ಆತ್ಮಚರಿತ್ರೆಯಲ್ಲಿ 'ಭಾರತದ ಪ್ರಧಾನಿ ಇಂದಿರಾ ಗಾಂಧಿ ಅವರು ವಿಶ್ವದ ಅತ್ಯಂತ ಬಲಶಾಲಿ ಹಾಗೂ ಚಾಣಾಕ್ಷ ನಾಯಕಿ' ಎಂದು ಹೊಗಳಿದ್ದರು. ಇಂದಿರಾ ಅವರು ಭಾರತವನ್ನು ಒಂದು ಅಣ್ವಸ್ತ್ರ ರಾಷ್ಟ್ರವನ್ನಾಗಿ ಮಾಡಿದ್ದಲ್ಲದೆ, ಪಾಕಿಸ್ತಾನದ ಬೆನ್ನೆಲುಬನ್ನು ಮುರಿದು, ಇಬ್ಭಾಗ ಮಾಡಿದ್ದರು. ಮತ್ತೊಂದು ದೊಡ್ಡ ಸಾಧನೆ ಎಂದರೆ, ದೇಶವನ್ನು ಆಹಾರ ಮತ್ತು ರಕ್ಷಣೆಯಲ್ಲಿ ಸ್ವಾವಲಂಬಿಯನ್ನಾಗಿಸಿದ್ದು.

ಅಂದಿನ 'ತುರ್ತು ಪರಿಸ್ಥಿತಿ'ಗಿಂತ ಇಂದಿನ 'ಅಘೋಷಿತ ತುರ್ತು ಪರಿಸ್ಥಿತಿ' ಅತ್ಯಂತ ಅಮಾನುಷ. ತಮಗೆ ಆಗದವರನ್ನು ಜೈಲಿಗೆ ದೂಡುವ ಪರಿಪಾಟ ಆಗಲೂ ಇತ್ತು. ಈಗಲೂ ಇದೆ. ಈಗ, ಅನಾರೋಗ್ಯ ಪೀಡಿತರಾಗಿರುವ ಹಿರಿಯ ಪ್ರೊ. ಜಿ.ಎನ್.ಸಾಯಿಬಾಬ, ವರವರರಾವ್, 83 ವರ್ಷದ ಸ್ಟ್ಯಾನ್ ಸ್ವಾಮಿ ಅವರನ್ನು ನಡೆಸಿಕೊಂಡ ರೀತಿ ನಮ್ಮ ಕಣ್ಣೆದುರಿಗೇ ಇದೆ. ಆಗ ಪತ್ರಿಕೆಗಳಿಗೆ 'ಸೆನ್ಸಾರ್' ಕತ್ತರಿ ಪ್ರಯೋಗ ಇತ್ತು. ಈಗ ಇನ್ನೊಂದು ರೀತಿಯಲ್ಲಿ ದ್ವೇಷದ ರಾಜಕಾರಣ ನಡೆಯುತ್ತಿದೆ. ಪತ್ರಕರ್ತರ ಮೇಲೆ 'ದೇಶದ್ರೋಹ'ದ ದೂರುಗಳನ್ನು ದಾಖಲಿಸಿ ಜೈಲಿನಲ್ಲಿ ಇಡಲಾಗುತ್ತಿದೆ. ಆಡಳಿತಾರೂಢರನ್ನು ಟೀಕಿಸುವುದು, ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸುವುದನ್ನು 'ದೇಶದ್ರೋಹ'ವೆಂದು ಪರಿಗಣಿಸಲಾಗುತ್ತಿದೆ. ದೇಶವನ್ನು ಅಧೋಗತಿಗೆ ಕೊಂಡೊಯ್ಯುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರದ ನಾಯಕರಿಗೆ, ಭಾರತವನ್ನು ಬಲಿಷ್ಠ ರಾಷ್ಟ್ರ ಮಾಡಿದ ಇಂದಿರಾ ಅವರನ್ನು ಟೀಕಿಸುವ ನೈತಿಕಹಕ್ಕು ಇದೆಯೇ?

ಕೆ.ಎನ್.ಭಗವಾನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಪ್ರಧಾನಿ ನರೇಂದ್ರ ಮೋದಿ ಅವರು ಕಾಶ್ಮೀರದ ವಿವಿಧ ಪಕ್ಷಗಳ ಮುಖಂಡರ ಜತೆಗೆ ಇದೇ 24ರಂದು ನಡೆಸಿದ ಸಭೆಯ ಸಂದರ್ಭದ ಚಿತ್ರ

ಜಮ್ಮು–ಕಾಶ್ಮೀರ ಮರಳಿ ಜನತಂತ್ರದತ್ತ ಹೆಜ್ಜೆ

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ ನಂತರದ ಬೆಳವಣಿಗೆಗಳು ಅನೇಕರ ಟೀಕೆಗೆ ಒಳಗಾಗಿದ್ದವು. ರಾಜಕೀಯ ಮುಖಂಡರ ಗೃಹಬಂಧನ, ಇಂಟರ್‌ನೆಟ್ ಸ್ಥಗಿತ, ಸಂಚಾರಕ್ಕೆ ನಿರ್ಬಂಧ ಮುಂತಾದ ಕ್ರಮಗಳನ್ನು ಜಾಗತಿಕ ಮಟ್ಟದಲ್ಲಿ ಮಾನವ ಹಕ್ಕುಗಳ ಸಂಘಟನೆಗಳು ಹಾಗೂ ಕೆಲವು ರಾಷ್ಟ್ರಗಳು ಟೀಕಿಸಿದ್ದವು. ಆದರೆ, ತನ್ನ ತೀರ್ಮಾನವನ್ನು ಭಾರತವು ಬಲವಾಗಿ ಸಮರ್ಥಿಸಿಕೊಳ್ಳುತ್ತಲೇ ಬಂದಿದೆ.

ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿ ಈಗ ಎರಡು ವರ್ಷವಾಗುತ್ತಾ ಬಂದಿದೆ. 'ಸರಿಯಾದ ಸಮಯದಲ್ಲಿ ಜಮ್ಮು ಕಾಶ್ಮೀರದಲ್ಲಿ ಚುನಾವಣೆಗಳನ್ನು ನಡೆಸಿ, ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಲಾಗುವುದು. ಅದಕ್ಕೆ ಪೂರ್ಣ ಪ್ರಮಾಣದ ರಾಜ್ಯದ ಸ್ಥಾನಮಾನ ನೀಡಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲೇ ಭರವಸೆ ನೀಡಿದ್ದರು. ಆ ಬಹುದೊಡ್ಡ ಹೊಣೆಯನ್ನು ಸರ್ಕಾರ ಈಗ ನಿರ್ವಹಿಸಬೇಕಾಗಿದೆ. ಆ ದಿಸೆಯಲ್ಲಿ ಈಗಾಗಲೇ ಕೆಲವು ಹೆಜ್ಜೆಗಳನ್ನಿಟ್ಟಿದೆ.

ಆದರೆ, ಜಮ್ಮು ಕಾಶ್ಮೀರದಲ್ಲಿ ರಾಷ್ಟ್ರೀಯ ಪಕ್ಷಗಳ ಸ್ಥಿತಿ ಅಷ್ಟೇನೂ ಗಟ್ಟಿಯಾಗಿಲ್ಲ. ಆದ್ದರಿಂದ ಚುನಾವಣೆಗಳು ಯಶಸ್ವಿಯಾಗಿ ನಡೆಯಬೇಕಾದರೆ ಸ್ಥಳೀಯ ಪಕ್ಷಗಳ ಬೆಂಬಲ ಪಡೆಯುವುದು ಅಗತ್ಯವಾಗಿದೆ. ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ್ದನ್ನೇ ವಿರೋಧಿಸುತ್ತಿರುವ ಸ್ಥಳೀಯ ಪಕ್ಷಗಳು ಚುನಾವಣೆಗೆ ಸಹಕಾರ ನೀಡುತ್ತವೆಯೇ? ಸ್ಥಳೀಯ ಪಕ್ಷಗಳನ್ನು ಹೊರಗಿಟ್ಟು ಚುನಾವಣೆಗಳನ್ನು ನಡೆಸಿದರೂ ಅಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆ ಸಾಧ್ಯವಾಗಬಹುದೇ ಎಂಬುದು ಪ್ರಶ್ನೆಯಾಗಿದೆ.

ಚುನಾವಣೆಗಳ ಬಗ್ಗೆ ರಾಜ್ಯದ ಜನರ ನಾಡಿ ಮಿಡಿತವನ್ನು ತಿಳಿಯಲು ಚುನಾವಣೆಯ ಪ್ರಯೋಗವೊಂದನ್ನು ಸರ್ಕಾರ 2020ರಲ್ಲಿ ನಡೆಸಿದೆ. ರಾಜ್ಯದಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಳಿಗಳನ್ನು ರಚಿಸಿ, ಅವುಗಳಿಗೆ 2020ರ ನವೆಂಬರ್‌ನಲ್ಲಿ ಚುನಾವಣೆಯನ್ನು ನಡೆಸಿದೆ. ಒಂದೆರಡು ಸ್ಥಳೀಯ ಪಕ್ಷಗಳು ಈ ಚುನಾವಣೆಯನ್ನು ಬಹಿಷ್ಕರಿಸಿದ್ದವು. ಇತರ ಕೆಲವು ಪಕ್ಷಗಳು ಗುಪ್ಕಾರ್ ಕೂಟದಡಿ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿದ್ದವು. ಚುನಾವಣೆಯ ಈ ಪ್ರಯೋಗ ಯಶಸ್ವಿಯಾಗಿತ್ತು.

ಈ ಚುನಾವಣೆಯಿಂದ ಪ್ರೇರಣೆ ಪಡೆದು ಈಗ ಕೇಂದ್ರ ಸರ್ಕಾರವು ಅಲ್ಲಿ ವಿಧಾನಸಭಾ ಚುನಾವಣೆ ನಡೆಸುವ ಪ್ರಯತ್ನ ಆರಂಭಿಸಿದೆ. ಆರು ರಾಜಕೀಯ ಪಕ್ಷಗಳ 'ಗುಪ್ಕಾರ್' ಕೂಟವೂ ಸೇರಿದಂತೆ ಒಟ್ಟು 14 ಸ್ಥಳೀಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಮಾತುಕತೆ ನಡೆಸಿದ್ದಾರೆ. ಇನ್ನೊಂದೆಡೆ, ಕ್ಷೇತ್ರ ಮರು ವಿಂಗಡಣೆಯ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. 'ಕ್ಷೇತ್ರ ಮರುವಿಂಗಡಣೆ ಬಳಿಕ ಚುನಾವಣೆ ನಡೆಸಲಾಗುವುದು' ಎಂದೂ ಪ್ರಧಾನಿ ಹೇಳಿದ್ದಾರೆ.

ಸಭೆ ಮುಗಿಸಿ ಕಾಶ್ಮೀರಕ್ಕೆ ಮರಳಿದ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಹಾಗೂ ನ್ಯಾಷನಲ್ ಕಾನ್ಫರೆನ್ಸ್‌ನ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು 'ವಿಶೇಷ ಸ್ಥಾನಮಾನ ಮತ್ತು 35ಎ ಕಲಮು ಮರುಸ್ಥಾಪನೆ ಆಗದೆ ಚುನಾವಣೆಯಲ್ಲಿ ಪಾಲ್ಗೊಳ್ಳುವುದಿಲ್ಲ' ಎಂದಿದ್ದಾರೆ. ಆದರೆ, ಆ ಷರತ್ತಿಗೆ ಅವರದ್ದೇ ಪಕ್ಷದ ನಾಯಕರ ವಿರೋಧವೂ ವ್ಯಕ್ತವಾಗಿದೆ. ಒಟ್ಟಿನಲ್ಲಿ ಕಣಿವೆ ರಾಜ್ಯದಲ್ಲಿ ಹಲವು ದಶಕಗಳ ಅತಂತ್ರ ಸ್ಥಿತಿಯನ್ನು ಕೊನೆಗೊಳಿಸಿ, ಪ್ರಜಾಪ್ರಭುತ್ವವನ್ನು ಮರು ಸ್ಥಾಪಿಸುವ ಪ್ರಯತ್ನವಂತೂ ಆರಂಭವಾಗಿದೆ.

ಕ್ಷೇತ್ರ ಮರುವಿಂಗಡಣೆಯ ಸವಾಲು

ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣಾ ಪ್ರಕ್ರಿಯೆ ಆರಂಭಕ್ಕೆ ಮುನ್ನ ಅಲ್ಲಿನ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ನಡೆಯಬೇಕಿದೆ ಎಂಬುದು ಕೇಂದ್ರ ಸರ್ಕಾರದ ನಿಲುವು. ಕಾಶ್ಮೀರವು ವಿಶೇಷ ಸ್ಥಾನಮಾನ ಹೊಂದಿದ್ದಾಗ, ಭಾರತದ ಸಂವಿಧಾನ, ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ಹಾಗೂ ಜಮ್ಮು–ಕಾಶ್ಮೀರ ಜನ ಪ್ರಾತಿನಿಧ್ಯ ಕಾಯ್ದೆ 1957ರ ಪ್ರಕಾರ ಕ್ಷೇತ್ರ ಮರುವಿಂಗಡಣೆ ನಡೆಯಬೇಕಿತ್ತು. ಆದರೆ, ಈಗ ಭಾರತದ ಸಂವಿಧಾನದ ಪ್ರಕಾರ ಕ್ಷೇತ್ರ ಮರು ವಿಂಗಡನೆ ನಡೆಯಬೇಕು.

ಜಮ್ಮು–ಕಾಶ್ಮೀರದ ವಿಧಾನಸಭೆಯು 2001ರ ಜನಗಣತಿಯ ಬಳಿಕ ಅಲ್ಲಿನ ಕ್ಷೇತ್ರ ಮರುವಿಂಗಡಣೆಯನ್ನು 2026ರವರೆಗೆ ಮುಂದೂಡಿತ್ತು. ಆದರೆ, ಈಗ ಜಮ್ಮು–ಕಾಶ್ಮೀರವು ರಾಜ್ಯ ಮತ್ತು ಸಂವಿಧಾನದ 370ನೇ ವಿಧಿ ಅಡಿಯಲ್ಲಿನ ವಿಶೇಷ ಸ್ಥಾನಮಾನವನ್ನು ಕಳೆದುಕೊಂಡಿದೆ. ಜಮ್ಮು–ಕಾಶ್ಮೀರ ಪುನಾರಚನೆ ಕಾಯ್ದೆ 2019ರ ಪ್ರಕಾರ, ವಿಧಾನಸಭೆಯು 90 ಸದಸ್ಯ ಬಲ ಹೊಂದಿರಬೇಕು. ಈಗ ಇರುವುದಕ್ಕಿಂತ ಏಳು ಕ್ಷೇತ್ರ ಹೆಚ್ಚಳ ಆಗಬೇಕಿದೆ. ಹಾಗಾಗಿ, ಈ ಪ್ರದೇಶದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಚಾಲನೆ ಕೊಡಲು ಕ್ಷೇತ್ರ ಪುನರ್ ವಿಂಗಡಣೆ ಅನಿವಾರ್ಯವೇ ಆಗಿದೆ.


2019ಕ್ಕೆ ಮೊದಲು ವಿಧಾನಸಭೆಯ ಸದಸ್ಯ ಬಲ 87 ಇತ್ತು. ಅದರಲ್ಲಿ ಲಡಾಖ್‌ನ ನಾಲ್ಕು ಕ್ಷೇತ್ರಗಳು ಸೇರಿದ್ದವು. ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಪ್ರದೇಶದಲ್ಲಿ ಬರುವ 24 ಕ್ಷೇತ್ರಗಳು ಖಾಲಿ ಇದ್ದವು.

ಕ್ಷೇತ್ರ ಮರು ವಿಂಗಡಣೆಗೆ ಎರಡು ಮುಖ್ಯ ಆಕ್ಷೇಪಗಳಿವೆ. ಜಮ್ಮು–ಕಾಶ್ಮೀರದ ವಿಶೇಷ ಸ್ಥಾನಮಾನ ಮತ್ತು ರಾಜ್ಯ ಸ್ಥಾನ ರದ್ದತಿಗೆ ಕೇಂದ್ರ ಸರ್ಕಾರವು 2019ರಲ್ಲಿ ಕೈಗೊಂಡ ನಿರ್ಧಾರವನ್ನು ಪ್ರಶ್ನಿಸಿ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಇತರ ಪಕ್ಷಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ. ಈ ಅರ್ಜಿ ಇತ್ಯರ್ಥ ಆಗುವತನಕ ಕ್ಷೇತ್ರ ಮರುವಿಂಗಡಣೆ ಬೇಡ ಎಂದು ಈ ಪಕ್ಷಗಳು ಹೇಳುತ್ತಿವೆ.

ಕ್ಷೇತ್ರ ಮರುವಿಂಗಡಣೆಯು ಜನಸಂಖ್ಯೆ ಆಧಾರದಲ್ಲಿ ನಡೆಯುತ್ತದೆ. 2011ರ ಜನಗಣತಿ ಪ್ರಕಾರ, ಕಾಶ್ಮೀರದ ಜನಸಂಖ್ಯೆ 68 ಲಕ್ಷವಾದರೆ, ಜಮ್ಮು ಪ್ರದೇಶದ ಜನಸಂಖ್ಯೆ 53 ಲಕ್ಷ. ಜನಸಂಖ್ಯೆಯ ಆಧಾರದಲ್ಲಿ ಕಾಶ್ಮೀರ ಕಣಿವೆ ಪ್ರದೇಶದ ಕ್ಷೇತ್ರಗಳ ಸಂಖ್ಯೆ ಹೆಚ್ಚುತ್ತದೆ. ಜಮ್ಮುವಿನ ಹಲವು ಸಂಘಟನೆಗಳು ಕ್ಷೇತ್ರ ಮರು ವಿಂಗಡಣೆಯನ್ನು ಬಲವಾಗಿ ವಿರೋಧಿಸುತ್ತಿವೆ.


ಈಗ, ಕಾಶ್ಮೀರದಲ್ಲಿ 46 ಮತ್ತು ಜಮ್ಮುವಿನಲ್ಲಿ 37 ವಿಧಾನಸಭಾ ಕ್ಷೇತ್ರಗಳಿವೆ.

ಚುನಾವಣೆ: ರಾಜಕೀಯ ಪಕ್ಷಗಳ ನಿಲುವೇನು?



ಜಮ್ಮು ಕಾಶ್ಮೀರದ ವಿಶೇಷಾಧಿಕಾರ ರದ್ದುಗೊಳಿಸಿದ ಬಳಿಕ ಮೊದಲ ಬಾರಿಗೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಾಶ್ಮೀರದ ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಸಭೆ ನಡೆಯಿತು. ರದ್ದುಗೊಂಡಿರುವ ವಿಶೇಷ ಸ್ಥಾನಮಾನವನ್ನು ಮರಳಿ ಸ್ಥಾಪಿಸಬೇಕು ಎಂಬ ಬೇಡಿಕೆಯನ್ನು ಬಹುತೇಕ ರಾಜಕೀಯ ಪಕ್ಷಗಳು ಮಂಡಿಸಿವೆ.

ಆದರೆ, ಕಾಶ್ಮೀರದಲ್ಲಿ ಚುನಾವಣಾ ಪ್ರಕ್ರಿಯೆ ಶುರು ಮಾಡುವ ಬಗ್ಗೆ ಪ್ರಧಾನಿ ಪ್ರಸ್ತಾಪಿಸಿದರು. ಬಿಜೆಪಿ ಹೊರತುಪಡಿಸಿ ಎಲ್ಲ ರಾಜಕೀಯ ಪಕ್ಷಗಳು ತಮ್ಮ ನಿಲುವು ಸ್ಪಷ್ಟಪಡಿಸಿವೆ. 'ಚುನಾವಣೆ ಸ್ವಾಗತಾರ್ಹ. ಆದರೆ ವಿಶೇಷ ಸ್ಥಾನಮಾನ ಮೊದಲು, ಆಮೇಲೆ ಚುನಾವಣೆ' ಎಂಬ ನಿರ್ಧಾರಕ್ಕೆ ಬಂದಿವೆ.



ಗುಲಾಂ ನಬಿ

'ಜಮ್ಮು ಕಾಶ್ಮೀರಕ್ಕೆ ಮೊದಲು ರಾಜ್ಯದ ಸ್ಥಾನಮಾನ ನೀಡಿ, ಆ ನಂತರ ಚುನಾವಣೆ ಪ್ರಕ್ರಿಯೆಗಳನ್ನು ಆರಂಭಿಸಿ' ಎಂದು ಕಾಂಗ್ರೆಸ್ ಮುಖಂಡ ಗುಲಾಂ ನಬಿ ಅಜಾದ್ ಅಭಿಪ್ರಾಯಪಟ್ಟಿದ್ದಾರೆ.

'ನೀವು ಚುನಾವಣೆ ನಡೆಸಬೇಕು ಎಂದು ಬಯಸಿದರೆ, ಅದಕ್ಕೂ ಮುನ್ನ ಕಿತ್ತುಕೊಂಡಿರುವ ರಾಜ್ಯ ಸ್ಥಾನಮಾನವನ್ನು ಮರಳಿ ನೀಡಿ' ಎಂದು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕ ಒಮರ್ ಅಬ್ದುಲ್ಲಾ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

'ವಿಶೇಷ ಸ್ಥಾನಮಾನ ನೀಡದ ಹೊರತು ಚುನಾವಣೆ ನಡೆಸುವುದರಲ್ಲಿ ಅರ್ಥವಿಲ್ಲ. ರಾಜ್ಯದ ಸ್ಥಾನಮಾನ ಮರಳಿ ಕೊಟ್ಟಾಗ ಮಾತ್ರ ಚುನಾವಣಾ ಆಯೋಗವು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಲು ಸಾಧ್ಯ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ವಿಶೇಷಾಧಿಕಾರ ರದ್ದು ಮಾಡುವ ತನ್ನ 70 ವರ್ಷಗಳ ಕಾರ್ಯಸೂಚಿಯನ್ನು ಬಿಜೆಪಿ ಸರ್ಕಾರ ಈಡೇರಿಸಿದೆ. 70 ವಾರಗಳಾಗಲೀ, 70 ತಿಂಗಳಾಗಲಿ. ನಮ್ಮ ಹೋರಾಟವನ್ನು ನಾವು ಮುಂದುವರಿಸುತ್ತೇವೆ' ಎಂದು ಒಮರ್ ಹೇಳಿದ್ದಾರೆ.



ಒಮರ್

ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರ ನಿಲುವೂ ಇದೇ ಆಗಿದೆ. ಸಂವಿಧಾನದ 370 ಹಾಗೂ 35ಎ ವಿಧಿಗಳನ್ನು ಮರು ಜಾರಿಗೊಳಿಸದಿದ್ದರೆ ತಾವು ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ ಎಂದು ಅವರು ಕೇಂದ್ರಕ್ಕೆ ಎಚ್ಚರಿಕೆ ನೀಡಿದ್ದಾರೆ.



ಮೆಹಬೂಬಾ

ಬಿಜೆಪಿ ನಿಲುವು ಎಲ್ಲ ಪಕ್ಷಗಳಿಗಿಂತ ಸಹಜವಾಗಿ ಭಿನ್ನವಾಗಿದೆ. '370ನೇ ವಿಧಿ ಮರುಸ್ಥಾಪನೆ ಬಗ್ಗೆ ಕೆಲವು ನಾಯಕರು ಇನ್ನೂ ಕನಸು ಕಾಣುತ್ತಿದ್ದಾರೆ. ಆದರೆ ಅದು ಅಸಾಧ್ಯ' ಎಂದು ಜಮ್ಮು ಮತ್ತು ಕಾಶ್ಮೀರ ಬಿಜೆಪಿ ಅಧ್ಯಕ್ಷ ರವೀಂದರ್ ರೈನಾ ಹೇಳಿದ್ದಾರೆ. ವಿಧಾನಸಭಾ ಚುನಾವಣೆ ಘೋಷಣೆಯಾದಾಗ, ಅದರಲ್ಲಿ ಭಾಗವಹಿಸುವಂತೆ ಅವರು ಇತರ ರಾಜಕೀಯ ಪಕ್ಷಗಳಿಗೆ ಸಲಹೆ ನೀಡಿದ್ದಾರೆ.



ರವಿಂದರ್ ರೈನಾ

ಘನತ್ಯಾಜ್ಯ ವಿಲೇವಾರಿಯಲ್ಲಿ ನಿರ್ಲಕ್ಷ್ಯ

ರಾಜ್ಯಗಳ ಮೇಲೆ ಹಸಿರುಪೀಠ ಆಕ್ರೋಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಧಿಕಾರಿಗಳು ಕಾನೂನಿಗಿಂತ ಮೇಲೆಯೇ: ಪೀಠ ಪ್ರಶ್ನೆ
- ಕಾಯ್ದೆ ಜಾರಿಯಾಗಿ 40 ವರ್ಷವಾದರೂ ಪ್ರಯೋಜನವಿಲ್ಲ: ಪೀಠ ಅತೃಪ್ತಿ

ನವದೆಹಲಿ: ಪರಿಸರ ಸಂರಕ್ಷಣಾ ಕಾನೂನುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲವಾದ ರಾಜ್ಯ ಸರ್ಕಾರಗಳ ವಿರುದ್ಧ ರಾಷ್ಟ್ರೀಯ ಹಸಿರು ನ್ಯಾಯ ಪೀಠ (ಎನ್‌ಜಿಟಿ) ಕಿಡಿಕಾರಿದೆ.

'ರಾಜ್ಯದ ಅಧಿಕಾರಿಗಳು ತಮ್ಮನ್ನು ಕಾನೂನಿಗಿಂತ ಮೇಲ್ಪಟ್ಟವರು ಎಂದು ಪರಿಗಣಿಸಿದಂತೆ ತೋರುತ್ತಿದೆ. ಕಾನೂನುಗಳನ್ನು ಉಲ್ಲಂಘಿಸುವ ಮೂಲಕ ಸಾರ್ವಜನಿಕ ಆರೋಗ್ಯಕ್ಕೆ ಹಾನಿ ಉಂಟು ಮಾಡುವುದು ಮುಂದುವರಿದಿದೆ. ಇದು ಅತ್ಯಂತ ದುರದೃಷ್ಟಕರ ಪರಿಸ್ಥಿತಿಯಾಗಿದ್ದು, ಪರಿಹಾರ ಕ್ರಮಗಳ ಅಗತ್ಯವಿದೆ' ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಉತ್ತರ ಪ್ರದೇಶದಲ್ಲಿ ಕಸ ವಿಲೇವಾರಿಗೆ ಸಂಬಂಧಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯಲ್ ನೇತೃತ್ವದ ಎನ್‌ಜಿಟಿ ಪ್ರಧಾನ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಬಿಜ್ನೋರ್ ಜಿಲ್ಲೆಯ ಚಾಂಗಿಪುರದ ಮುಖ್ಯರಸ್ತೆಯಲ್ಲಿ ಅವೈಜ್ಞಾನಿಕವಾಗಿ ಕಸ ಚೆಲ್ಲಿರುವುದನ್ನು ಪ್ರಶ್ನಿಸಿ ನೂರ್ಪುರ ಪುರಸಭೆ ವಿರುದ್ಧ ದೂರು ದಾಖಲಿಸಲಾಗಿದೆ. ಅರವಿಂದ ಕುಮಾರ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ವಿಚಾರಣೆ ನಡೆಸಿತು.

ವೈಜ್ಞಾನಿಕವಾಗಿ ಘನತ್ಯಾಜ್ಯ ವಿಲೇವಾರಿ ಮಾಡದ ಕಾರಣ, ಗಾಳಿಯ ಗುಣಮಟ್ಟ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಹಾನಿ ಉಂಟಾಗಿದೆ ಎಂದು ಕೋರ್ಟ್ ಹೇಳಿತು. ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿ (ಪಿಸಿಬಿ) ಮತ್ತು ಬಿಜ್ನೋರ್ ಜಿಲ್ಲಾಧಿಕಾರಿಗೆ ಸರಿಯಾಗಿ ತ್ಯಾಜ್ಯ ನಿರ್ವಹಣೆ ಮಾಡುವಂತೆ ಸಲಹೆ ನೀಡಿತು. ನಿರ್ದೇಶನಗಳಿಗೆ ಅನುಗುಣವಾಗಿ ಯಾವುದೇ ತೃಪ್ತಿದಾಯಕ ಕ್ರಮಗಳನ್ನು ಕೈಗೊಳ್ಳದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ನ್ಯಾಯಪೀಠ ಎಚ್ಚರಿಸಿದೆ.

2016ರ ಘನತ್ಯಾಜ್ಯ ನಿರ್ವಹಣಾ ನಿಯಮ 15ರ ಅಡಿಯಲ್ಲಿ, ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಯೋಜನೆಯನ್ನು ಸಿದ್ಧಪಡಿಸಬೇಕಾಗಿದೆ ಎಂದು ಎನ್‌ಜಿಟಿ ಹೇಳಿದೆ. 'ದುರದೃಷ್ಟವೆಂದರೆ, ಪ್ರಸ್ತುತ ನಿಯಮಗಳು ಜಾರಿಯಾಗಿ ಐದು ವರ್ಷ ಕಳೆದಿವೆ, ವಾಯು ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾಯ್ದೆ–1981 ಜಾರಿಯಾಗಿ 40 ವರ್ಷ ಕಳೆದಿವೆ. ಹೀಗಿದ್ದರೂ ಘನತ್ಯಾಜ್ಯ ವೈಜ್ಞಾನಿಕ ವಿಲೇವಾರಿಯಲ್ಲಿ ಅಧಿಕಾರಿಗಳ ವೈಫಲ್ಯ ಕಂಡುಬಂದಿದೆ. ತ್ಯಾಜ್ಯ, ಗಾಳಿ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಹಾನಿಯಾಗದಂತೆ ತಡೆಯಲು ಆಗಿಲ್ಲ' ಎಂದು ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಶಾಸನಬದ್ಧ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲವಾದರೆ, ಪರಿಸರ (ಸಂರಕ್ಷಣೆ) ಕಾಯ್ದೆ 1986ರ (ಇಪಿ ಕಾಯ್ದೆ) ಅಡಿಯಲ್ಲಿ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದು ಎಂದು ನ್ಯಾಯಪೀಠ ಹೇಳಿದೆ.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ನಟ ಸೋನು ಸೂದ್ ವಿರುದ್ಧ ಕೇಂದ್ರ ಸರ್ಕಾರವು ಪ್ರಕರಣ ದಾಖಲಿಸಿದೆ' ಎಂಬ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇತ್ತೀಚೆಗೆ ಕೋವಿಡ್ ಲಸಿಕೆ ಅಭಿಯಾನ ನಡೆಸಿದ್ದ ಅವರಿಗೆ ಎಲ್ಲಿಂದ ಲಸಿಕೆಗಳು ಸಿಕ್ಕಿವೆ ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಪ್ರಶ್ನಿಸಿದ್ದಾರೆ. ಉತ್ತಮ ಕೆಲಸ ಮಾಡುತ್ತಿರುವ ಸೆಲೆಬ್ರಿಟಿಗಳು ಈ ಕೆಲಸಕ್ಕಾಗಿ ಬೆಲೆ ತೆರಬೇಕಾಗುತ್ತದೆ ಎಂದು ಕೆಲವು ಪೋಸ್ಟ್‌ಗಳಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ.



ನಟ ಸೋನು ಸೂದ್ ಕುರಿತು ಹರಿದಾಡುತ್ತಿರುವ ಪೋಸ್ಟರ್

ಪೋಸ್ಟ್ ಒಂದರಲ್ಲಿ ಇರುವ ಚಿತ್ರವನ್ನು ಗೂಗಲ್ ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಲಾಯಿತು. ಊರುಗಳಿಗೆ ಮರಳುತ್ತಿದ್ದ ವಲಸೆ ಕಾರ್ಮಿಕರಿಗೆ ಸೋನು ಸೂದ್ ಸಹಾಯ ಮಾಡುತ್ತಿದ್ದ ವಿಚಾರಕ್ಕೆ ಸಂಬಂಧಿಸಿದ ಚಿತ್ರ ಇದಾಗಿದೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಸೂದ್ ಅವರು ಲಸಿಕೆ ಬಗ್ಗೆ ಜನಜಾಗೃತಿ ಮೂಡಿಸಲು ಅಭಿಯಾನ ಶುರು ಮಾಡಿದ್ದಾರೆ. ಅವರು ಪಂಜಾಬ್ ಸರ್ಕಾರದ ಲಸಿಕೆ ಅಭಿಯಾನದ ರಾಯಭಾರಿ ಕೂಡ ಆಗಿದ್ದಾರೆ. ಸರ್ಕಾರವು ಅವರ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿಕೊಂಡಿಲ್ಲ. ಆದರೆ ರೆಮ್‌ಡಿಸಿವಿರ್ ಔಷಧ ಪೂರೈಕೆಗೆ ಸಂಬಂಧಿಸಿದ ಪ್ರಕರಣವೊಂದು ಬಾಂಬೆ ಹೈಕೋರ್ಟ್‌ನಲ್ಲಿ ಇನ್ನೂ ವಿಚಾರಣೆ ಹಂತದಲ್ಲಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಚೇತರಾಷ್ಟ್ರಕ್ಕೆ ಆಗಮನ

ವಂಕಪರ್ವತದೆಡೆಗೆ ನಡೆಯುತ್ತ ಹೊರಟಾಗ ತುಂಬ ಸುಸ್ತಾಗುತ್ತಿತ್ತು. ಮಕ್ಕಳಿಗೆ ಹಸಿವು ತಡೆಯುವುದಾಗುತ್ತಿರಲಿಲ್ಲ. ಅವು ಅಳುತ್ತಿದ್ದವು. ಆಗ ಬೇಸಿಗೆಯ ಕಾಲ, ದಾರಿಯ ಎರಡು ಬದಿಗಳಲ್ಲಿಯೂ ಮಾವಿನಮರಗಳಿದ್ದವು. ಅವುಗಳಲ್ಲಿ ಹಣ್ಣುಗಳು ನೇತಾಡುತ್ತಿದ್ದವು. ಆಗೊಂದು ವಿಚಿತ್ರ ನಡೆಯಿತು. ಮಕ್ಕಳು ಅಳುವುದನ್ನು ಕಂಡ ಮಾವಿನಮರಗಳು ತಮ್ಮ ಹಣ್ಣು ತುಂಬಿದ ಕೊಂಬೆಗಳನ್ನು ತಾನಾಗಿಯೇ ಬಾಗಿಸಿ ಮಕ್ಕಳ ಕೈಗೆ ನಿಲುಕುವಂತೆ ಮಾಡುತ್ತಿದ್ದವು. ಮಾದ್ರಿ ಮತ್ತು ವೆಸ್ಸಂತರರು ಪಕ್ವವಾದ ಮತ್ತು ರುಚಿಯಾದ ಹಣ್ಣುಗಳನ್ನು ಕಿತ್ತು ಮಕ್ಕಳಿಗೆ ಕೊಟ್ಟ ಮೇಲೆ ಮತ್ತೆ ತಮ್ಮ ಮೊದಲಿನ ಸ್ಥಾನಗಳಿಗೆ ಕೊಂಬೆಗಳು ಮರಳಿ ಹೋಗುತ್ತಿದ್ದವು. ವೆಸ್ಸಂತರ ಅವೆಲ್ಲ ಮರಗಳಿಗೆ ಬಾಗಿ ಕೃತಜ್ಞತೆಯನ್ನು ತೋರಿದ. ಜೆತುತ್ತರ ನಗರದಿಂದ ಸ್ವರ್ಣಗಿರಿತಾಲ ಎಂಬ ಪರ್ವತದ ದೂರ ಐದು ಯೋಜನಗಳು. ಅಲ್ಲಿಂದ ಮುಂದೆ ಐದು ಯೋಜನ ನಡೆದರೆ ಕೊಂತಿಮಾರ ನದಿ ಬರುತ್ತದೆ. ನದಿ ದಾಟಿದ ಮೇಲೆ ಐದು ಯೋಜನ ದೂರದಲ್ಲಿರುವುದು ಆರಜ್ಜರ ಗಿರಿಪರ್ವತ. ಮತ್ತೆ ಐದು ಯೋಜನ ದೂರದಲ್ಲಿದ್ದದ್ದು ದುರ್ನಿವಿಷ್ಟ ಬ್ರಾಹ್ಮಣ ಗ್ರಾಮ. ಅಲ್ಲಿಂದ ಹತ್ತು ಯೋಜನ ದಾರಿ ಸವೆಸಿದರೆ ದೊರೆಯುವುದು ಚೆತರಾಷ್ಟ್ರದ ಮಾತುಲ ನಗರ. ಹೀಗೆ ಜೆತುತ್ತರದಿಂದ ಚೆತರಾಷ್ಟ್ರಕ್ಕೆ ಬರಲು ಮೂವತ್ತು ಯೋಜನಗಳನ್ನು ನಡೆಯಬೇಕಿತ್ತು.

ಮಕ್ಕಳನ್ನು ಹೊತ್ತುಕೊಂಡು ನಡೆದ ಈ ದಂಪತಿಗಳಿಗೆ ಕನಿಷ್ಠ ನಾಲ್ಕು ದಿನಗಳಾದರೂ ಬೇಕಾಗುತ್ತಿತ್ತು. ಆದರೆ ದೇವತೆಗಳು ಇವರ ಕಷ್ಟವನ್ನು ಕಂಡು, ದಾರಿಯನ್ನು ಕಿರಿದು ಮಾಡಿ, ಹೊರಟದಿನವೇ ಸಂಜೆಯ ವೇಳೆಗೆ ಮಾತುಲನಗರವನ್ನು ತಲುಪುವಂತೆ ಮಾಡಿದರು. ಚೆತರಾಷ್ಟ್ರ ಆ ದಿನಗಳಲ್ಲಿ ಸಮೃದ್ಧವಾದ ದೇಶವಾಗಿತ್ತು. ಅಲ್ಲಿ ಸುಮಾರು ಅರವತ್ತು ಸಾವಿರ ಜನ ಕ್ಷತ್ರಿಯರು ವಾಸವಾಗಿದ್ದರು. ವೆಸ್ಸಂತರ ನಗರ ಪ್ರವೇಶ ಮಾಡದೆ ನಗರದ್ವಾರದಲ್ಲಿದ್ದ ಧರ್ಮಶಾಲೆಯಲ್ಲಿ ಕುಳಿತ. ಮಾದ್ರಿ, ತನಗಾದ ಶ್ರಮವನ್ನು ಗಮನಿಸದೆ, ವೆಸ್ಸಂತರನ ಧೂಳಾದ, ಒಡೆದ ಪಾದಗಳನ್ನು ನೋಡಿ, ದುಃಖಿಸಿ, ನೀರು ತಂದು ಅವುಗಳನ್ನು ತೊಳೆದು ಮೃದುವಾಗಿ ಒತ್ತತೊಡಗಿದಳು. ಬೋಧಿಸತ್ವ ವೆಸ್ಸಂತರನ ಆಗಮನವನ್ನು ಜನರಿಗೆ ತಿಳಿಸಲೆಂದು ಧರ್ಮಶಾಲೆಯ ಮುಂದಿದ್ದ ರಸ್ತೆಯ ಬದಿಗೆ ನಿಂತಳು. ರಸ್ತೆಯ ಮೇಲೆ ಹೋಗಿ ಬರುತ್ತಿದ್ದ ಹೆಣ್ಣುಮಕ್ಕಳು ಆಕೆಯನ್ನು ನೋಡಿ, ಆಕೆಯ ಸೌಂದರ್ಯಕ್ಕೆ, ರಾಜಗಾಂಭೀರ್ಯಕ್ಕೆ ಬೆರಗಾದರು. ನಂತರ ಆಕೆ ಸಿವಿರಾಜ್ಯದ ರಾಜನ ಸೊಸೆ, ವೆಸ್ಸಂತರನ ಹೆಂಡತಿ ಎಂದು ತಿಳಿದ ಮೇಲಂತೂ ಅವರ ಆಶ್ಚರ್ಯ ಮಿತಿಮೀರಿತು. ವಿಷಯ ಊರೆಲ್ಲ ಹರಡಿತು. ಇದನ್ನು ತಿಳಿದ ಚೆತದೇಶದ ಪ್ರಮುಖರು, ಅರವತ್ತು ಸಾವಿರ ಕ್ಷತ್ರಿಯರು ಬಂದು ಧರ್ಮಶಾಲೆಯ ಮುಂದೆ ನೆರೆದರು. ಹಿರಿಯರು ಬಂದು, 'ಇದೇನು ರಾಜಕುಮಾರ, ತಮ್ಮ ತಂದೆ ಆರೋಗ್ಯವೇ? ಸಿವಿಯ ಜನ ಕುಶಲರೇ? ತಮ್ಮ ಸೈನ್ಯ, ರಥಗಳು, ಸೇವಕರು ಎಲ್ಲಿ? ತಾವು ಎಲ್ಲವನ್ನು ತೊರೆದು ಶತ್ರುಗಳಿಂದ ಪಾರಾಗಿ ನಡೆದುಬಂದಿದ್ದೀರಾ? ನೀವು ಬಂದದ್ದು ನಮಗೆ ತುಂಬ ಶುಭಕರವಾದದ್ದು. ನಿಮಗೇನು ಬೇಕು ಹೇಳಿ' ಎಂದು ಪ್ರೀತಿಯಿಂದ ಕೇಳಿದರು. ಇದಕ್ಕೆ ವೆಸ್ಸಂತರ ಮುಗುಳುನಗೆ ನಕ್ಕು ನಡೆದದ್ದನ್ನು ವಿವರಿಸಿದ; ಅವರನ್ನು ಸಂತೈಸಿದ.

ದಿನ ಭವಿಷ್ಯ

ಸೋಮವಾರ ಜೂನ್ 28, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ಚತುರ್ಥೀ ಗಂ. 28-47 (ಸಾ. 5-35) ಸೋಮವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 56-26 (ರಾ. 4-38) ವಿಷ್ಕಂಭ ನಾಮ ಯೋಗ ಗಂ. 30-9 ಬವ ಕರಣ ಗಂ. 0-15 ಉಪರಿ ಬಾಲವ ಕರಣ ಗಂ. 28-32 ವಿಷ ಗಂ. 6-57 ಅಮೃತ ಗಂ. 30-52 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-00 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 2 7

ಮೇಷ: ಮಿತ್ರ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ಪತ್ರ ವ್ಯವಹಾರಗಳಲ್ಲಿ, ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ಜಾಗರೂಕತೆ ಅಗತ್ಯ. ಸಾಮಾಜಿಕ ಗೌರವಾದರಗಳು ಪ್ರಾಪ್ತಿಯಾಗುವ ಸಾಧ್ಯತೆ.

ವೃಷಭ: ಮಕ್ಕಳಿಂದ ನೆಮ್ಮದಿಯ ವಾತಾವರಣ ಮೂಡುವುದು. ದ್ವಿಚಕ್ರವಾಹನದಿಂದ ಕುತ್ತುಂಟಾಗುವ ಸಾಧ್ಯತೆ. ನಿವೇಶನ ಮುಂತಾದ ಸ್ಥಿರಾಸ್ತಿ ಖರೀದಿಯಲ್ಲಿ ವಿಳಂಬ ಸಾಧ್ಯತೆ. ಪ್ರೇಮ ಪ್ರಕರಣಗಳಿಂದಾಗಿ ಶಾಂತಿ ಕದಡುವ ಸಾಧ್ಯತೆ.

ಮಿಥುನ: ಪ್ರಿಯ ವ್ಯಕ್ತಿಗಳ ಆಗಮನ. ಮಾತಿನಿಂದ ಗೌರವ ಲಭ್ಯವಾಗಲಿದೆ. ಸಹೋದರರಿಂದ ಸಹಕಾರ ದೊರೆತು ಹೊಸ ಯೋಜನೆಗಳು ಕಾರ್ಯರೂಪಕ್ಕ ಬರಲಿವೆ. ಸೌಂದರ್ಯ ತಜ್ಞರಿಗೆ ಉತ್ತಮ ಅವಕಾಶಗಳು ದೊರಕಲಿವೆ.

ಕರ್ಕಾಟಕ: ಯಂತ್ರೋಪಕರಣಗಳ ಖರೀದಿಯಿಂದಾಗಿ ಖರ್ಚು. ಆತ್ಮೀಯರಿಂದ ಸಹಾಯ ದೊರೆತು ಉದ್ಯಮದಲ್ಲಿ ಯಶಸ್ಸು ಕಾಣುವಿರಿ. ಕುಶಲತೆಯಿಂದ ಧನಲಾಭ. ಗೃಹ ನಿರ್ಮಾಣವನ್ನು ದಿನದಮಟ್ಟಿಗೆ ಮುಂದೂಡಿ.

ಸಿಂಹ: ಅಧ್ಯಯನದಲ್ಲಿ ಆಸಕ್ತಿ ಮೂಡುವುದು. ಆಕಸ್ಮಿಕ ಧನಲಾಭ. ವಿನಾ ವಿವಾದದಿಂದ ಪಾರಾಗಲು ಮಾತಿನಲ್ಲಿ ಜಾಗರೂಕತೆ ಅಗತ್ಯ. ಆಂತರಿಕ ಸಮಸ್ಯೆಗಳಿಂದ ಮುಕ್ತರಾಗುವ ಸಾಧ್ಯತೆ. ಬಂಧುಗಳೊಂದಿಗಿನ ಸಂಬಂಧ ವೃದ್ಧಿ.

ಕನ್ಯಾ: ಸಹೋದ್ಯೋಗಿಗಳಿಂದ ಕಿರಿಕಿರಿ ಉಂಟಾಗುವ ಸಾಧ್ಯತೆ ಕಂಡುಬರುವುದು. ಅನಾವಶ್ಯಕ ವ್ಯವಹಾರಗಳಿಂದ ಮುಕ್ತರಾಗುವಿರಿ. ಕುಟುಂಬ ಸಮಸ್ಯೆಗಳು ಪರಿಹಾರ ಕಂಡುಕೊಳ್ಳುವವು.

ತುಲಾ: ಹೊಸ ಉದ್ಯಮದಲ್ಲಿ ಯಶಸ್ಸು. ಪ್ರಿಯ ವ್ಯಕ್ತಿಗಳ ಆಗಮನ ಸಾಧ್ಯತೆ. ವೈಯಕ್ತಿಕ ಜೀವನದಲ್ಲಿ ವಿಶೇಷ ಆಸಕ್ತಿ ಮೂಡುವುದು. ಗೃಹಿಣಿಯರು ಬೆಂಕಿಯ ಸಮೀಪ ಜಾಗ್ರತೆಯಿಂದ ವ್ಯವಹರಿಸುವುದು ಉತ್ತಮ. ಪ್ರಯಾಣ ಯೋಗ.

ವೃಶ್ಚಿಕ: ಆರೋಗ್ಯದಲ್ಲಿ ಸುಧಾರಣೆ ಕಂಡುಬಂದು ನೆಮ್ಮದಿ ದೊರಕುವುದು. ಕಳೆದುಕೊಂಡ ವಸ್ತುಗಳು ಪುನಃ ನಿಮ್ಮ ಕೈಸೇರುವ ಸಾಧ್ಯತೆ ಕಂಡುಬರುವುದು. ವಿನಾಕಾರಣ ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ.

ಧನು: ವೈಯಕ್ತಿಕ ವಿಚಾರಗಳನ್ನು ಯಾರಲ್ಲೂ ಹೇಳದೆ ಗುಪ್ತವಾಗಿಟ್ಟುಕೊಳ್ಳುವುದು ಉತ್ತಮ. ಆಭರಣ ವಸ್ತ್ರಾದಿಗಳ ಖರೀದಿ ಸಾಧ್ಯತೆ. ದೈನಂದಿನ ಕೆಲಸಗಳಲ್ಲಿ ಉತ್ಸಾಹ ಉಂಟಾಗುವುದು. ಸಾಮಾಜಿಕ ಗೌರವ ಪ್ರಾಪ್ತಿ.

ಮಕರ: ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ದಿನವಾಗಿದೆ. ನೆರೆಹೊರೆಯವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಒಳಿತು. ಸಹೋದರರಿಂದ ಸಹಕಾರ ದೊರೆಯುವ ಸಾಧ್ಯತೆಗಳು ಇವೆ.

ಕುಂಭ: ಯೋಜಿತ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ಪ್ರಾಪ್ತವಯಸ್ಕರಿಗೆ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ. ಮಾತಿನಿಂದಾಗಿ ಗೌರವ ಲಭ್ಯವಾಗಲಿದೆ. ಉದ್ಯೋಗಸ್ಥರಿಗೆ ಮೇಲಾಧಿಕಾರಿಗಳ ಪ್ರಶಂಸೆ.

ಮೀನ: ವೃತ್ತಿ ಕ್ಷೇತ್ರದಲ್ಲಿ ಪ್ರಗತಿ ಕಂಡುಬರುವುದು. ತಾಯಿಯ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ನ್ಯಾಯಾಲಯದ ತೀರ್ಪು ತಡವಾಗುವ ಸಾಧ್ಯತೆ. ನೂತನ ಕಾರ್ಯಯೋಜನೆಗಳಲ್ಲಿ ಯಶಸ್ಸನ್ನು ಕಾಣುವಿರಿ.

ನಿಮ್ಮ ಜನ್ಮದಿನ 28-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವಾಸ್ತವಿಕ ಮತ್ತು ಸಾಮರ್ಥ್ಯದಿಂದ ಕೂಡಿದವರಾಗಿದ್ದೀರಿ. ನಿಮ್ಮ ಅಚ್ಚುಕಟ್ಟುತನ ಮತ್ತು ಕ್ರಮಬದ್ಧ ಜೀವನ ಕ್ರಮದಿಂದಾಗಿ ಅನೇಕ ಅವಕಾಶಗಳಿಂದ ವಂಚಿತರಾಗುವ ಸಾಧ್ಯತೆ ಕಂಡುಬರುವುದು. ಸಣ್ಣ ಸಣ್ಣ ವಿಷಯಗಳ ಬಗ್ಗೆಯೂ ಹೆಚ್ಚಿನ ಗಮನ ವಹಿಸಿ ಕೆಲಸ ನಿರ್ವಹಿಸುವ ಗುಣ ನಿಮ್ಮದು.


ಪದಬಂಧ 4641 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಲಲಿತ ಕಲೆಗಳನ್ನು ಬಲ್ಲವನು (4)
3.ನೂರು ಕಾಲುಗಳುಳ್ಳ ಹುಳು (4)
5.ಶರದೊಳಗಿರುವ ದೇಹ (3)
6.ಎಳ್ಳು ನೀರು ಬಿಡುವಿಕೆ (4)
8.ಒಳ್ಳೆಯ ಸ್ವಭಾವವಿಲ್ಲಿ ತಿರುವುಮುರುವಾಗಿದೆ (3)
10.ಮಾತೆ ತೋರಿರುವ ಪ್ರೀತಿ (3)
12.ತುಸುವೇ ಬೀರಿರುವ ಮಂದಹಾಸ (4)
15.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
16.ಸಾರವಾದ ಭಾಗದೊಂದಿಗಿರುವ ಕ್ಷೀರ (4)
17.ಅತ್ಯಂತ ಪರಾಕ್ರಮಿ (4)

ಮೇಲಿಂದ ಕೆಳಕ್ಕೆ

1.ಬಣ್ಣದ ದಾರದಿಂದ ಬಟ್ಟೆಯ ಮೇಲೆ ಮಾಡಿದ ಹೆಣಿಗೆ (3)
2.ಹತ್ತು ವರ್ಷಗಳ ಕಾಲದ ಅವಧಿ (3)
3. ಅಶ್ರಯವನ್ನು ಬಯಸಿದವನು (3)
4.ಮಂಕುದಿಣ್ಣೆಗೆ ಕಾಣಿಸಿದ ಎತ್ತರವಾದ ಪ್ರದೇಶ (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅಂತಶ್ಶಕ್ತಿಯಿದು (5)
11.ಅತಿಯಾದ ಬಯಕೆ (3)
12.ಪಾಪಿಗಳ ಲೋಕವಿದು (3)
13.ನೆಲವನ್ನು ಅಗೆಯುವ ಕಬ್ಬಿಣದ ಸಾಧನ (3)
14.ಬೇಸಿಗೆಯ ತಾಪ (2)



4640ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಐಹಿಕ 3.ಮಶಕ 5.ರವಿಕಿರಣ 6.ತಡ 8.ಸ್ಥಾಯಿ 9.ನಾರಿ 10.ಕದ 14.ನರಭಕ್ಷಕ 15.ಕಡಲು 16.ವಿನಾಶ

ಮೇಲಿಂದ ಕೆಳಕ್ಕೆ: 1.ಐರಾವತ 2.ಕರಡಿ 3.ಮಣಕ 4 ಕಸುಗಾಯಿ 7.ಡಬರಿ 8.ಸ್ಥಾಪಕ 9.ನಾಗರಿಕ 11.ದಶಮಾಂಶ 12.ಹೊನಲು 13.ಕುಕವಿ

ಸುಡೊಕು 5027

	6			2		5		
5		4			7		2	3
	2		5			6		7
8		1		3				9
			9		8			4
9		2		5		3		6
7		3		9				
	8		7		5	9	3	
		9		8			7	5

5026 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಒಂದು ಅಥವಾ ಎರಡು ಡೋಸ್ ಪಡೆದರೆ ಕನಿಷ್ಠ ಪರಿಣಾಮ: ಎನ್‌ಟಿಎಜಿಐ ಮುಖ್ಯಸ್ಥ

‘ಡೆಲ್ಟಾ ಪ್ಲಸ್ ಅಪಾಯಕಾರಿ ಅನ್ನಬೇಕಿಲ್ಲ’

ನವದೆಹಲಿ (ಪಿಟಿಐ): 'ಇತರ ತಳಿಗಳಿಗೆ ಹೋಲಿಸಿದರೆ ಕೋವಿಡ್–19ರ ಡೆಲ್ಟಾ ಪ್ಲಸ್ ತಳಿಯು ಶ್ವಾಸಕೋಶದ ಅಂಗಾಂಶಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಅಂದ ಮಾತ್ರಕ್ಕೆ, ಇದು ಹೆಚ್ಚು ಅಪಾಯಕಾರಿ ಅಥವಾ ಹೆಚ್ಚು ವೇಗದಲ್ಲಿ ಪಸರಿಸುತ್ತದೆ ಎಂದು ತಿಳಿಯಬೇಕಾಗಿಲ್ಲ' ಎಂದು ಕೋವಿಡ್–19 ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯ (ಎನ್‌ಟಿಎಜಿಐ) ಮುಖ್ಯಸ್ಥ ಡಾ. ಎನ್.ಕೆ. ಅರೋರಾ ಹೇಳಿದ್ದಾರೆ.

'ಇತರ ತಳಿಗಳಿಗೆ ಹೋಲಿಸಿದರೆ ಈ ರೂಪಾಂತರ ತಳಿಯು ಶ್ವಾಸಕೋಶದ ಮೇಲೆ ಹೆಚ್ಚು ಪರಿಣಾಮ ಉಂಟುಮಾಡುತ್ತದೆ. ಆದರೆ ಅದು ಹೆಚ್ಚು ಹಾನಿ ಉಂಟುಮಾಡುತ್ತದೆಯೇ ಅಥವಾ ಇಲ್ಲವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಹೆಚ್ಚು ಹೆಚ್ಚು ಪ್ರಕರಣಗಳು ಬೆಳಕಿಗೆ ಬಂದರೆ ಈ ತಳಿಯ ಪರಿಣಾಮ ಏನೆಂಬುದು ಸ್ಪಷ್ಟವಾಗಬಹುದು. ಆದರೆ, ಲಸಿಕೆಯ ಒಂದು ಅಥವಾ ಎರಡು ಡೋಸ್ ಪಡೆದವರ ಮೇಲೆ ಈ ತಳಿಯ ಕನಿಷ್ಠ ಪರಿಣಾಮ ಉಂಟುಮಾಡುತ್ತದೆ ಎಂಬುದು ಈವರೆಗಿನ ಅಧ್ಯಯನದಿಂದ ತಿಳಿದುಬಂದಿದೆ' ಎಂದು ಡಾ. ಅರೋರಾ ಸುದ್ದಿ ಸಂಸ್ಥೆ 'ಪಿಟಿಐ'ಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ಈ ತಳಿಯ ಪ್ರಸರಣದ ವೇಗವು ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ತಿಳಿಯಬೇಕಾದರೆ ಅದರ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಡೆಲ್ಟಾ ಪ್ಲಸ್ ಸೋಂಕಿತರಲ್ಲಿ ಹೆಚ್ಚಿನವರಲ್ಲಿ ರೋಗಲಕ್ಷಣಗಳು ಕಂಡುಬರುತ್ತಿಲ್ಲ. ಆದ್ದರಿಂದ ಈಗ ಪತ್ತೆಯಾಗುತ್ತಿರುವುದಕ್ಕಿಂತಲೂ ಹೆಚ್ಚು ಮಂದಿ ಸೋಂಕಿಗೆ ಒಳಗಾಗಿರುವ ಸಾಧ್ಯತೆ ಇದೆ. ಇಂಥವರು ವೈರಸ್‌ನ ವಾಹಕರಾಗುವ ಅಪಾಯವಿದೆ.

'ನಮ್ಮ ವಿಜ್ಞಾನಿಗಳು ಈ ತಳಿಯನ್ನು ಬೇಗನೆ ಪತ್ತೆ ಮಾಡಿದ್ದಾರೆ. ಇದರ ಮೇಲೆ ಗಮನ ಇಟ್ಟಿರಬೇಕು, ಪ್ರಸರಣ ತಡೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯಗಳಿಗೆ ಸೂಚನೆಯನ್ನು ನೀಡಲಾಗಿದೆ. ಇದರಿಂದಾಗಿ ಈ ತಳಿಯ ಪ್ರಸರಣವನ್ನು ನಿಯಂತ್ರಿಸುವುದು ಸುಲಭವಾಗಬಹುದು. ಇದರ ಜತೆಗೆ, ಲಸಿಕೆ ನೀಡಿಕೆಯ ವೇಗವನ್ನು ಹೆಚ್ಚಿಸುವ ಕಡೆಗೂ ಗಮನ ಹರಿಸಬೇಕಾಗಿದೆ' ಎಂದರು.

ಡೆಲ್ಟಾ ಪ್ಲಸ್ ತಳಿಯು ದೇಶದಲ್ಲಿ ಕೋವಿಡ್‌ನ ಮೂರನೇ ಅಲೆಯನ್ನು ಸೃಷ್ಟಿಸಬಹುದೇ ಎಂಬುದನ್ನು ಈಗಲೇ ಹೇಳುವುದು ಕಷ್ಟ. ರೂಪಾಂತರಿತ ತಳಿಗಳೇ ಹೊಸ ಅಲೆಗೆ ಕಾರಣವಾಗಿರುತ್ತವೆ ಎಂಬುದು ನಿಜ. ಡೆಲ್ಟಾ ಪ್ಲಸ್ ಸಹ ಹೊಸ ತಳಿಯಾಗಿರುವುದರಿಂದ ಮೂರನೇ ಅಲೆ ಸೃಷ್ಟಿಸುವ ಸಾಧ್ಯತೆ ಇಲ್ಲ ಎನ್ನಲಾಗದು. ಆದರೆ ಮೂರನೇ ಅಲೆಯು ಇದರ ಜತೆಗೆ ಇನ್ನೂ ಕೆಲವು ವಿಚಾರಗಳನ್ನು ಅವಲಂಬಿಸಿರುತ್ತದೆ' ಎಂದರು.

2–18 ವರ್ಷದವರಿಗೆ ಸೆಪ್ಟೆಂಬರ್ ವೇಳೆಗೆ ಲಸಿಕೆ?

ನವದೆಹಲಿ (ಪಿಟಿಐ): ಮಕ್ಕಳಿಗಾಗಿ ಕೋವಿಡ್ ಲಸಿಕೆಯ ಲಭ್ಯತೆಯು ಶಾಲೆಗಳ ಆರಂಭ ಹಾಗೂ ಮಕ್ಕಳು ಹೊರಾಂಗಣ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಹಾದಿಯನ್ನು ಸುಗಮಗೊಳಿಸಲಿದೆ ಎಂದು ಏಮ್ಸ್ ಮುಖ್ಯಸ್ಥ ಡಾ.ರಣದೀಪ್ ಗುಲ್ಲೇರಿಯಾ ಅಭಿಪ್ರಾಯಪಟ್ಟಿದ್ದಾರೆ.

2ರಿಂದ 18 ವರ್ಷದ ಮಕ್ಕಳ ಮೇಲೆ ಭಾರತ್ ಬಯೊಟೆಕ್‌ನ ಕೊವ್ಯಾಕ್ಸಿನ್ ಲಸಿಕೆ ಪ್ರಯೋಗದ 2 ಮತ್ತು 3ನೇ ಹಂತದ ಅಂಕಿ ಅಂಶಗಳು ಸೆಪ್ಟೆಂಬರ್ ವೇಳೆಗೇ ಸಿಗುವ ಸಂಭವವಿದೆ. ಮಕ್ಕಳಿಗೆ ನೀಡುವ ಲಸಿಕೆ ಸಂಬಂಧ ಆ ವೇಳೆಗೆ ಔಷಧ ನಿಯಂತ್ರಕರ ಅನುಮತಿಯೂ ಸಿಗಬಹುದು ಎಂದರು.

ಸೆಪ್ಟೆಂಬರ್ ತಿಂಗಳಿಗೂ ಮೊದಲೇ ಫೈಝರ್ ಲಸಿಕೆಗೆ ಅನುಮೋದನೆ ದೊರೆತರೆ ದೇಶದಲ್ಲಿ ಮಕ್ಕಳಿಗೆ ಕೊಡಿಸಲು ಇನ್ನೊಂದು ಲಸಿಕೆ ಆಯ್ಕೆಯೂ ಸಿಗಲಿದೆ ಎಂದು ಡಾ.ಗುಲ್ಲೇರಿಯಾ ಅವರು ಶನಿವಾರ ತಿಳಿಸಿದರು.

ಸರ್ಕಾರದ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ, ಜೈಡುಸ್ ಕ್ಯಾಡಿಲಾ ಸಂಸ್ಥೆಯು ಕೂಡ ತುರ್ತು ಸಂದರ್ಭಗಳಲ್ಲಿ ಬಳಕೆಗಾಗಿ 'ಜೈಕೋವ್–ಡಿ' ಲಸಿಕೆಯ ಬಳಕೆಗೆ ಅನುಮತಿ ಕೋರಿ ಭಾರತೀಯ ಔಷಧ ಮಹಾನಿಯಂತ್ರಕರಿಗೆ (ಡಿಸಿಜಿಐ) ಪ್ರಸ್ತಾಪ ಸಲ್ಲಿಸುವ ನಿರೀಕ್ಷೆಯಿದೆ.

'ಮನದ ಮಾತು' ಬಾನುಲಿ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಮನವಿ

‘ಲಸಿಕೆ ಪಡೆಯಲು ಹಿಂಜರಿಕೆ ಬೇಡ’

ನವದೆಹಲಿ(ಪಿಟಿಐ): ಕೋವಿಡ್–19 ಇನ್ನೂ ಸಂಪೂರ್ಣ ನಿವಾರಣೆಯಾಗಿಲ್ಲ ಎನ್ನುವ ಎಚ್ಚರಿಕೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಲಸಿಕೆ ಕುರಿತ ವದಂತಿಗಳನ್ನು ನಂಬಬಾರದು ಎಂದು ಕೋರಿದ್ದಾರೆ.

ತಿಂಗಳ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಭಾನುವಾರ ಮಾತನಾಡಿದ ಅವರು, 'ಕೋವಿಡ್ ಲಸಿಕೆ ಪಡೆಯಲು ಹಿಂಜರಿಕೆ ಬೇಡ. ಪ್ರತಿಯೊಬ್ಬರೂ ಲಸಿಕೆ ಪಡೆದುಕೊಳ್ಳಬೇಕು' ಎಂದು ಕೋರಿದ್ದಾರೆ.

'ನಾನು ಮತ್ತು 100 ವರ್ಷಗಳಾಗಿರುವ ನನ್ನ ತಾಯಿ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದಿದ್ದೇವೆ. ಹೀಗಾಗಿ, ವಿಜ್ಞಾನ ಮತ್ತು ವಿಜ್ಞಾನಿಗಳ ಮೇಲೆ ವಿಶ್ವಾಸ ಇರಿಸಬೇಕು' ಎಂದು ಮನವಿ ಮಾಡಿದರು.

'ಇದುವರೆಗೆ ಸುಮಾರು 31 ಕೋಟಿ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಜೂನ್ 21ರಂದು ಒಂದೇ ದಿನ ಸುಮಾರು 86 ಲಕ್ಷ ಮಂದಿ ಲಸಿಕೆ ಪಡೆದಿರುವುದು ಶ್ಲಾಘನೀಯ ಕಾರ್ಯ. ಕೊರೊನಾ ವೈರಸ್ ರೂಪಾಂತರವಾಗುತ್ತಿದೆ. ಇದರಿಂದ ರಕ್ಷಿಸಿಕೊಳ್ಳಲು ನಮಗೆ ಇರುವುದು ಎರಡೇ ಮಾರ್ಗಗಳು. ಮಾರ್ಗಸೂಚಿಗಳನ್ನು ಪಾಲಿಸುವುದು ಮತ್ತು ಲಸಿಕೆ ಹಾಕಿಸಿಕೊಳ್ಳುವುದು' ಎಂದು ಹೇಳಿದರು.

ಲಸಿಕೆ ಪಡೆದ ಗ್ರಾಮಸ್ಥರು

ಭೋಪಾಲ್: 'ಹಿಂಜರಿಕೆ ಬದಿಗೊತ್ತಿ, ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರ ಮಾತಿನಿಂದ ಪ್ರೇರಣೆ ಪಡೆದ ಮಧ್ಯಪ್ರದೇಶದ ದುಲಾರಿಯಾ ಗ್ರಾಮದ ವ್ಯಕ್ತಿ ಮತ್ತು ಆತನ ಕುಟುಂಬಸ್ಥರು ಲಸಿಕೆ ಪಡೆದಿದ್ದಾರೆ.

'ಪ್ರಧಾನ ಮಂತ್ರಿಯೊಂದಿಗೆ ಮಾತುಕತೆ ನಡೆಸಿದ ಬಳಿಕ, ನಾನು ಮತ್ತು ನನ್ನ ಕುಟುಂಬ ಸದಸ್ಯರು ಕೋವಿಡ್ ಲಸಿಕೆ ಪಡೆದಿದ್ದೇವೆ' ಎಂದು ರಾಜೇಶ್ ಹಿರವೆ (43)ಎಂಬುವವರು ಹೇಳಿದ್ದಾರೆ.

'ಲಸಿಕೆ ಪಡೆಯುವಂತೆ ನಾನು ಇತರ ಗ್ರಾಮಸ್ಥರನ್ನೂ ಪ್ರೋತ್ಸಾಹಿಸಿದೆ. ಗ್ರಾಮದ 127 ಜನರಿಗೆ ಲಸಿಕೆ ಹಾಕಲಾಗಿದೆ' ಎಂದು ಅವರು ಹೇಳಿದರು. ಅದೇ ಗ್ರಾಮದ 60 ವರ್ಷದ ಕಿಶೋರಿಲಾಲ್ ಧುರ್ವೆ ಅವರೊಂದಿಗೂ ನರೇಂದ್ರ ಮೋದಿ ಮಾತನಾಡಿದ್ದಾರೆ. ಬಳಿಕ ಅವರೂ ಲಸಿಕೆ ಪಡೆದಿದ್ದಾರೆ.



ಮರಾಠಿಗರಿಗೆ ಮೀಸಲಾತಿ ನೀಡುವಂತೆ ಒತ್ತಾಯಿಸಿ ಭಾನುವಾರ ಮುಂಬೈನಲ್ಲಿ ಮರಾಠಾ ಕ್ರಾಂತಿ ಸಂಘರ್ಷ ಮೋರ್ಚಾ ಬೈಕ್ ರ‍್ಯಾಲಿ ನಡೆಸಿತು —ಪಿಟಿಐ ಚಿತ್ರ

ಮಕ್ಕಳ ಆಸ್ಪತ್ರೆ ಬಲಪಡಿಸಲು ಸಲಹೆ


ಪ್ರಜಾವಾಣಿ ವಾರ್ತೆ

ನವದೆಹಲಿ: ಮಕ್ಕಳ ಕೋವಿಡ್ ಆಸ್ಪತ್ರೆಗಳನ್ನು ಬಲಪಡಿಸುವ ಜೊತೆಗೆ, ಕೊರೊನಾ ಸೋಂಕಿನ ಕಾರಣಕ್ಕಾಗಿ ಪ್ರತ್ಯೇಕವಾಗಿರುವ ಮಕ್ಕಳಿಗೆ ಮಾನಸಿಕ ಮತ್ತು ಸಾಮಾಜಿಕ ಬೆಂಬಲ ನೀಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳು ಆಯೋಗವು (ಎನ್‌ಎಚ್‌ಆರ್‌ಸಿ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಒತ್ತಾಯಿಸಿದೆ.

ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಸಿಬ್ಬಂದಿ ಲಸಿಕೆ ಬಗ್ಗೆ ಇರುವ ಅನುಮಾನಗಳನ್ನು ಹೋಗಲಾಡಿಸಬೇಕು. ಇದರ ಜತೆಗೆ ಸಂಪರ್ಕಕ್ಕೆ ಬರುವ ಮಕ್ಕಳಿಗೆ ವೈರಸ್ ಸೋಂಕು ತಗುಲದಂತೆ ತಡೆಯಲು ಅಗತ್ಯವಾದ ವೈಯಕ್ತಿಕ ರಕ್ಷಣಾ ಸಾಧನಗಳನ್ನು ಒದಗಿಸಬೇಕು ಎಂದೂ ಆಯೋಗವು ಶಿಫಾರಸು ಮಾಡಿದೆ.

ಮಕ್ಕಳ ಕೋವಿಡ್ ಆಸ್ಪತ್ರೆಗಳು, ಕೋವಿಡ್ ಶಿಷ್ಟಾಚಾರಗಳನ್ನು ಬಲಪಡಿಸುವ ಅವಶ್ಯಕತೆ ಇದೆ. ಮಕ್ಕಳ ಆಸ್ಪತ್ರೆಗಳಲ್ಲಿ ಹಾಸಿಗೆ ಸಂಖ್ಯೆಗಳ ಹೆಚ್ಚಳ, ತರಬೇತಿ ಪಡೆದ ಸಿಬ್ಬಂದಿ, ಔಷಧಿ, ಉಪಕರಣಗಳ ಲಭ್ಯತೆಯನ್ನೂ ಖಾತ್ರಿಪಡಿಸಲು ಎನ್‌ಎಚ್‌ಆರ್‌ಸಿ ಸೂಚಿಸಿದೆ.

ಕಪ್ಪು ಶಿಲೀಂಧ್ರ ಸೋಂಕಿಗೆ ಚಿಕಿತ್ಸೆ: ಔಷಧ ಪೂರೈಕೆಗೆ ಅಗತ್ಯ ಕ್ರಮ



ನವದೆಹಲಿ (ಪಿಟಿಐ): 'ದೇಶದಲ್ಲಿ ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳಲ್ಲಿ ಚಿಕಿತ್ಸೆಗೆ ವಿಶ್ವದ ವಿವಿಧೆಡೆಯಿಂದ ಆಂಫೊಟೆರಿಸಿನ್ ಬಿ ಸೇರಿದಂತೆ ಅಗತ್ಯ ಔಷಧವನ್ನು ಪಡೆಯಲು ಸಮರೋಪಾದಿಯಲ್ಲಿ ಕ್ರಮವಹಿಸಲಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಕೇಂದ್ರ ಆರೋಗ್ಯ ಸಚಿವಾಲಯವು ಈ ಸಂಬಂಧ 375 ಪುಟಗಳ ಪ್ರಮಾಣಪತ್ರವನ್ನು ಸಲ್ಲಿಸಿದೆ. ಕಪ್ಪುಶಿಲೀಂಧ್ರ ಪ್ರಕರಣಗಳ ಚಿಕಿತ್ಸೆಗೆ ಔಷಧದ ಲಭ್ಯತೆ, ಮಾಡಿಕೊಂಡಿರುವ ಸಿದ್ಧತೆ ಕುರಿತಂತೆ ಸುಪ್ರೀಂ ಕೋರ್ಟ್ ಮಾಹಿತಿಯನ್ನು ಕೋರಿತ್ತು.

ದೇಶೀಯವಾಗಿ ಆಗಸ್ಟ್ ತಿಂಗಳಲ್ಲಿ 5.525 ಲಕ್ಷ ಯೂನಿಟ್ 'ಲೈಪೋಸೋಮಲ್ ಆಂಫೊಟೆರಿಸಿನ್ ಬಿ ಔಷಧ ಉತ್ಪಾದನೆಯಾಗುವ ಸಂಭವಿವದೆ. ಇದನ್ನು ರಾಜ್ಯಗಳಿಗೆ ದಾಖಲಾಗಿರುವ ಪ್ರಕರಣಗಳಿಗೆ ಅನುಸಾರವಾಗಿ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದೆ.

ದೇಶೀಯವಾಗಿ ಉತ್ಪಾದನೆ ಮತ್ತು ಆಮದು ಮಾಡಿಕೊಳ್ಳುವ ಮೂಲಕ ಔಷಧ ಲಭ್ಯತೆ ಪ್ರಮಾಣ ಹೆಚ್ಚಿಸಲು ಕ್ರಮವಹಿಸಲಾಗಿದೆ. ಮೇ ಮತ್ತು ಜೂನ್ ತಿಂಗಳಲ್ಲಿ ಈ ಔಷಧಕ್ಕೆ ಬೇಡಿಕೆಯು ಸಾಕಷ್ಟು ಹೆಚ್ಚಿದ್ದು, ಕಡಿಮೆ ಅವಧಿಯಲ್ಲಿ ಔಷಧಗಳ ಪೂರೈಕೆಗೂ ಕ್ರಮವಹಿಸಲಾಗಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಮತ್ತೆ ಪಕ್ಷಕ್ಕೆ ಬರುವುದು ಖಚಿತ: ಶಶಿಕಲಾ



ಶಶಿಕಲಾ

ಚೆನ್ನೈ: ಎಂ.ಜಿ ರಾಮಚಂದ್ರನ್ ಮತ್ತು ಜೆ.ಜಯಲಲಿತಾ ಅವರ ಅವಧಿ ಯಲ್ಲಿ ಪಕ್ಷವು ಹೊಂದಿದ್ದ ಹಿರಿಮೆಯನ್ನು ಪುನರ್ ಸ್ಥಾಪಿಸುವುದಾಗಿ ಎಐಎಡಿಎಂಕೆ ಉಚ್ಚಾಟಿತ ನಾಯಕಿ ವಿ.ಕೆ. ಶಶಿಕಲಾ ಭಾನುವಾರ ಭರವಸೆ ನೀಡಿದ್ದಾರೆ.

ವಿರೋಧ ಪಕ್ಷದ ನಾಯಕ ಕೆ.ಪಳನಿಸ್ವಾಮಿ ಪ್ರತಿನಿಧಿಸುವ ಎಡಪ್ಪಡಿ ವಿಧಾನಸಭಾ ಕ್ಷೇತ್ರದಲ್ಲಿನ ಪಕ್ಷದ ಕಾರ್ಯಕರ್ತರೊಂದಿಗೆ ಮಾತನಾಡಿದ ಅವರು, 'ಎಐಎಡಿಎಂಕೆಗೆ ಮರಳಲು ದೃಢ ನಿಶ್ಚಯ ಮಾಡಿದ್ದು, ಪಕ್ಷದ ಭವಿಷ್ಯದ ಕುರಿತು ಚಿಂತೆ ಮಾಡಬೇಡಿ' ಎಂದು ಕಾರ್ಯಕರ್ತರಿಗೆ ಹೇಳಿದ್ದಾರೆ.

ಪಕ್ಷವು ಒಂದು ನಿರ್ದಿಷ್ಟ ಜಾತಿಯ ಕಡೆಗೆ ವಾಲುತ್ತಿರುವ ಕುರಿತು ಪಕ್ಷದ ಕಾರ್ಯಕರ್ತ ಬಾಲು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಶಿಕಲಾ ಅವರು, 'ಕೊಂಗು ಪ್ರದೇಶದ ಜನರು ಎಐಎಡಿಎಂಕೆಗೆ ತೋರಿಸಿದ ಬೆಂಬಲ ಮತ್ತು ಪ್ರೀತಿಗೆ ಪ್ರತಿಫಲ ತೋರಿಸುವ ಸಲುವಾಗಿ ಪಳನಿಸ್ವಾಮಿ ಅವರನ್ನು ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದ್ದೆ. ಆ ಸಮಯದಲ್ಲಿ ಬೇರೆ ಆಲೋಚನೆಯನ್ನೇ ನಾನು ಮಾಡಲಿಲ್ಲ' ಎಂದು ಹೇಳಿದರು.

ಪುದುಚೇರಿ: ಐವರು ಸಂಪುಟಕ್ಕೆ

ಪುದುಚೇರಿ: ಇಲ್ಲಿನ ಎನ್‌ಡಿಎ ಸರ್ಕಾರದ ಸಚಿವ ಸಂಪುಟಕ್ಕೆ ಐವರನ್ನು ಭಾನುವಾರ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಎನ್. ರಂಗಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಎರಡು ತಿಂಗಳ ಬಳಿಕ ಸಂಪುಟ ವಿಸ್ತರಿಸಲಾಗಿದೆ.

ಬಿಜೆಪಿಯ ಎ. ನಮಶಿವಾಯಂ ಮತ್ತು ಎ.ಕೆ. ಸಾಯ್ ಜೆ. ಶರವಣ ಕುಮಾರ್ ಹಾಗೂ ಎಐಎನ್ ಆರ್‌ಸಿಯ ಕೆ. ಲಕ್ಷ್ಮೀನಾರಾಯಣ, ಸಿ. ಜಿಯಾಕೌಮಾರ್, ಚಂದಿರಾ ಪ್ರಿಯಾಂಗಾ ಅವರು ಸಚಿವರಾಗಿ ರಾಜ್ ನಿವಾಸದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಲೆಫ್ಟಿನೆಂಟ್ ಗವರ್ನರ್ ತಮಿಳಿಸೈ ಸೌಂದರರಾಜನ್ ಪ್ರಮಾಣ ವಚನ ಬೋಧಿಸಿದರು.

ಶ್ರೀಲಂಕಾ ಕ್ರಿಕೆಟ್ ಪ್ರವಾಸಕ್ಕೆ ತೆರಳಲಿರುವ ಶಿಖರ್ ಬಳಗ

ಯುವ ಆಟಗಾರರಿಗೆ ಸುವರ್ಣ ಅವಕಾಶ: ರಾಹುಲ್ ದ್ರಾವಿಡ್



ಶಿಖರ್ ಮತ್ತು ರಾಹುಲ್ ದ್ರಾವಿಡ್

ಮುಂಬೈ (ಪಿಟಿಐ): ಅನಿರೀಕ್ಷಿತವಾಗಿ ಲಭಿಸಿರುವ ಅವಕಾಶಗಳನ್ನು ಯುವ ಆಟಗಾರರು ಸದುಪಯೋಗಪಡಿಸಿಕೊಳ್ಳಬೇಕು. ಶ್ರೀಲಂಕಾದಲ್ಲಿ ನಡೆಯಲಿರುವ ಸರಣಿಯಲ್ಲಿ ತಮ್ಮ ಹೆಜ್ಜೆಗುರುತುಗಳನ್ನು ಮೂಡಿಸಲು ಇದು ಸದಾವಕಾಶ ಎಂದು ಭಾರತ ಸೀಮಿತ ಓವರ್‌ಗಳ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

ಜುಲೈನಲ್ಲಿ ಶ್ರೀಲಂಕಾದಲ್ಲಿ ನಡೆಯಲಿರುವ ಏಕದಿನ ಮತ್ತು ಟಿ20 ಸರಣಿಗಳಲ್ಲಿ ಆಡಲು ಶಿಖರ್ ಧವನ್ ನಾಯಕತ್ವದ ತಂಡವು ತೆರಳಲಿದೆ. ಪ್ರಯಾಣಕ್ಕೂ ಮುನ್ನ ಭಾನುವಾರ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ದ್ರಾವಿಡ್ ಮಾತನಾಡಿದರು.

'ಇದೊಂದು ಚುಟುಕು ಅವಧಿಯ ಪ್ರವಾಸವಾಗಿದೆ. ಮೊದಲೇ ಇದನ್ನು ಯಾರೂ ಊಹಿಸಿರಲಿಲ್ಲ. ಆಯಾಚಿತವಾಗಿ ಒದಗಿಬಂದಿದೆ. ಆಟಗಾರರು ತಮ್ಮ ಸಾಮರ್ಥ್ಯ ಸಾಬೀತುಮಾಡಲು ಉತ್ತಮ ವೇದಿಕೆಯಾಗಿದೆ. ಏಕದಿನ ಅಥವಾ ಟಿ20 ಪಂದ್ಯಗಳಲ್ಲಿ ತಮಗೆ ಲಭಿಸುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಏಕೆಂದರೆ, ಈ ಸರಣಿಯನ್ನು ಆಯ್ಕೆ ಸಮಿತಿಯ ಸದಸ್ಯರು ವೀಕ್ಷಿಸಲಿದ್ದಾರೆ' ಎಂದು ರಾಹುಲ್ ಹೇಳಿದರು.

ಈ ತಂಡದಲ್ಲಿ ಆರು ಜನ ಹೊಸಬರಿಗೆ ಅವಕಾಶ ಕೊಡಲಾಗಿದೆ. ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಲು ಕಾತುರರಾಗಿದ್ದಾರೆ.'ಇದೇ ತಂಡದಲ್ಲಿರುವ ಕೆಲವು ಆಟಗಾರರು ರಾಷ್ಟ್ರೀಯ ತಂಡದಲ್ಲಿ ತಮ್ಮ ಸ್ಥಾನ ಗಟ್ಟಿಗೊಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಟಿ20 ವಿಶ್ವಕಪ್ ಟೂರ್ನಿ ಕೂಡ ಸಮೀಪಿಸುತ್ತಿದೆ. ಆದ್ದರಿಂದ ಆಯ್ಕೆಗಾರರ ಗಮನ ಸೆಳೆಯಲು ಇದು ಸಕಾಲ' ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಹಾಜರಿದ್ದ ನಾಯಕ ಧವನ್, 'ಇದು ಉತ್ತಮ ತಂಡವಾಗಿದೆ. ಆತ್ಮವಿಶ್ವಾಸ ಮತ್ತು ಸಕಾರಾತ್ಮಕ ಮನೋಭಾವದ ಆಟಗಾರರು ಇದ್ದಾರೆ. ಅದರಿಂದಾಗಿ ನಾವು ಉತ್ತಮ ಫಲಿತಾಂಶ ಪಡೆಯುವ ಭರವಸೆ ಮೂಡಿದೆ. ಟೂರ್ನಿಯಲ್ಲಿ ಆಡಲು ಬಹಳ ಉತ್ಸುಕರಾಗಿದ್ದೇವೆ' ಎಂದರು.

ತಂಡದಲ್ಲಿ 20 ಆಟಗಾರರು ಇದ್ದಾರೆ. ಕರ್ನಾಟಕದ ದೇವದತ್ತ ಪಡಿಕ್ಕಲ್, ಕೃಷ್ಣಪ್ಪ ಗೌತಮ್ ಪದಾರ್ಪಣೆಯ ನಿರೀಕ್ಷೆಯಲ್ಲಿದ್ದಾರೆ. ಜುಲೈ 13ರಿಂದ ಸರಣಿ ಆರಂಭವಾಗಲಿದೆ.

ಯೂರೊ ಕಪ್: ಕ್ವಾರ್ಟರ್‌ಫೈನಲ್‌ಗೆ ಇಟಲಿ

ಲಂಡನ್ (ಎಪಿ): ದಾಖಲೆಯ ಸತತ 12ನೇ ಪಂದ್ಯದಲ್ಲಿ ಜಯ ಗಳಿಸಿದ ಇಟಲಿ ತಂಡ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿತು. ಇಲ್ಲಿನ ವೆಂಬ್ಲಿ ಕ್ರೀಡಾಂಗಣದಲ್ಲಿ ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ 2–1ರಿಂದ ಆಸ್ಟ್ರಿಯಾ ತಂಡವನ್ನು ಸೋಲಿಸಿತು. ಜಿದ್ದಾಜಿದ್ದಿನ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಎಲ್ಲ ಗೋಲುಗಳೂ ಹೆಚ್ಚುವರಿ ಅವಧಿಯಲ್ಲೇ ದಾಖಲಾ ದವು. 95ನೇ ನಿಮಿಷದಲ್ಲಿ ಫೆಡರಿಕೊ ಚೈಸಾ ಇಟಲಿಯ ಗೋಲಿನ ಖಾತೆ ತೆರೆದರು. 105ನೇ ನಿಮಿಷದಲ್ಲಿ ಯಶಸ್ಸು ಸಾಧಿಸಿದ ಮ್ಯಾಟೆಯೊ ಪೆಸ್ಸಿನಾ ತಂಡದ ಮುನ್ನಡೆಯನ್ನು ಹೆಚ್ಚಿಸಿದರು.

114ನೇ ನಿಮಿಷದಲ್ಲಿ ಸಸಾ ಕಲಾಜಿಕ್ ಅವರು ಆಸ್ಟ್ರಿಯಾ ಪರ ಗೋಲು ದಾಖಲಿಸಿದರು. ಎಂಟರ ಘಟ್ಟದ ಹಣಾಹಣಿಯಲ್ಲಿ ಇಟಲಿ ತಂಡವು, ಹಾಲಿ ಚಾಂಪಿಯನ್ ಪೋರ್ಚುಗಲ್ ಮತ್ತು ಬೆಲ್ಜಿಯಂ ತಂಡಗಳ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದೆ. ಕ್ವಾರ್ಟರ್‌ಫೈನಲ್ ಪಂದ್ಯವು ಶುಕ್ರವಾರ ನಡೆಯಲಿದೆ.

ಅಥ್ಲೆಟಿಕ್ಸ್ ಕೂಟ: ಕೃಷ್ಣಕುಮಾರ್, ಹರ್ಮಿಲನ್‌ಗೆ ಚಿನ್ನ

ಪಟಿಯಾಲ (ಪಿಟಿಐ): ಹರಿಯಾಣದ ಕೃಷ್ಣಕುಮಾರ್ ಹಾಗೂ ಪಂಜಾಬ್‌ನ ಹರ್ಮಿಲನ್ ಬೇನ್ಸ್ ಇಲ್ಲಿ ನಡೆಯುತ್ತಿರುವ ಅಂತರರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಕ್ರಮವಾಗಿ ಪುರುಷ ಮತ್ತು ಮಹಿಳೆಯರ 800 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಭಾನುವಾರ ನಡೆದ ಸ್ಪರ್ಧೆಯಲ್ಲಿ ಕೃಷ್ಣಕುಮಾರ್ 1 ನಿಮಿಷ 50.15 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಉತ್ತರಾಖಂಡದ ಅನುಕುಮಾರ ಬೆಳ್ಳಿ ಗೆದ್ದರೆ, ಹರಿಯಾಣದ ಮಂಜೀತ್ ಸಿಂಗ್ ಕಂಚು ತಮ್ಮದಾಗಿಸಿಕೊಂಡರು.

ಹರ್ಮಿಲನ್ 2 ನಿಮಿಷ 2.57 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಗಳಿಸಿದರೆ, ದೆಹಲಿಯ ಚಂದಾ ಹಾಗೂ ಶ್ರೀಲಂಕಾದ ನಿಮಾಲಿ ಲಿಯಾನಾರಚಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಟ್ರಿಪಲ್ ಜಂಪ್‌ನಲ್ಲಿ ಕೇರಳದ ಎಲ್ಡೋಸ್ ಪೌಲ್ (16.58 ಮೀ.) ಚಿನ್ನ ಗೆದ್ದುಕೊಂಡರು. ಕೇರಳದ ಕಾರ್ತಿಕ್ ಉಣ್ಣಿಕೃಷ್ಣನ್ ಎರಡನೇ ಮತ್ತು ಅಬ್ದುಲ್ಲಾ ಅಬೂಬಕರ್ ಮೂರನೇ ಸ್ಥಾನ ಗಳಿಸಿದರು.

ಹಿಮಾ ಬದಲಿಗೆ ದಾನೇಶ್ವರಿ: ಗಾಯಗೊಂಡಿರುವ ಹಿಮಾ ದಾಸ್ ಬದಲಿಗೆ 4X100 ಮೀಟರ್ ರಿಲೇ ಫೈನಲ್‌ನಲ್ಲಿ ಕರ್ನಾಟಕದ ಎ.ಟಿ. ದಾನೇಶ್ವರಿ ಸ್ಪರ್ಧಿಸುವ ಸಾಧ್ಯತೆಯಿದೆ. ಮಂಗಳವಾರ ಈ ವಿಭಾಗದ ಸ್ಪರ್ಧೆ ನಡೆಯಲಿದೆ. ದಾನೇಶ್ವರಿ ಅವರು ಶನಿವಾರ ನಡೆದ ಮಹಿಳೆಯರ 100 ಮೀ. ಓಟದಲ್ಲಿ ಐದನೇ ಸ್ಥಾನ ಗಳಿಸಿದ್ದರು. 11.71 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದ್ದರು. ತಮಿಳುನಾಡಿನ ಎಸ್. ಧನಲಕ್ಷ್ಮೀ ಮೊದಲ ಸ್ಥಾನ ಗಳಿಸಿದ್ದರು.

ನಿಮ್ಮ ನೆರವು; ಅರ್ಹರಿಗೆ ಮುಡುಪು

ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್‌ನಿಂದ 11 ಸಂಸ್ಥೆಗಳು ತಲಾ ₹ 5 ಲಕ್ಷ ನೆರವನ್ನು ಎರಡನೇ ಹಂತದಲ್ಲಿ ಕೋವಿಡ್ ಪರಿಹಾರ ಕಾರ್ಯಗಳಿಗೆ ಪಡೆಯಲಿವೆ. ಈ ಸಂಸ್ಥೆಗಳ ಚಟುವಟಿಕೆಗಳ ಮಾಹಿತಿ ಇಲ್ಲಿದೆ.

ನಿಸರ್ಗ ಫೌಂಡೇಷನ್

ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ದೇಶಿಯ ಸಮುದಾಯಗಳ ಅಭಿವೃದ್ಧಿಗಾಗಿ ನಿಸರ್ಗ ಫೌಂಡೇಷನ್ ಕಾರ್ಯನಿರ್ವಹಿಸುತ್ತಿದೆ. ಜೀವ ವೈವಿಧ್ಯಗಳ ಸಂರಕ್ಷಣೆ ಮತ್ತು ಜನ ಕಲ್ಯಾಣದ ಆಶಯದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ.

ಕೋವಿಡ್–19 ಅರಣ್ಯ ವಾಸಿಗಳಿಗೆ ಹೊಸ ಸಮಸ್ಯೆಗಳು ಮತ್ತು ಸವಾಲುಗಳನ್ನು ಸೃಷ್ಟಿಸಿದೆ. ಹಲವರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ನಿಸರ್ಗ ಫೌಂಡೇಷನ್ ಅರಣ್ಯ ವಾಸಿಗಳಿಗೆ ರೇಷನ್ ಕಿಟ್‌ಗಳು, ಮಾಸ್ಕ್‌ಗಳು ಮತ್ತು ಫೇಸ್ ಶೀಲ್ಡ್‌ಗಳನ್ನು ನೀಡುವುದರ ಜತೆಗೆ ಕೋವಿಡ್ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದೆ.

ಮಕ್ಕಳಿಗೆ ಬಟ್ಟೆ, ಪುಸ್ತಕ, ಪೌಷ್ಟಿಕಾಂಶವುಳ್ಳ ಬಿಸ್ಕತ್‌ಗಳು ಹಾಗೂ ಮಹಿಳೆಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಈ ಸಂಸ್ಥೆ ಒದಗಿಸಿದೆ.

ಈ ಜನರು ಎದುರಿಸುತ್ತಿರುವ ಸಾಮಾಜಿಕ–ಆರ್ಥಿಕ ಸಮಸ್ಯೆಗಳು ಹಾಗೂ ಪೌಷ್ಟಿಕಾಂಶದ ಸವಾಲುಗಳನ್ನು ನಿವಾರಿಸಿ ಸಾಮಾನ್ಯ ಜನಜೀವನದತ್ತ ಸಾಗುವಂತೆ ಮಾಡುವ ಕಾರ್ಯದಲ್ಲಿ ನಿಸರ್ಗ ಫೌಂಡೇಷನ್ ತೊಡಗಿದೆ.

ಬೆಳಗಾವಿ ಡಯಾಸೀಜನ್ ಸೋಷಿಯಲ್ ಸರ್ವಿಸ್ ಸೊಸೈಟಿ

ಕೋವಿಡ್–19 ರೋಗಿಗಳಿಗೆ ಮತ್ತು ಕಾಯಿಲೆಯಿಂದ ಸಂಕಷ್ಟದಲ್ಲಿ ಸಿಲುಕಿರುವವರಿಗೆ ಮತ್ತೆ ಬದುಕು ಕಟ್ಟಿಕೊಳ್ಳಲು ವಿವಿಧ ರೀತಿಯಲ್ಲಿ ನೆರವಾಗುತ್ತಿರುವ ಬೆಳಗಾವಿ ಡಯಾಸೀಜನ್ ಸೋಷಿಯಲ್ ಸರ್ವಿಸ್ ಸೊಸೈಟಿಯು (ಬಿಡಿಎಸ್‌ಎಸ್‌ಎಸ್) ಬೆಳಗಾವಿ, ಧಾರವಾಡ, ಹಾವೇರಿ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹಲವು ಚಟುವಟಿಕೆಗಳನ್ನು ಕೈಗೊಂಡಿದೆ.

ಆರೋಗ್ಯ ಸೌಲಭ್ಯಗಳ ಕೊರತೆಯನ್ನು ನೀಗಿಸುವ ಪ್ರಯತ್ನವನ್ನು ಈ ಸಂಸ್ಥೆ ಕೈಗೊಂಡಿದೆ. ಈ ನಿಟ್ಟಿನಲ್ಲಿ ಬೆಳಗಾವಿಯ ಮೋದಗೆ ಗ್ರಾಮದಲ್ಲಿ ಕಾರ್ಡಿನಲ್ ಗ್ರೇಸಿಯಸ್ ಆಸ್ಪತ್ರೆಯಲ್ಲಿ ಕೋವಿಡ್ ಆರೈಕೆ ಘಟಕದಲ್ಲಿ ಮತ್ತಷ್ಟು ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಿದೆ. ಇದರಿಂದ ಸುತ್ತಮುತ್ತ ಗ್ರಾಮಗಳ ಜನರಿಗೆ ಅನುಕೂಲವಾಗಲಿದೆ.

ಮಾನವ ಹಕ್ಕುಗಳ ರಕ್ಷಣೆಯ ಕಾರ್ಯದಲ್ಲಿಯೂ ಬಿಡಿಎಸ್‌ಎಸ್‌ಎಸ್ ತೊಡಗಿಸಿಕೊಂಡಿದೆ. ವಿಶೇಷವಾಗಿ ಮಕ್ಕಳ ಹಕ್ಕುಗಳ ಬಗ್ಗೆ ಹೆಚ್ಚು ಗಮನಹರಿಸಿದೆ.

ರಿಫಾರೆಸ್ಟ್ ಇಂಡಿಯಾ

ಪರಿಸರ ಸಂರಕ್ಷಣೆಯಲ್ಲಿ ತೊಡಗಿರುವ ಬೆಂಗಳೂರು ಮೂಲದ ಸರ್ಕಾರೇತರ ಸಂಸ್ಥೆ 'ರಿಫಾರೆಸ್ಟ್ ಇಂಡಿಯಾ', ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ದಾನಿಗಳನ್ನು ಸಂಪರ್ಕಿಸಿ ಸಂಕಷ್ಟದಲ್ಲಿರುವವರಿಗೆ ನೆರವು ದೊರಕಿಸಿಕೊಡುವ ಕಾರ್ಯ ಕೈಗೊಂಡಿದೆ.

ಕೋವಿಡ್ ಮೊದಲನೇ ಅಲೆಯ ಸಂದರ್ಭದಲ್ಲಿ ಹಲವು ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಸಂಪರ್ಕಿಸಿ ರೇಷನ್ ಮತ್ತು ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ತೃತೀಯ ಲಿಂಗಿಗಳಿಗೆ, ವಲಸೆ ಕಾರ್ಮಿಕರಿಗೆ, ಕರ್ನಾಟಕ ಮತ್ತು ತಮಿಳುನಾಡಿನ ರೈತರಿಗೆ, ಅರಣ್ಯ ಸಿಬ್ಬಂದಿಗೆ, ಕ್ಯಾನ್ಸರ್ ರೋಗಿಗಳಿಗೆ, ಪೌರಕಾರ್ಮಿಕರಿಗೆ ಮತ್ತಿತರರಿಗೆ ನೀಡಿದೆ. ಜತೆಗೆ, ಜಾಗೃತಿ ಶಿಬಿರಗಳನ್ನು ಆಯೋಜಿಸಿದೆ. ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಮಾನಸಿಕ ಪುನರ್ವಸತಿ ಕೇಂದ್ರ, ವೃದ್ಧಾಶ್ರಮಗಳಿಗೆ ಮತ್ತು ಅಂಧ ಸಂಗೀತಗಾರರಿಗೆ, ಕ್ಯಾನ್ಸರ್ ರೋಗಿಗಳಿಗೆ ಹಾಗೂ ಮನೆ ಕೆಲಸಗಾರರಿಗೆ ರೇಷನ್ ಕಿಟ್‌ಗಳನ್ನು ಒದಗಿಸಿದೆ.

ಈಗ, ಕೋವಿಡ್‌ನಿಂದ ಸಂಕಷ್ಟಕ್ಕೆ ಒಳಗಾಗಿರುವ ಗ್ರಾಮೀಣ ಪ್ರದೇಶದ ಜನರಿಗೆ ನೆರವು ನೀಡಲು ಈ ಸಂಸ್ಥೆ ಉದ್ದೇಶಿಸಿದೆ. ತೋಟಗಾರಿಕೆಯಂಥ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯಹಸ್ತ ಚಾಚುವ ಮೂಲಕ ಮತ್ತೆ ಬದುಕು ಕಟ್ಟಿಕೊಳ್ಳುವಂತೆ ಮಾರ್ಗದರ್ಶನ ಮಾಡುವ ಯೋಜನೆ ಇದೆ.

ಆಶಾ ಕಿರಣ ಸೇವಾ ಟ್ರಸ್ಟ್

ಬೆಂಗಳೂರಿನಲ್ಲಿ ಆರೋಗ್ಯ, ಶಿಕ್ಷಣ, ಅಂಗವಿಕಲರ ಕಲ್ಯಾಣ ಮತ್ತು ಮಹಿಳೆಯರ ಸಬಲೀಕರಣ ಕಾರ್ಯದಲ್ಲಿ ಆಶಾ ಕಿರಣ ಸೇವಾ ಟ್ರಸ್ಟ್ ತೊಡಗಿಸಿಕೊಂಡಿದೆ.

ರೇಷನ್ ಕಿಟ್‌ಗಳು, ಮಾಸ್ಕ್‌ಗಳು, ತರಕಾರಿ ಮತ್ತಿತರ ವಸ್ತುಗಳನ್ನು ಈ ಸಂಸ್ಥೆ ಸಂಕಷ್ಟದಲ್ಲಿರುವವರಿಗೆ ನೀಡಿದೆ. ಈ ಸಂಸ್ಥೆಯ ಕಾರ್ಯಕರ್ತರು ಕೊಳೆಗೇರಿ ಪ್ರದೇಶಕ್ಕೆ ತೆರಳಿ ಕೋವಿಡ್ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಸಾಂಕ್ರಾಮಿಕ ರೋಗದಿಂದ ಉದ್ಯೋಗ ಕಳೆದುಕೊಂಡವರಿಗೂ ಈ ಸಂಸ್ಥೆ ನೆರವಾಗುತ್ತಿದೆ.

ಮುಂದಿನ ಎರಡು ತಿಂಗಳಲ್ಲಿ ಗಾರ್ಮೆಂಟ್ ಮತ್ತು ಕಟ್ಟಡ ಕಾರ್ಮಿಕರು ಸೇರಿದಂತೆ ಸಂಕಷ್ಟದಲ್ಲಿರುವವರಿಗೆ ರೇಷನ್ ಕಿಟ್‌ಗಳನ್ನು ಒದಗಿಸುವುದು ಸೇರಿದಂತೆ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಈ ಸಂಸ್ಥೆ ಉದ್ದೇಶಿಸಿದೆ. ಜತೆಗೆ, ಮಕ್ಕಳಿಗೆ ಅಗತ್ಯ ಇರುವ ಪೌಷ್ಟಿಕ ಆಹಾರವನ್ನು ಒದಗಿಸುವ ಯೋಜನೆ ರೂಪಿಸಲು ನಿರ್ಧರಿಸಿದೆ.

ಹೆಡ್‌ಸ್ಟ್ರೀಮ್ಸ್

ಕಳೆದ 12 ವರ್ಷಗಳಿಂದ ರಾಜ್ಯದಲ್ಲಿ 'ಹೆಡ್‌ಸ್ಟ್ರೀಮ್ಸ್' ಸಂಸ್ಥೆ ಜೀವನೋಪಾಯದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಕೋವಿಡ್ ಮೊದಲನೇ ಅಲೆಯ ಸಂದರ್ಭದಲ್ಲಿ 87 ಹಳ್ಳಿಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸುಮಾರು 5,000 ಜನರಿಗೆ ಈ ಸಂಸ್ಥೆ ನೆರವಾಗಿದೆ.

ಸುಮಾರು 3,000 ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಮತ್ತು ಗ್ರಾಮೀಣ ಪ್ರದೇಶದ ಇತರ ಮಕ್ಕಳಿಗೆ ಕಲಿಕೆ ಮತ್ತು ಆಟದ ಸಾಮಗ್ರಿಗಳನ್ನು ಈ ಸಂಸ್ಥೆ ನೀಡಿದೆ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಸಮುದಾಯ ಶಿಕ್ಷಣ ಸ್ವಯಂ ಸೇವಕರಿಗೆ ತರಬೇತಿ ನೀಡಿ ಸಜ್ಜುಗೊಳಿಸಿದೆ.

ಸಾಂಕ್ರಾಮಿಕ ರೋಗದಿಂದ ಗಾರ್ಮೆಂಟ್ ಕಾರ್ಖಾನೆಗಳು, ಕಲ್ಲು ಗಣಿಗಾರಿಕೆ, ಇಟ್ಟಿಗೆ ತಯಾರಿಸುವ ಘಟಕಗಳು ಮತ್ತು ನೀಲಗಿರಿ ಪ್ಲಾಂಟೇಷನ್‌ಗಳಲ್ಲಿ ಕೆಲಸ ಕಳೆದುಕೊಂಡ ಮಹಿಳೆಯರಿಗೆ ನೆರವಾಗಲು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ಕೌಶಲ ಅಭಿವೃದ್ಧಿ ಕೇಂದ್ರವನ್ನು 'ಹೆಡ್‌ಸ್ಟ್ರೀಮ್ಸ್' ಸ್ಥಾಪಿಸಲಿದೆ. ಜೇಡಿಮಣ್ಣು ಸೇರಿದಂತೆ ನೈಸರ್ಗಿಕವಾಗಿ ದೊರೆಯುವ ವಸ್ತುಗಳನ್ನು ಬಳಸಿಕೊಂಡು ಉನ್ನತ ಮಟ್ಟದ ಕರಕುಶಲ ವಸ್ತುಗಳನ್ನು ತಯಾರಿಸಲು ಮತ್ತು ಮಾರಾಟ ಮಾಡಲು ಮಹಿಳೆಯರಿಗೆ ತರಬೇತಿ ನೀಡಲು ಈ ಸಂಸ್ಥೆ ಉದ್ದೇಶಿಸಿದೆ. ಗ್ರಾಮ ಪಂಚಾಯಿತಿಗಳ ನೆರವಿನಿಂದ ಇದೇ ರೀತಿಯ ತರಬೇತಿ ಕೇಂದ್ರಗಳನ್ನು ಇತರ ಗ್ರಾಮಗಳಲ್ಲಿಯೂ ತೆರೆಯಲು ಉದ್ದೇಶಿಸಿದೆ.

ಲೆಟ್ಸ್ ಬಿ ದಿ ಚೇಂಜ್

ಯುವ ಸ್ವಯಂ ಸೇವಕರನ್ನು ಒಳಗೊಂಡಿರುವ 'ಲೆಟ್ಸ್ ಬಿ ದಿ ಚೇಂಜ್' ಸಂಸ್ಥೆಯು 'ಕ್ಲೀನ್ ಬೆಂಗಳೂರು' ಉದ್ದೇಶದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಕಳೆದ ವರ್ಷ ಕೋವಿಡ್ ಪರಿಹಾರ ಯೋಜನೆಯ ಭಾಗವಾಗಿ ಸುಮಾರು 500 ಕುಟುಂಬಗಳಿಗೆ ಈ ಸಂಸ್ಥೆ ನೆರವಾಗಿತ್ತು.

ಈ ವರ್ಷ ಮೇ ತಿಂಗಳಲ್ಲಿ ದಕ್ಷಿಣ ಬೆಂಗಳೂರಿನಲ್ಲಿನ ಸುಮಾರು 10,000 ಕುಟುಂಬಗಳಲ್ಲಿನ ರೋಗಿಗಳು ಗುಣಮುಖರಾಗುವವರೆಗೂ ಈ ಸಂಸ್ಥೆ ನೆರವು ನೀಡಿದೆ. ಜತೆಗೆ, ಕುಟುಂಬಗಳ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಸಮೀಕ್ಷೆಯನ್ನು ಸಹ ನಡೆಸಿದೆ. ಉಚಿತವಾಗಿ ಕೋವಿಡ್ ಪರೀಕ್ಷೆ ಮತ್ತು ಲಸಿಕಾ ಅಭಿಯಾನವನ್ನು ಸಹ ಈ ಸಂಸ್ಥೆ ಕೈಗೊಂಡಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಾನವ ಸಂಪನ್ಮೂಲಗಳು ಮತ್ತು ಅಗತ್ಯ ಇರುವ ವಸ್ತುಗಳನ್ನು ಈ ಸಂಸ್ಥೆ ಒದಗಿಸಿದೆ.

ಮುಂದಿನ ಒಂದು ವರ್ಷ 'ವಿ ಸ್ಟ್ಯಾಂಡ್ ಟುಗೆದರ್' ಎನ್ನುವ ಅಭಿಯಾನ ಆರಂಭಿಸಿರುವ ಈ ಸಂಸ್ಥೆಯು, ಸಹಾಯವಾಣಿ ಮೂಲಕ ರೋಗಿಗಳಿಗೆ ತುರ್ತು ಪರಿಸ್ಥಿತಿಯಲ್ಲಿ ಆಮ್ಲಜನಕ ಒದಗಿಸಲು ಮತ್ತು ಇತರ ವೈದ್ಯಕೀಯ ನೆರವು ನೀಡಲು (ಬೆಡ್ ಕಾಯ್ದಿರಿಸುವುದು, ವೈದ್ಯರ ಸಮಾಲೋಚನೆ ಇತ್ಯಾದಿ) ಉದ್ದೇಶಿಸಿದೆ.

ಭವಿಷ್ಯದಲ್ಲಿಯೂ, ದಕ್ಷಿಣ ಬೆಂಗಳೂರಿನ ಸರ್ಕಾರಿ ಆಸ್ಪತ್ರೆಗಳಲ್ಲಿನ ಮೂಲಸೌಕರ್ಯಗಳನ್ನು ಹೆಚ್ಚಿಸಲು ಮತ್ತು ಆಮ್ಲಜನಕ ಮರುಭರ್ತಿ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ ನೆರವು ನೀಡುವ ಯೋಜನೆಯನ್ನು ಸಂಸ್ಥೆ ಹೊಂದಿದೆ.

ಸ್ನೇಹಾ(ಎಸ್‌ಎನ್‌ಇಎಚ್‌ಎ)–ಸೊಸೈಟಿ ಫಾರ್ ಇಂಟೆಗ್ರೇಟೆಡ್ ಕಮ್ಯೂನಿಟಿ ಡೆವಲಪ್‌ಮೆಂಟ್

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯ ಮೂಲದ ಸೊಸೈಟಿ ಫಾರ್ ಇಂಟೆಗ್ರೇಟೆಡ್ ಕಮ್ಯೂನಿಟಿ ಡೆವಲಪ್‌ಮೆಂಟ್ – 'ಸ್ನೇಹಾ'(ಎಸ್‌ಎನ್‌ಇಎಚ್‌ಎ) ಸಂಸ್ಥೆಯು 1994ರಿಂದ ದೇವದಾಸಿ ಕುಟುಂಬಗಳ ಸಬಲೀಕರಣ ಕಾರ್ಯದಲ್ಲಿ ತೊಡಗಿದೆ. ಗ್ರಾಮೀಣ ಸಮುದಾಯಗಳ ಸಾಮರ್ಥ್ಯ ವೃದ್ಧಿಗೆ ಶ್ರಮಿಸುತ್ತಿರುವ ಈ ಸಂಸ್ಥೆಯು, ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳ ಅಭಿವೃದ್ಧಿಯ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

ಕೋವಿಡ್ ಹಬ್ಬಿದ ಬಳಿಕ, ವಿವಿಧ ರೀತಿಯಲ್ಲಿ ದೇವದಾಸಿ ಕುಟುಂಬಗಳಿಗೆ ಈ ಸಂಸ್ಥೆ ನೆರವಾಗುತ್ತಿದೆ. ಕೋವಿಡ್–19 ಮತ್ತು ಲಸಿಕೆ ಬಗ್ಗೆ ಜಾಗೃತಿ ಮೂಡಿಸಿದ್ದು, 1,000 ಕುಟುಂಬಗಳಿಗೆ ರೇಷನ್ ಕಿಟ್‌ಗಳನ್ನು ಒದಗಿಸಿದೆ. ಎರಡು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಕೋವಿಡ್ ಆರೈಕೆ ಕೇಂದ್ರಗಳಿಗೆ ನೆರವಾಗಿದೆ. ಜತೆಗೆ, ದಾವಣಗೆರೆ ಜಿಲ್ಲೆಯ ಕೋವಿಡ್ ಆರೈಕೆ ಕೇಂದ್ರಕ್ಕೂ ನೆರವು ನೀಡಿದೆ.

ಸಾಮಾನ್ಯವಾಗಿ ದೇವದಾಸಿ ಮಹಿಳೆಯರೇ ಕುಟುಂಬದಲ್ಲಿ ಏಕೈಕ ಆದಾಯ ಗಳಿಸುವ ಸದಸ್ಯರಾಗಿರುತ್ತಾರೆ. ಹೀಗಾಗಿ, ಈ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ಕೋವಿಡ್ ಪರಿಹಾರ ಚಟುವಟಿಕೆಗಳ ಮೂಲಕ ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕಿನ 17 ಗ್ರಾಮಗಳಲ್ಲಿನ 1,051 ಕುಟುಂಬಗಳಿಗೆ ನೆರವು ನೀಡಲು 'ಸ್ನೇಹಾ' ಉದ್ದೇಶಿಸಿದೆ.

ಅಲ್ಲಮಾ ಇಕ್ಬಾಲ್ ಎಜುಕೇಷನ್ ಸೊಸೈಟಿ

ಬೀದರ್‌ನ ಅಲ್ಲಮಾ ಇಕ್ಬಾಲ್ ಎಜುಕೇಷನ್ ಸೊಸೈಟಿಯ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹವು 2020ರಿಂದ ಕೋವಿಡ್ ವಿರುದ್ಧದ ಹೋರಾಟದಲ್ಲಿ ವಿವಿಧ ರೀತಿಯಲ್ಲಿ ಪಾಲ್ಗೊಂಡಿದೆ.

ಮೊದಲ ಅಲೆಯ ಸಂದರ್ಭದಲ್ಲಿ ಸಂಸ್ಥೆಯ ಕಟ್ಟಡವನ್ನು ಕೋವಿಡ್ ಆರೈಕೆ ಕೇಂದ್ರಕ್ಕೆ ಜಿಲ್ಲಾಡಳಿತಕ್ಕೆ ನೀಡಿತ್ತು. ಜತೆಗೆ 10 ವಾಹನಗಳನ್ನು ಕೋವಿಡ್ ಕುರಿತು ಜಾಗೃತಿ ಮೂಡಿಸಲು ನೀಡಿತ್ತು. ಮೊದಲನೇ ಅಲೆಯ ಸಂದರ್ಭದಲ್ಲಿ ಸುಮಾರು 6,000 ಕುಟುಂಬಗಳಿಗೆ ರೇಷನ್ ಕಿಟ್‌ಗಳನ್ನು ನೀಡಲಾಗಿತ್ತು. ಎರಡನೇ ಅಲೆಯ ಸಂದರ್ಭದಲ್ಲಿ ಪ್ರತಿದಿನ 1,000 ಬಡಜನರಿಗೆ ಮತ್ತು ಹೋಮ್ ಕ್ವಾರಂಟೈನ್‌ಗೆ ಒಳಗಾದವರಿಗೆ ಆಹಾರ ವಿತರಿಸಿತ್ತು.

ಉಚಿತ ಆಂಬುಲೆನ್ಸ್ ಸೇವೆ ಮತ್ತು ಅಂತ್ಯಕ್ರಿಯೆಗೆ ನೆರವು ನೀಡುವ ಜತೆಗೆ, ಆಮ್ಲಜನಕ ವ್ಯವಸ್ಥೆ ಹೊಂದಿರುವ 30 ಹಾಸಿಗೆಗಳ ಆಸ್ಪತ್ರೆಯನ್ನು ಸ್ಥಾಪಿಸಿದೆ. ರೋಗಿಗಳಿಗೆ ಆನ್‌ಲೈನ್ ಮೂಲಕ ವೈದ್ಯಕೀಯ ಸಲಹೆ ನೀಡಲು 30 ವೈದ್ಯರ ತಂಡವನ್ನು ಸಂಸ್ಥೆ ರಚಿಸಿದೆ. ಬೀದರ್‌ನಲ್ಲಿ ಎರಡು 300 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರಗಳನ್ನು ನಿರ್ವಹಿಸಲು ಜಿಲ್ಲಾಡಳಿತಕ್ಕೆ ಸಂಸ್ಥೆ ನೆರವಾಗಿದೆ. ಜತೆಗೆ ಸಹಾಯವಾಣಿಯನ್ನು ನಿರ್ವಹಿಸುತ್ತಿದೆ.

ಯುವಲೋಕ ಫೌಂಡೇಷನ್

ಬೆಂಗಳೂರಿನ ಯುವಲೋಕ ಫೌಂಡೇಷನ್ ಕೋವಿಡ್–19 ಹಬ್ಬಿದ ದಿನದಿಂದಲೂ ಆರೋಗ್ಯ ರಕ್ಷಣೆ ಕಾರ್ಯಕರ್ತರು, ಭದ್ರತಾ ಸಿಬ್ಬಂದಿ, ಆಟೊ ಚಾಲಕರು, ವಲಸೆ ಕಾರ್ಮಿಕರು, ರೈತರು, ತೃತೀಯ ಲಿಂಗಿಗಳು, ಶಿಕ್ಷಕರು, ಸ್ಮಶಾನದಲ್ಲಿ ಶವ ಹೂಳುವವರು, ಅಂಗವಿಕಲರು, ದಿನಗೂಲಿ ಕಾರ್ಮಿಕರು ಮತ್ತಿತರರಿಗೆ ನೆರವು ನೀಡುತ್ತಿದೆ.

10,000 ರೇಷನ್ ಕಿಟ್‌ಗಳನ್ನು ಈ ಸಂಸ್ಥೆ ವಿತರಿಸಿದೆ. ಮೂರು ತಿಂಗಳ ಕಾಲ ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಊಟ ವಿತರಿಸಿದೆ. ಶುಲ್ಕ ಪಾವತಿಸಲು ಸಾಧ್ಯವಾಗದ ಕಾಲೇಜು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು ನೀಡಿದೆ. ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಲು ಹೊಲಿಗೆ ಯಂತ್ರಗಳನ್ನು ನೀಡಿದೆ. ಬಡವರಿಗೆ ವೈದ್ಯಕೀಯ ನೆರವು ನೀಡಲು ಸಹಾಯಹಸ್ತ ಚಾಚಿದೆ.

ಎರಡನೇ ಅಲೆಯ ಸಂದರ್ಭದಲ್ಲಿ ಯುವಲೋಕ ಸಂಸ್ಥೆಯು ಸಂಕಷ್ಟದಲ್ಲಿರುವ ಬೀದಿ ವ್ಯಾಪಾರಿಗಳಿಗೆ ಪರಿಹಾರ ಒದಗಿಸುವ ಕೈಂಕರ್ಯದಲ್ಲಿ ತೊಡಗಿದೆ. ಜತೆಗೆ, ಕೋವಿಡ್ ರೋಗಿಗಳಿಂದ ಬರುವ ಕರೆಗಳನ್ನು ಸ್ವೀಕರಿಸಿ ಅಗತ್ಯ ನೆರವು ನೀಡುತ್ತಿದೆ.

ದುರ್ಬಲ ವರ್ಗದ ಕುಟುಂಬಗಳಿಗೆ, ನಿರುದ್ಯೋಗಿ ಬಡವರು, ವಲಸೆ ಕಾರ್ಮಿಕರಿಗೆ ನೀಡಲು ಸಂಸ್ಥೆ ಉದ್ದೇಶಿಸಿದೆ. ಜತೆಗೆ, ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಪೌಷ್ಟಿಕ ಆಹಾರ ಪೂರೈಸಲು ಉದ್ದೇಶಿಸಿದೆ.

ಗ್ರಾಮ ವಿಕಾಸ

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಗ್ರಾಮ ವಿಕಾಸ ಸಂಸ್ಥೆಯು ಗ್ರಾಮೀಣ ಪ್ರದೇಶದಲ್ಲಿ ತನ್ನ ಚಟುವಟಿಕೆಗಳನ್ನು ಕೈಗೊಂಡಿದೆ. ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿದೆ.

ಕೋವಿಡ್–19 ಮೊದಲ ಅಲೆಯಲ್ಲಿ ಆಹಾರ ಕಿಟ್‌ಗಳು ಹಾಗೂ ಚಿಕಿತ್ಸೆಗಾಗಿ ಹಳ್ಳಿಗಳಿಂದ ಹೊರಗೆ ಹೋಗಲು ಸಾಧ್ಯವಾಗದ ಕೋವಿಡ್‌ಯೇತರ ರೋಗಿಗಳಿಗೆ ಔಷಧವನ್ನು ಪೂರೈಸಿತ್ತು.

ಈಗ, ದೇವರಾಯಸಮುದ್ರದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮತ್ತು ಮುಳಬಾಗಿಲಿನ ಕೋವಿಡ್ ಆರೈಕೆ ಕೇಂದ್ರಕ್ಕೆ ನೆರವು ನೀಡಲು ಸಂಸ್ಥೆ ಉದ್ದೇಶಿಸಿದೆ. ಆಕ್ಸಿಮೀಟರ್, ಥರ್ಮಾಮೀಟರ್, ಗಾಲಿ ಕುರ್ಚಿಗಳು ಮುಂತಾದ ಅಗತ್ಯ ಇರುವ ಉಪಕರಣಗಳನ್ನು ಈ ಕೇಂದ್ರಗಳಿಗೆ ನೀಡಲು ಉದ್ದೇಶಿಸಿದೆ.

ಆಶಾ ಕಾರ್ಯಕರ್ತರಿಗೆ, ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಕೋವಿಡ್–19 ನಿಯಂತ್ರಣ ಕಾರ್ಯದಲ್ಲಿ ತೊಡಗಿರುವ ಯೂಥ್ ಕ್ಲಬ್‌ನ ಸದಸ್ಯರಿಗೆ ಪಿಪಿಇ ಕಿಟ್‌ಗಳು, ಫೇಸ್‌ಶೀಲ್ಡ್‌ಗಳು, ಮಾಸ್ಕ್‌ಗಳು, ಸ್ಯಾನಿಟೈಸರ್ ಮತ್ತಿತರ ವಸ್ತುಗಳನ್ನು ನೀಡುವುದಾಗಿ ಸಂಸ್ಥೆ ತಿಳಿಸಿದೆ. ಜತೆಗೆ, ಅತ್ಯಂತ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳಿಗೆ ಆಹಾರದ ಕಿಟ್‌ಗಳನ್ನು ನೀಡಲು ಉದ್ದೇಶಿಸಿದೆ.

ಕೃತಜ್ಞತಾ ಟ್ರಸ್ಟ್

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ಶ್ರಮಿಸುತ್ತಿರುವ ಬೆಂಗಳೂರಿನ ಕೃತಜ್ಞತಾ ಟ್ರಸ್ಟ್ ಕೋವಿಡ್ ಸಮಯದಲ್ಲಿ ಹಲವರಿಗೆ ನೆರವು ನೀಡಿದೆ.

ಕೋವಿಡ್‌ನಿಂದಾಗಿ ಉದ್ಯೋಗ ಕಳೆದುಕೊಂಡ ಬಡವರಿಗೆ ಮತ್ತು ಆಹಾರದಿಂದ ವಂಚಿತರಾದವರಿಗೆ ಐಸೋಲೇಷನ್ ಕಿಟ್ ಮತ್ತು ದಿನಸಿ ಕಿಟ್‌ಗಳನ್ನು ಒದಗಿಸುವ ಕೆಲಸವನ್ನು ಸಂಸ್ಥೆ ಮಾಡುತ್ತಿದೆ.

ಸಂಪನ್ಮೂಲಗಳ ಕೊರತೆಯಿರುವ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ (ಕೊಡಗು ಮತ್ತು ಮೈಸೂರು ಜಿಲ್ಲೆಗಳು) ಸೇವೆ ಸಲ್ಲಿಸುತ್ತಿರುವ ಕೃತಜ್ಞತಾ ಟ್ರಸ್ಟ್ 1,500ಕ್ಕೂ ಹೆಚ್ಚು ಕೋವಿಡ್ ರೋಗಿಗಳಿಗೆ ವೈದ್ಯಕೀಯ ಕಿಟ್ ಮತ್ತು 400ಕ್ಕೂ ಹೆಚ್ಚು ಕುಟುಂಬಗಳಿಗೆ ದಿನಸಿ ಸಾಮಗ್ರಿಗಳನ್ನು ವಿತರಿಸಿದೆ. ಇದರ ಜೊತೆಗೆ ತೃತೀಯ ಲಿಂಗಿಗಳಿಗೆ ಲಸಿಕಾ ಅಭಿಯಾನವನ್ನು ಆಯೋಜಿಸಿದೆ ಮತ್ತು ದಿನಸಿ ಕಿಟ್‌ಗಳನ್ನು ವಿತರಿಸಿದೆ.

ದಿನಗೂಲಿ ಕಾರ್ಮಿಕರಿಗೆ ನೆರವು ನೀಡುವ ಜೊತೆಗೆ ಜಾಗೃತಿ ಅಭಿಯಾನವನ್ನು ಆಯೋಜಿಸಲು ಸಂಸ್ಥೆ ಯೋಜನೆ ಸಿದ್ಧಪಡಿಸಿದೆ.

ಕಟ್ಟಡ ಕಾರ್ಮಿಕರು ಮತ್ತು ಅಗತ್ಯ ವಸ್ತುಗಳ ಕೊರತೆ ಎದುರಿಸುತ್ತಿರುವವರಿಗೆ ದಿನಸಿ ಸಾಮಗ್ರಿ ಒದಗಿಸಲು ಮುಂದಾಗಿದೆ. ಆರ್ಥಿಕ ನಷ್ಟದಿಂದಾಗಿ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಅವರು ವಿದ್ಯಾರ್ಥಿ ವೇತನವನ್ನು ಸಹ ನೀಡುತ್ತಿದ್ದಾರೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ


ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಎಂ.ವಿರೂಪಾಕ್ಷಪ್ಪ**, ಓಬವ್ವನಾಗತಿಹಳ್ಳಿ, ಆಲಘಟ್ಟ ಪೋಸ್ಟ್, ಚಿತ್ರದುರ್ಗ	50,100
2	**ಛಾಯಾಕುಮಾರಿ ಎಂ.ವಿ.**, ನಂ. 149, 4ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬನಶಂಕರಿ ಮೊದಲ ಹಂತ, ಬೆಂಗಳೂರು	25,000
3	**ಡಾ.ಟಿ.ಎಸ್.ವೀರಪ್ಪ**, ನಂ. 835, 16ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು	25,000
4	**ಜಿ.ಸುಬ್ರಮಣಿಯನ್**, ನಂ. 182, ತುಳಸಿ ನಿಲಯಂ, 1ನೇ ಹಂತ, 1ನೇ ಅಡ್ಡರಸ್ತೆ, ಅರಕೆರೆ ಮೈಕೊ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು	25000
5	**ವಿಜೇಂದ್ರ ಗೋವಿಂದರಾವ್**, ನಂ.317, 5ನೇ ಮೇನ್, 2ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು	20,000
6	**ಮುತ್ತಹನುಮಯ್ಯ** (ಬಿಎಚ್‌ಇಎಲ್ ಇಪಿಡಿ), ನಂ.146, ವಾಜಪೇಯಿ ಲೇಔಟ್, ಹುರುಳಿಚಿಕ್ಕನಹಳ್ಳಿ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು	20,000
7	**ಪಿ.ಆರ್.ವಿಶ್ವನಾಥ್**, ಬೆಂಗಳೂರು	15,000
8	**ಎಂ.ಎನ್.ಚಂದ್ರಮೋಹನ್**, ನಂ.359, 3ನೇ ಅಡ್ಡರಸ್ತೆ, ಒಂದನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು	10,001
9	**ಜಾನಕಿ ಎಸ್.**, ನಂ.389, 19ನೇ ಎಚ್ ಮುಖ್ಯರಸ್ತೆ, 1ನೇ ಎನ್ ಬ್ಲಾಕ್, ರಾಜಾಜಿನಗರ, ಬೆಂಗಳೂರು	10,000
10	**ವೆಂಕಟೇಶಯ್ಯ ವಿ.**, ನಂ.15, 2ನೇ ಮುಖ್ಯರಸ್ತೆ, ಕೆಎಸ್‌ಆರ್‌ಟಿಸಿ ಲೇಔಟ್, ಎರಡನೇ ಹಂತ, ಜೆ.ಪಿ.ನಗರ, ಬೆಂಗಳೂರು	10,000
11	**ರಾಜಾ ಶಿವರಾಮಯ್ಯ ಸೆಟ್ಟಿ ಪಾರ್ವತಮ್ಮ ಧರ್ಮಶಾಲಾ ಟ್ರಸ್ಟ್**, ನಂ. 484/ಬಿ, 38ನೇ ಕ್ರಾಸ್, ಒಂದನೇ ಮುಖ್ಯರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು	10,000
12	**ಮಧುಸೂದನ**, ಬೆಂಗಳೂರು	10,000
13	**ಡಾ.ಪಂಚಾಕ್ಷರಪ್ಪ ವಿ.ಮರಗಿ**, 6ನೇ ಕ್ರಾಸ್, ಪಂಚಾಕ್ಷರಿನಗರ, ಗದಗ	10,000
14	**ಕೆ.ಸೀತಾರಾಮ**, ಶ್ರೀಸ್ತಂಭಜ, ಎಸ್‌ಬಿಐ ಹಿಂಭಾಗ, ವಿನೋಬಾನಗರ, ಶಿವಮೊಗ್ಗ	5,555
15	**ಸಿ.ಸುಬ್ಬರಾವ್**, 64&65, 3ನೇ ಅಡ್ಡರಸ್ತೆ, ರಾಯಲ್ ರೆಸಿಡೆನ್ಸಿ ಲೇಔಟ್, ಬಿಟಿಎಂ 4ನೇ ಹಂತ, ಸಾಯಿಬಾಬಾ ದೇವಸ್ಥಾನದ ಸಮೀಪ, ಬೆಂಗಳೂರು	5,500
16	**ಶೈಲಜಾ ರವಿ**, 95, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು	5,000
17	**ಶ್ರೀನಿವಾಸ ಸಿ.ವಿ.**, 45, 5ನೇ ಮುಖ್ಯರಸ್ತೆ, ಬೃಂದಾವನ ಎಕ್ಸ್‌ಟೆನ್ಷನ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು	5,000
18	**ವಿಘ್ನೇಶ್ ಪಿ.**, ಬೆಂಗಳೂರು	5,000
19	**ಯಶಸ್ವಿನಿ ವಿ.ರಾವ್**, ಬೆಂಗಳೂರು	5,000
20	**ಶಿವಕುಮಾರ್ ಎಂ.ಸಿ.**, ಅಂಬೇಡ್ಕರ್ ಬಡಾವಣೆ, ಟಿ.ಎಚ್.ರಸ್ತೆ, ಅಜ್ಜಂಪುರ, ಚಿಕ್ಕಮಗಳೂರು ಜಿಲ್ಲೆ	5,000
21	**ಜಿ.ರಾಜನ್**, 540, ಶ್ರೀನಿವಾಸ, 7ನೇ ಅಡ್ಡರಸ್ತೆ, 1ನೇ ಲಿಂಕ್, ಎಸ್‌ಐಟಿ, ತುಮಕೂರು	5,000
22	**ನಮಿತಾ ಎಂ.ಎಸ್**, 465, 2 ಸಿ ಮುಖ್ಯರಸ್ತೆ, 11ನೇ ಬ್ಲಾಕ್, ನಾಗರಬಾವಿ 2ನೇ ಹಂತ, ಬೆಂಗಳೂರು	5,000
23	**ಕೆ.ಜಿ.ನಾಗರಾಜ್**, 4, 2ನೇ ಮಹಡಿ, ಲಕ್ಷ್ಮಣಪ್ಪ ನಗರ, ಲೊಟ್ಟೆಗೊಲ್ಲಹಳ್ಳಿ, ಆರ್.ಎಂ.ವಿ 2ನೇ ಹಂತ, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು	5,000
24	**ನಾಗಮಣಿ ಬಿ.ಎಚ್**, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು	5,000
25	**ಎಂ.ದೇವೇಂದ್ರ ಬಾಬು**, 413, ನಾಕುತಂತಿ, 7ನೇ ಮುಖ್ಯರಸ್ತೆ, 3ನೇ ಬ್ಲಾಕ್, ನಾರಾಯಣ ನಗರ, ದೊಡ್ಡಕಲ್ಲಸಂದ್ರ ಪೋಸ್ಟ್, ಕನಕಪುರ ರಸ್ತೆ, ಬೆಂಗಳೂರು	5,000
26	**ಆರ್.ನಾರಾಯಣ**, ಡಿಆರ್‌ಡಿಒ 2ನೇ ಹಂತ, ಬೆಂಗಳೂರು	5,000
27	**ಟಿ.ಕೆ.ಚಿನ್ನಸ್ವಾಮಿ**, ಕೆ.ಆರ್.ನಗರ	5,000
28	**ಎಂ.ಶ್ರೀನಿವಾಸ**, 5, ನ್ಯಾಷನಲ್ ಹೈಸ್ಕೂಲ್ ರಸ್ತೆ, ವಿ.ವಿ.ಪುರಂ, ಬೆಂಗಳೂರು	5,000
29	**ಡಾ.ವಿಜಯ ಗುತ್ತಲ್**, ಗುತ್ತಲ್ ರೆಸಿಡೆನ್ಸ್, ಸಪ್ತಾಪುರ, ಧಾರವಾಡ	5,000
30	**ಶ್ರೀನಿವಾಸ ಶೆಟ್ಟಿ**, ಕೆ.ಆರ್.ನಗರ	3,500
31	**ಧರ್ಮರಾಜ ಕೆ.ಕಲ್ಯಾಣಿ**, ಜಿ–002, ರೆನೆಸ್ ಪಾರ್ಕ್, ಮಿಲ್ಕ್ ಕಾಲೊನಿ, ಮಲ್ಲೇಶ್ವರ ಪಶ್ಚಿಮ, ಬೆಂಗಳೂರು	3,000
32	**ಅದಿತಿ ದತ್ತಾ**, 451, 4ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ಟಾಟಾ ನಗರ, ಬೆಂಗಳೂರು	2,500
33	**ಸುಧಾಕರ್**, ಶ್ರೀಗುರುಕೃಪಾ, ಎಂ.ಜಿ.ಎಂ ಕಾಲೇಜು ಹಿಂಭಾಗ, ಉಡುಪಿ	2,001
34	**ಎಸ್.ವಿ.ವೇದಾಂತ ನರಸಿಂಹನ್**, ನಂ.122/1, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಬಂಡಮ್ಮ ದೇವಸ್ಥಾನದ ಸಮೀಪ, ಟಿ.ಕೆ.ಲೇಔಟ್, ಮೈಸೂರು	2,001
35	**ಬಿ.ವಿ.ಪ್ರಕಾಶ್**, ಜಂಟಿ ಪ್ರಧಾನ ವ್ಯವಸ್ಥಾಪಕ (ನಿವೃತ್ತ), ಕೆಐಒಸಿಎಲ್ ಲಿಮಿಟೆಡ್, ನಂ. 6–76–2 (7ಎ1), ಸಿಂಚನ, ಓಲ್ಡ್ ಪೋಸ್ಟ್ ಆಫೀಸ್ ರಸ್ತೆ, ಸುರತ್ಕಲ್, ಮಂಗಳೂರು	2,001
36	**ಲಯನ್ ಚಿಕ್ಕಸ್ವಾಮಿ**, ಬೆಂಗಳೂರು	2,001
37	**ಮೋಹನ್ ರುದ್ರಪ್ಪ ಹಣಗಿ**, ಲಕ್ಷ್ಮಿನಗರ, ವಾರ್ಡ್ ನಂ. 1, ಅಮೀನಗಡ	2,000
38	**ಪ್ರಮೀಳಾ ಎನ್.ಕೋಟಿ**, w/o ಎನ್.ಕೆ.ಬೀರಬ್ಬಿ, ಮಂಜುನಾಥ ನಗರ, ಎ ಬ್ಲಾಕ್, 1ನೇ ಅಡ್ಡರಸ್ತೆ, ಇಜಾರಿಲಕಮಾಪುರ, ಹಾವೇರಿ	2,000
39	**ಮಾಸ್ತಪ್ಪ ಎನ್.ನಾಯ್ಕ್**, ನಂ. 9, ಡಿ–3 ರಸ್ತೆ, ನ್ಯೂ ಕೆ.ಎಚ್.ಬಿ. ಕಾಲೊನಿ, ಹಬ್ಬುವಾಡ, ಕಾರವಾರ	2,000
40	**ವಿಜಯ ಬಿ.ಪಾಟೀಲ**, ಬೆಂಗಳೂರು	2,000
41	**ಮಂಜುನಾಥ್ ಆರ್**, ನಂ. 957, 1ನೇ ಅಡ್ಡರಸ್ತೆ, ಅಗ್ನಿಹಂಸ ರಸ್ತೆ, ಇ & ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು	2,000
42	**ಸುದೀಪ್ ಎಸ್.ನಾಗರ್**, ನಂ.24, ಲಕ್ಷ್ಮಿನಾರಾಯಣ ನಿಲಯ, 2ನೇ ಬಿ ಮುಖ್ಯರಸ್ತೆ, ಆರ್‌ಎಚ್‌ಸಿಎಸ್ ಲೇಔಟ್, ಅನ್ನಪೂರ್ಣೇಶ್ವರಿ ನಗರ, ಬೆಂಗಳೂರು	1,501
43	**ಬಿ.ಜಗದೀಶ್**, ನಮ್ಮ ಮನೆ, ನಂ. 1/170, 6ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಜ್ಞಾನಜ್ಯೋತಿನಗರ, ಮಲ್ಲತ್ತಹಳ್ಳಿ, ಬೆಂಗಳೂರು	1,501
44	**ಆರ್.ರಾಮಕುಮಾರ್**, ಫ್ಲ್ಯಾಟ್ 203, ಎಸ್.ವಿ.ಆರ್.ಹೈಟ್ಸ್, 4ನೇ ಅಡ್ಡರಸ್ತೆ, 2ನೇ ಹಂತ, ಕಮ್ಮನಹಳ್ಳಿ, ಬೆಂಗಳೂರು	1,,501
45	**ನಾಗೇಂದ್ರ ಆರ್.ಕಗದಗರ್**, ಆಡಳಿತಾಧಿಕಾರಿ, ಎಲ್.ಐ.ಸಿ.ಆಫ್ ಇಂಡಿಯಾ, ಸ್ಯಾಟಲೈಟ್ ಆಫೀಸ್, ಜಗಳೂರು ತಾಲ್ಲೂಕು, ದಾವಣಗೆರೆ	1,019
46	**ಚೇತನಾ ಎಂ.ಎಸ್**, d/o ಎಂ.ಬಿ.ಶಂಕರ್, ಡಿವಿಎಸ್ ಕಾಲೊನಿ, ಜೆಎನ್‌ಎನ್‌ಸಿಇ ಹಿಂಭಾಗ, ನವುಲೆ, ಶಿವಮೊಗ್ಗ	1,001
47	**ಪೂಜಾ ಪ್ರವೀಣ್ ಬರದವಾಡ್**, ನಂ. 128, 16ನೇ ಮುಖ್ಯರಸ್ತೆ, ಮುರಾರ್ಜಿ ನಗರ, ಗೋಕುಲ್ ರಸ್ತೆ, ಹುಬ್ಬಳ್ಳಿ	1,001
48	**ಗೋವಿಂದನ್ ಟಿ.ವಿ.**, 876, 2ನೇ ಹಂತ, 2ನೇ ಮುಖ್ಯರಸ್ತೆ, ಡಿ ಬ್ಲಾಕ್, ರಾಜಾಜಿನಗರ, ಬೆಂಗಳೂರು	1,001
49	**ಮೊನಿತಾ ಎಂ.ಜಿ**, 103, ನ್ಯಾಷನಲ್ ಲೇಔಟ್, ಬೆಂಗಳೂರು	1,001
50	**ಆರರ್.ಮರಿಯಪ್ಪನ್**, ಹಾಸ್ಟೆಲ್ ವಾರ್ಡನ್, ರಾಜರಾಜೇಶ್ವರಿ ಕಾಲೇಜ್ ಆಫ್ ಎಂಜಿನಿಯರಿಂಗ್, ಬೆಂಗಳೂರು	1,000
51	**ಆರ್. ಚನ್ನಮ್ಮ**, ಮೈಸೂರು ಕೆಫೆ ಹಿಂಭಾಗ, ದೊಡ್ಡಪೇಟೆ, ಚಿತ್ರದುರ್ಗ	1,000

ಹೂಡಿಕೆಯಲ್ಲಾಗುವ ಸಾಮಾನ್ಯ ತಪ್ಪುಗಳು



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.



ಹೂಡಿಕೆಯಲ್ಲಿ ಆಗುವ ತಪ್ಪುಗಳನ್ನು ಕಡಿಮೆ ಮಾಡಿಕೊಳ್ಳಲು ಎರಡು ಮಾರ್ಗಗಳಿವೆ. ಒಂದನೆಯದು, ನಾವೇ ತಪ್ಪು ಮಾಡಿ, ಹಣ ನಷ್ಟ ಮಾಡಿಕೊಂಡು ಅದರಿಂದ ಪಾಠ ಕಲಿಯುವುದು! ಎರಡನೆಯದು, ಬೇರೆಯವರು ಮಾಡಿದ ತಪ್ಪುಗಳನ್ನು ನೋಡಿ ಪಾಠ ಕಲಿಯುವುದು. ಹೋಲಿಕೆ ಮಾಡಿ ನೋಡಿದಾಗ ಎರಡನೆಯ ಹಾದಿಯೇ ಲೇಸು ಅಂತ ನಿಮಗೆ ಅನಿಸಿರಬೇಕಲ್ಲವೇ? ಹಾಗಾದರೆ ಬನ್ನಿ, ಹೂಡಿಕೆಯಲ್ಲಿ ಆಗುವ ಸಾಮಾನ್ಯ ತಪ್ಪುಗಳ ಬಗ್ಗೆ ಅರಿಯೋಣ, ಜಾಗೃತರಾಗೋಣ.

ಅತ್ಯಗತ್ಯದ ಹಣ ಷೇರುಗಳಲ್ಲಿ ತೊಡಗಿಸುವುದು: ದಿಢೀರ್ ಶ್ರೀಮಂತರಾಗುವ ಕನಸಿಗೆ ಬಿದ್ದು ಮಕ್ಕಳ ಶಾಲೆ ಶುಲ್ಕ, ಸಾಲ ಮರುಪಾವತಿಗೆ ಮೀಸಲಿಟ್ಟಿರುವ ಹಣ, ವಿಮೆ ಪ್ರೀಮಿಯಂಗಾಗಿ ಕೂಡಿಟ್ಟಿರುವ ಮೊತ್ತ, ತುರ್ತು ಅಗತ್ಯಗಳಿಗಾಗಿ ಮೀಸಲಿರಿಸಿದ ದುಡ್ಡನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಬೇಡಿ. ಇಲ್ಲಿ ಹೆಚ್ಚು ಲಾಭ ಪಡೆದುಕೊಳ್ಳುವ ಸಾಧ್ಯತೆ ಇರುವಂತೆಯೇ, ನಷ್ಟ ಅನುಭವಿಸುವ ಸಾಧ್ಯತೆಯೂ ಜಾಸ್ತಿ ಇರುತ್ತದೆ.

ಸಾಲ ಮಾಡಿ ಷೇರುಗಳಲ್ಲಿ ಹೂಡಿಕೆ: ವೈಯಕ್ತಿಕ ಸಾಲ (ಪರ್ಸನಲ್ ಲೋನ್) ನಿಮ್ಮ ಪಾಲಿನ ಆದಾಯ ಅಲ್ಲ. ಹಾಗಾಗಿ, ಸಾಲ ಮಾಡಿ ಹೂಡಿಕೆ ಸಲ್ಲದು. ಅನೇಕರು ವೈಯಕ್ತಿಕ ಸಾಲ ಪಡೆದು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಾರೆ. ಈ ತಪ್ಪನ್ನು ಮಾಡಲೇಬಾರದು. ಸಾಲ ಪಡೆದು ಹೂಡಿಕೆ ಮಾಡಿದ ಹಣ ನಷ್ಟವಾದರೆ ನೀವು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಹೆಚ್ಚು.

ಅರ್ಥ ಮಾಡಿಕೊಳ್ಳದೆ ಹೂಡಿಕೆ ಮಾಡುವುದು: ಜಗತ್ತಿನ ಶ್ರೇಷ್ಠ ಹೂಡಿಕೆದಾರ ವಾರನ್ ಬಫೆಟ್ ಮತ್ತು ಭಾರತದ ವಾರನ್ ಬಫೆಟ್ ಎಂದು ಕರೆಸಿಕೊಂಡಿರುವ ರಾಕೇಶ್ ಜುನ್‌ಜುನ್‌ವಾಲಾ ಯಾವುದೇ ಷೇರಿನಲ್ಲಿ ಹೂಡಿಕೆ ಮಾಡುವ ಮುನ್ನ ಸಾಕಷ್ಟು ಅಧ್ಯಯನ ಮಾಡುತ್ತಾರೆ. ಅವರ ಹಿಂದೆ ತಜ್ಞರ ಒಂದು ತಂಡವೇ ಇರುತ್ತದೆ. ಅಷ್ಟೆಲ್ಲಾ ಪರಿಣತಿ ಹೊಂದಿರುವವರೇ ಅಷ್ಟು ಲೆಕ್ಕಾಚಾರ ಮಾಡಿ ಹೂಡಿಕೆ ಮಾಡುತ್ತಾರೆ ಅಂದರೆ ನಾವು ಕೆಲವೇ ಸೆಕೆಂಡುಗಳಲ್ಲಿ, ಯಾರದ್ದೋ ಮಾತು ಕೇಳಿ ಯಾವುದಾದರೊಂದು ಷೇರಿನಲ್ಲಿ ಹೂಡಿಕೆ ಮಾಡುವುದು ಅಪಾಯಕಾರಿ ಅಲ್ಲವೇ?

ಅರ್ಥಹೀನ ಲೆಕ್ಕಾಚಾರ ಮಾಡುವುದು: ಅತ್ಯಂತ ಕಡಿಮೆ ಬೆಲೆಗೆ ಕಂಪನಿಯೊಂದರ ಷೇರು ಖರೀದಿಸುತ್ತೇನೆ ಮತ್ತು ಷೇರಿನ ಬೆಲೆ ಅತ್ಯಂತ ಗರಿಷ್ಠ ಮಟ್ಟಕ್ಕೆ ಏರಿಕೆಯಾದಾಗ ಮಾರಾಟ ಮಾಡುತ್ತೇನೆ ಎನ್ನುವ ಲೆಕ್ಕಾಚಾರದ ನಿರ್ಧಾರ ಮಾಡಲು ಯಾವ ಮಾರುಕಟ್ಟೆ ತಜ್ಞರಿಗೂ ಸಾಧ್ಯವಿಲ್ಲ. ಈ ಅರ್ಥವಿಲ್ಲದ ಲೆಕ್ಕಾಚಾರಕ್ಕೆ ಬಿದ್ದು ನೀವು ಷೇರು ಮಾರುಕಟ್ಟೆ ಹೂಡಿಕೆ ನಿರ್ಧಾರಗಳನ್ನು ಮಾಡಬೇಡಿ. ಆರ್ಥಿಕವಾಗಿ ಉತ್ತಮವಾಗಿರುವ ಮತ್ತು ಭವಿಷ್ಯದಲ್ಲಿ ಬೆಳವಣಿಗೆಯ ಸಾಧ್ಯತೆ ಇರುವ ಷೇರುಗಳಲ್ಲಿ ಹೂಡಿಕೆ ಮಾಡಿ.

ಐತಿಹಾಸಿಕ ಗಳಿಕೆ ಆಧಾರದಲ್ಲಿ ಭವಿಷ್ಯದ ಲಾಭದ ಲೆಕ್ಕಾಚಾರ: ಕಳೆದ 10 ವರ್ಷಗಳಲ್ಲಿ ಆ ಕಂಪನಿ ಇಷ್ಟು ಲಾಭಾಂಶ ಕೊಟ್ಟಿದೆ. ಮುಂದಿನ ಕೆಲವು ವರ್ಷಗಳಲ್ಲಿ ಇಷ್ಟು ಲಾಭ ಸಿಗಬಹುದು ಎಂಬ ಲೆಕ್ಕಾಚಾರ ಬೇಡ. ಈ ಹಿಂದೆ ಲಾಭ ಗಳಿಸಿರುವ ಕಂಪನಿ ಮುಂದೆ ಹೆಚ್ಚು ಲಾಭ ಗಳಿಸದೇ ಇರಬಹುದು. ಈವರೆಗೆ ಹೆಚ್ಚು ಲಾಭ ಕೊಡದ ಕಂಪನಿ ಮುಂದೆ ಉತ್ತಮ ಲಾಭಾಂಶ ನೀಡಬಹುದು. ಲಾಭದ ಲೆಕ್ಕಾಚಾರ ಕಂಪನಿಯ ಪ್ರಸ್ತುತ ಬೆಳವಣಿಗೆ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ.

ಸಂಪತ್ತು ಗಳಿಸುವಾಗ ತಾಳ್ಮೆ ಕಳೆದುಕೊಳ್ಳುವುದು: ನೀವೇ ಒಂದು ಉದ್ದಿಮೆಯನ್ನು ಇವತ್ತು ಆರಂಭ ಮಾಡಿದಿರಿ ಎಂದಾದರೆ ಅದು ಲಾಭ ಗಳಿಸಿ ಉತ್ತಮ ಸ್ಥಿತಿಗೆ ಬರಲು ಒಂದೆರಡು ವರ್ಷ ಬೇಕು. ಆದರೆ ಷೇರು ಖರೀದಿ ಮಾಡುವವರು ಮಾತ್ರ ಇವತ್ತು ಖರೀದಿ ಮಾಡಿದ ಷೇರು ನಾಳೆಯೇ ಹೆಚ್ಚು ಲಾಭ ಕೊಡಬೇಕು ಎಂದು ಬಯಸುತ್ತಾರೆ. ಸಂಪತ್ತು ಸೃಷ್ಟಿಗೆ ಸಮಯದ ಜೊತೆ ತಾಳ್ಮೆ ಬಹಳ ಮುಖ್ಯ.

ಅತಿಯಾದ ವಿಶ್ವಾಸ: ನಿಮ್ಮ ಹೂಡಿಕೆ ಹಣವನ್ನು ನಿಮ್ಮಷ್ಟು ಕಾಳಜಿಯಿಂದ ನಿರ್ವಹಿಸಲು ಯಾರಿಂದಲೂ ಸಾಧ್ಯವಿಲ್ಲ. ತಜ್ಞರಿಂದ ಸಲಹೆ ಸೂಚನೆಗಳನ್ನು ಪಡೆಯಿರಿ, ಆದರೆ ಅಂತಿಮವಾಗಿ ನೀವೇ ನಿರ್ಧಾರ ತೆಗೆದುಕೊಳ್ಳಿ. ನೆನಪಿರಲಿ ಶ್ರೀಮಂತರಾದವರೆಲ್ಲರೂ ಅವರ ಹಣಕಾಸಿನ ನಿರ್ಧಾರಗಳನ್ನು ಅವರೇ ತೆಗೆದುಕೊಂಡಿದ್ದಾರೆ. ಮತ್ತೊಬ್ಬರ ಮೇಲೆ ಆ ಜವಾಬ್ದಾರಿ ಹೊರಿಸಿ ಸುಮ್ಮನಾಗಿಲ್ಲ.

(ಲೇಖಕ ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ., ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಅನಿಶ್ಚಿತತೆಯ ನಡುವೆ ಜಿಗಿದ ಷೇರುಪೇಟೆ

ಸತತ ಎರಡು ವಾರಗಳ ಕುಸಿತದ ಬಳಿಕ ಷೇರುಪೇಟೆ ಸಕಾರಾತ್ಮಕತೆಯ ಲಯಕ್ಕೆ ಮರಳಿದೆ. ಜೂನ್ 25ಕ್ಕೆ ಕೊನೆಗೊಂಡ ವಾರದಲ್ಲಿ ಸೂಚ್ಯಂಕಗಳು ಅನಿಶ್ಚಿತತೆಯ ನಡುವೆಯೂ ಏರಿಕೆ ಕಂಡಿವೆ, ಸೆನ್ಸೆಕ್ಸ್ ಮತ್ತು ನಿಫ್ಟಿ ಜಿಗಿದಿವೆ. 52,925 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 1.10ರಷ್ಟು ಹೆಚ್ಚಳ ಕಂಡಿದೆ. 15,860 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.12ರಷ್ಟು ಏರಿಕೆಯಾಗಿದೆ. ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.4ರಷ್ಟು ಹೆಚ್ಚಳವಾಗಿದ್ದರೆ, ಸ್ಮಾಲ್ ಕ್ಯಾಪ್ ಶೇ 1.4ರಷ್ಟು ಏರಿದೆ. ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಜಿಗಿದಿದೆ.

ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 5ರಷ್ಟು ಹೆಚ್ಚಳ ದಾಖಲಿಸಿದೆ. ಲೋಹ ವಲಯ ಶೇ 3.4ರಷ್ಟು, ಮಾಹಿತಿ ತಂತ್ರಜ್ಞಾನ ಶೇ 2.7ರಷ್ಟು ಮತ್ತು ಆಟೊಮೊಬೈಲ್ ವಲಯ ಶೇ 2.5ರಷ್ಟು ಜಿಗಿದಿವೆ. ನಿಫ್ಟಿ ಮಾಧ್ಯಮ ವಲಯ ಶೇ 1ರಷ್ಟು ಇಳಿಕೆ ಕಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,685.9 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 4,729.17 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಮಾರುತಿ ಶೇ 10ರಷ್ಟು, ಟಾಟಾ ಸ್ಟೀಲ್ ಶೇ 7ರಷ್ಟು, ಇನ್ಫೊಸಿಸ್ ಶೇ 5ರಷ್ಟು, ಎಸ್‌ಬಿಐ ಶೇ 4ರಷ್ಟು ಜಿಗಿದಿವೆ. ರಿಲಯನ್ಸ್ ಶೇ 5.5ರಷ್ಟು, ಕೋಟಕ್ ಬ್ಯಾಂಕ್ ಶೇ 1.5ರಷ್ಟು ಮತ್ತು ಏಷ್ಯನ್ ಪೇಂಟ್ಸ್ ಶೇ 1.5ರಷ್ಟು ಕುಸಿದಿವೆ.

ಬ್ರಾಡರ್ ಮಾರ್ಕೆಟ್ ವಿಚಾರಕ್ಕೆ ಬಂದರೆ ಬಿಇಎಲ್ ಶೇ 20ರಷ್ಟು, ಜಿಎಂಆರ್ ಇನ್ಫ್ರಾ ಶೇ 12ರಷ್ಟು, ಎಕ್ಸ್ ಫೈನಾನ್ಶಿಯಲ್ ಸರ್ವೀಸಸ್ ಶೇ 11ರಷ್ಟು, ಎಬಿಎಫ್ ಆರ್ ಎಲ್ ಶೇ 10ರಷ್ಟು, ಇಂಡಿಯಾ ಹೋಟೆಲ್ಸ್ ಶೇ 10ರಷ್ಟು ಗಳಿಕೆ ಕಂಡಿವೆ. ಜುಬಿಲಿಯಂಟ್ ಶೇ 5ರಷ್ಟು, ಎಂಜಿಎಲ್ ಶೇ 5ರಷ್ಟು, ಐಜಿಎಲ್ ಶೇ 4ರಷ್ಟು, ಆರತಿ ಇಂಡಸ್ಟ್ರೀಸ್ ಶೇ 3ರಷ್ಟು ಕುಸಿದಿವೆ.

ಮುನ್ನೋಟ: ರೂಪಾಂತರ ಕಂಡಿರುವ ಕೊರೊನಾ ವೈರಾಣುವಿನ ಪ್ರಕರಣಗಳ ಹೆಚ್ಚಳ, ಲಸಿಕೆ ಕಾರ್ಯಕ್ರಮದಲ್ಲಿ ವೇಗದ ನಡುವೆಯೂ ಮಾರುಕಟ್ಟೆ ಸಕಾರಾತ್ಮಕವಾಗಿದೆ. ಆದರೆ ಇದು ಹೀಗೇ ಮುಂದುವರಿಯುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಏರಿಳಿತದ ಹಾದಿ ಇದ್ದೇ ಇರಲಿದೆ. ಸದ್ಯದ ಸ್ಥಿತಿಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು, ಲೋಹ ವಲಯ, ವಿದ್ಯುತ್ ವಲಯ ಮತ್ತು ಸಕ್ಕರೆ ವಲಯ ಉತ್ತಮ ಬೆಳವಣಿಗೆ ಸಾಧಿಸುವ ನಿರೀಕ್ಷೆಯಿದೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳನ್ನು ಖರೀದಿಸುವಾಗ ಕಂಪನಿಯ ಆರ್ಥಿಕ ಸ್ಥಿತಿಗತಿ ಮತ್ತು ಭವಿಷ್ಯದ ನೋಟ ಆಧರಿಸಿ ನಿರ್ಧರಿಸುವುದು ಸೂಕ್ತ.

ಈ ವಾರ ಬ್ಲೂಚಿಪ್, ಎರೋಸ್ ಮೀಡಿಯಾ, ಎಚ್‌ಎಎಲ್, ಹಿಲ್ಟನ್ ಐಎಫ್‌ಸಿಐ, ಓಂಕಾರ್, ರಜತ್, ಸುಪೀರಿಯರ್, ಸುಜಲಾ, ಸನ್ ಶೈನ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.


ಚಿನ್ನ ಆಮದು ₹ 51 ಸಾವಿರ ಕೋಟಿಗೆ ಹೆಚ್ಚಳ

ನವದೆಹಲಿ (ಪಿಟಿಐ): ಚಿನ್ನದ ಆಮದು ಮೌಲ್ಯವು ಈ ವರ್ಷದ ಏಪ್ರಿಲ್–ಮೇ ಅವಧಿಯಲ್ಲಿ ₹ 51,438.82 ಕೋಟಿಗೆ ಏರಿಕೆ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 599 ಕೋಟಿ ಮೌಲ್ಯದ ಚಿನ್ನ ಆಮದಾಗಿತ್ತು ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ಇದೇ ಅವಧಿಯಲ್ಲಿ ಬೆಳ್ಳಿ ಆಮದು ಶೇಕಡ 93.7ರಷ್ಟು ಇಳಿಕೆ ಆಗಿದ್ದು, ಮೌಲ್ಯದ ಲೆಕ್ಕದಲ್ಲಿ ₹ 203 ಕೋಟಿಗಿಳಿಸ್ಪಾಗಿದೆ.

ಚಿನ್ನದ ಆಮದು ಹೆಚ್ಚಾಗಿರುವುದರಿಂದ ಆಮದು ಮತ್ತು ರಫ್ತು ವಹಿವಾಟಿನ ನಡುವಣ ಅಂತರವಾದ ವ್ಯಾಪಾರ ಕೊರತೆಯು ₹ 73,334 ಕೋಟಿಯಿಂದ ₹ 1.58 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹520

ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹315-358
ದ್ವಿತಳಿ (ಬಿ.ವಿ)	₹335-495

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಏರ್‌ಬ್ಯಾಗ್ ಕಡ್ಡಾಯ: ಹೆಚ್ಚುವರಿ ಕಾಲಾವಕಾಶ

ನವದೆಹಲಿ (ಪಿಟಿಐ): ಈಗಾಗಲೇ ಮಾರುಕಟ್ಟೆಯಲ್ಲಿ ಇರುವ ಕಾರಿನ ಮಾದರಿಗಳ ಮುಂದಿನ ಎರಡೂ ಸೀಟುಗಳಿಗೆ ಕಡ್ಡಾಯವಾಗಿ ಏರ್‌ಬ್ಯಾಗ್ ಅಳವಡಿಸಬೇಕು ಎಂಬ ನಿಯಮವನ್ನು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ನಾಲ್ಕು ತಿಂಗಳ ಮಟ್ಟಿಗೆ ಮುಂದೂಡಿದೆ.

ಈಗಿರುವ ನಿಯಮಗಳ ಅನ್ವಯ, ಮಾರುಕಟ್ಟೆಯಲ್ಲಿ ಇರುವ ಕಾರುಗಳಲ್ಲಿ ಡ್ರೈವರ್ ಆಸನಕ್ಕೆ ಏರ್‌ಬ್ಯಾಗ್ ಅಳವಡಿಕೆ ಕಡ್ಡಾಯ. ಕೋವಿಡ್ ಸಾಂಕ್ರಾಮಿಕವನ್ನು ಗಮನದಲ್ಲಿ ಇರಿಸಿಕೊಂಡು, ಮುಂದಿನ ಇನ್ನೊಂದು ಆಸನಕ್ಕೂ ಏರ್‌ಬ್ಯಾಗ್ ಕಡ್ಡಾಯಗೊಳಿಸುವ ನಿಯಮದ ಜಾರಿಯನ್ನು ಡಿಸೆಂಬರ್ 31ರವರೆಗೆ ಮುಂದೂಡಲು ತೀರ್ಮಾನಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಭಾರತೀಯ ಆಟೊಮೊಬೈಲ್ ತಯಾರಕರ ಸಂಘವು (ಎಸ್‌ಐಎಎಂ) ಕಾಲಾವಕಾಶ ಕೇಳಿತ್ತು. ಹೊಸದಾಗಿ ಮಾರುಕಟ್ಟೆಗೆ ಬರುವ ಮಾದರಿಗಳಲ್ಲಿ ಎರಡೂ ಆಸನಗಳಿಗೆ ಏರ್‌ಬ್ಯಾಗ್ ಅಳವಡಿಕೆ ಈಗಾಗಲೇ ಕಡ್ಡಾಯ ಆಗಿದೆ' ಎಂದು ಅವರು ತಿಳಿಸಿದರು. ಹಾಲಿ ಇರುವ ಮಾದರಿಗಳಲ್ಲಿ ಮುಂದಿನ ಎರಡೂ ಆಸನಗಳಲ್ಲಿ ಏರ್‌ಬ್ಯಾಗ್ ಅಳವಡಿಕೆಯು ಆಗಸ್ಟ್ 31ರ ನಂತರ ಕಡ್ಡಾಯ ಎಂದು ಸಚಿವಾಲಯವು ಈ ಹಿಂದೆ ಹೇಳಿತ್ತು.

ಬಿಹಾರ: ₹ 100ರ ಗಡಿ ದಾಟಿದ ಪೆಟ್ರೋಲ್ ದರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಭಾನುವಾರ ತೈಲ ದರ ಹೆಚ್ಚಿಸಿವೆ. ಇದರಿಂದಾಗಿ ಬಿಹಾರದಲ್ಲಿಯೂ ಪೆಟ್ರೋಲ್ ದರ ಲೀಟರಿಗೆ ₹ 100ರ ಗಡಿ ದಾಟಿದೆ.

ಭಾನುವಾರ ಪೆಟ್ರೋಲ್ ದರ ಲೀಟರಿಗೆ ₹ 35 ಪೈಸೆ ಮತ್ತು ಡೀಸೆಲ್ ದರ ₹ 25 ಪೈಸೆ ಹೆಚ್ಚಾಗಿದೆ. ಪಟ್ನಾದಲ್ಲಿ ಪೆಟ್ರೋಲ್ ದರ ₹100.47 ಮತ್ತು ಡೀಸೆಲ್ ದರ ₹ 92.24ರಷ್ಟಾಗಿದೆ.

ಭಾರತ ತಂಡಕ್ಕೆ 'ಹ್ಯಾಟ್ರಿಕ್' ಚಿನ್ನ

ಆರ್ಚರಿ ವಿಶ್ವಕಪ್ ಸ್ಟೇಜ್ ತ್ರಿ ಟೂರ್ನಿ: ದೀಪಿಕಾ – ಅತನು ದಂಪತಿ ಮೇಲುಗೈ

ಪ್ಯಾರಿಸ್ (ಪಿಟಿಐ): ಭಾರತ ತಂಡವು ಭಾನುವಾರ ಆರ್ಚರಿ ವಿಶ್ವಕಪ್ ಸ್ಟೇಜ್ ತ್ರಿ ಟೂರ್ನಿಯಲ್ಲಿ 'ಚಿನ್ನದ ಬೆಳೆ' ತೆಗೆಯಿತು.

ನಿಖರ ಗುರಿ ಹಿಡಿದ ದೀಪಿಕಾ ಕುಮಾರಿ ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಹಿಳಾ ರಿಕರ್ವ್, ಮಿಶ್ರ ತಂಡ ವಿಭಾಗ ಹಾಗೂ ವೈಯಕ್ತಿಕ ರಿಕರ್ವ್ ವಿಭಾಗದಲ್ಲಿ ಅವರು ಭಾರತ ಅಗ್ರಸ್ಥಾನದಲ್ಲಿರುವಂತೆ ನೋಡಿಕೊಂಡರು.

ದೀಪಿಕಾ ಕುಮಾರಿ, ಅಂಕಿತಾ ಭಕತ್ ಹಾಗೂ ಕೋಮಲಿಕಾ ಬಾರಿ ಅವರನ್ನೊಳಗೊಂಡ ಬಿಲ್ಗಾರ್ತಿಯರ ಬಳಗ ಮಹಿಳಾ ರಿಕರ್ವ್ ತಂಡ ವಿಭಾಗದ ಫೈನಲ್‌ನಲ್ಲಿ ಮೆಕ್ಸಿಕೊ ತಂಡವನ್ನು ಪರಾಭವಗೊಳಿಸಿದರೆ, ಅತನು ದಾಸ್–ದೀಪಿಕಾ ದಂಪತಿಯು ಮಿಶ್ರ ತಂಡ ವಿಭಾಗದಲ್ಲಿ ಪಾರಮ್ಯ ಮೆರೆದರು.

ವೈಯಕ್ತಿಕ ವಿಭಾಗದ ಸ್ಪರ್ಧೆಯ ಫೈನಲ್‌ನಲ್ಲಿ 6–0 ಅಂತರದಿಂದ ದೀಪಿಕಾ ರಷ್ಯಾದ ಎಲೆನಾ ಒಸಿಪೊವಾ ಅವರನ್ನು ಮಣಿಸಿದರು. ಮಹಿಳಾ ತಂಡ 5–1ರಿಂದ ಮೆಕ್ಸಿಕೊದ ಐಡಾ ರೋಮನ್, ಅಲೆಜಾಂಡ್ರಾ ವೆಲೆನ್ಸಿಯಾ ಮತ್ತು ಆ್ಯನಾ ವಾಜ್‌ಕ್ವೆಜ್ ಅವರನ್ನು ಮಣಿಸಿತು. ಭಾರತ ಮಹಿಳಾ ರಿಕರ್ವ್ ತಂಡಕ್ಕೆ ಈ ವರ್ಷ ವಿಶ್ವಕಪ್ ಟೂರ್ನಿಯಲ್ಲಿ ಒಲಿದ ಸತತ ಎರಡನೇ ಚಿನ್ನದ ಪದಕ ಇದು.



ದೀಪಿಕಾ ಕುಮಾರಿ, ಅಂಕಿತಾ ಭಕತ್, ಕೋಮಲಿಕಾ ಅವರ ಸಂಭ್ರಮ –ಪಿಟಿಐ ಚಿತ್ರ

ಅತನು–ದೀಪಿಕಾ ಫೈನಲ್ ಹಣಾಹಣಿಯಲ್ಲಿ 0–2 ಹಿನ್ನಡೆಯಿಂದ ಚೇತರಿಸಿಕೊಂಡು, ನೆದರ್ಲೆಂಡ್ಸ್‌ನ ಜೆಫ್ ವ್ಯಾನ್ ಡೆನ್ ಬರ್ಗ್–ಗೇಬ್ರಿಯೇಲಾ ಶ್ಲೋಸರ್ ಅವರನ್ನು 5–3ರಿಂದ ಮಣಿಸಿದರು. ಇದೇ 30ಕ್ಕೆ ಈ 'ಆರ್ಚರಿ ದಂಪತಿ'ಗೆ ವಿವಾಹದ ಮೊದಲ ವಾರ್ಷಿಕೋತ್ಸವ ಸಂಭ್ರಮ.

ಅಭಿಷೇಕ್ ವರ್ಮಾ ವೈಯಕ್ತಿಕ ಕಾಂಪೌಂಡ್ ವಿಭಾಗದಲ್ಲಿ ಶನಿವಾರ ಚಿನ್ನದ ಪದಕ ಗೆದ್ದುಕೊಂಡಿದ್ದರು. ಫೈನಲ್ ಸುತ್ತಿನಲ್ಲಿ ಅವರು ಅಮೆರಿಕದ ಕ್ರಿಸ್ ಶಾಫ್ ಅವರನ್ನು ಮಣಿಸಿದ್ದರು.

ಫ್ರೀಸ್ಟೈಲ್: ಸಾಜನ್ ಪ್ರಕಾಶ್ ದಾಖಲೆ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ 'ಎ' ದರ್ಜೆಯ ಅರ್ಹತೆ ಗಳಿಸಿರುವ ಭಾರತದ ಸಾಜನ್ ಪ್ರಕಾಶ್ ಅವರು ರೋಮ್‌ನಲ್ಲಿ ನಡೆಯುತ್ತಿರುವ ಸೆಟ್ಟೆ ಕೊಲ್ಲಿ ಟ್ರೋಫಿ ಈಜು ಟೂರ್ನಿಯಲ್ಲಿ ಭಾನುವಾರ ಮತ್ತೊಂದು ದಾಖಲೆ ಬರೆದರು.



ಸಾಜನ್ ಪ್ರಕಾಶ್

200 ಮೀಟರ್ ಫ್ರೀಸ್ಟೈಲ್ ವಿಭಾಗದ ಸ್ಪರ್ಧೆಯ ಹೀಟ್ಸ್‌ನಲ್ಲಿ 1 ನಿಮಿಷ 49.73 ಸೆಕೆಂಡುಗಳಲ್ಲಿ ಗುರಿ ತಲುಪಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು. ವೀರ್‌ಧವಳ್ ಖಾಡೆ ದಾಖಲೆಯನ್ನು (1 ನಿ. 49.86 ಸೆ.) ಮೀರಿದರು.

ಈ ತಿಂಗಳಲ್ಲಿ ಸಾಜನ್ ಸ್ಥಾಪಿಸಿದ ಮೂರನೇ ರಾಷ್ಟ್ರೀಯ ದಾಖಲೆ ಇದು. ಶನಿವಾರ 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಒಲಿಂಪಿಕ್ಸ್ ಅರ್ಹತಾ ಅವಧಿಯನ್ನು ಮೀರುವ ಮೂಲಕ 'ಎ' ದರ್ಜೆ ಅರ್ಹತೆ ಗಳಿಸಿದ ಭಾರತದ ಮೊದಲ ಈಜುಪಟು ಎಂಬ ಹಿರಿಮೆ ತಮ್ಮದಾಗಿಸಿಕೊಂಡಿದ್ದರು.

ಶ್ರೀಹರಿಗೆ ಒಲಿಂಪಿಕ್ಸ್ 'ಎ' ಅರ್ಹತೆ?

ನವದೆಹಲಿ: ಭಾರತದ ಈಜುಪಟು ಶ್ರೀಹರಿ ನಟರಾಜ್ 'ಎ' ದರ್ಜೆಯ ಅರ್ಹತೆಯೊಂದಿಗೆ ಒಲಿಂಪಿಕ್ಸ್‌ಗೆ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ. ಸೆಟ್ಟಿ ಕೊಲ್ಲಿ ಟ್ರೋಫಿ ಟೂರ್ನಿಯ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಬೆಂಗಳೂರಿನ ಶ್ರೀಹರಿ 53.77 ಸೆಕೆಂಡುಗಳ ಸಾಧನೆ ಮಾಡಿದ್ದಾರೆ. ಇದನ್ನು ಫಿನಾ ಮಾನ್ಯ ಮಾಡಿದರೆ ಅವರು ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿಕೊಳ್ಳಲಿದ್ದಾರೆ.



ಶ್ರೀಹರಿ ನಟರಾಜ್

ಕೆಲವು ದಿನಗಳ ಹಿಂದೆ ನಡೆದಿದ್ದ ಮತ್ತೊಂದು ಸ್ಪರ್ಧೆಯ ಇದೇ ವಿಭಾಗದಲ್ಲಿ ಶ್ರೀಹರಿ 53.90 ಸೆಕೆಂಡುಗಳ ಸಾಧನೆ ಮಾಡಿದ್ದರು. ಸ್ವಲ್ಪದರಲ್ಲೇ 'ಎ' ದರ್ಜೆಯ ಅರ್ಹತೆ ಅವರ ಕೈತಪ್ಪಿತ್ತು. ಭಾನುವಾರ ಟೈಮ್ ಟ್ರಯಲ್‌ನಲ್ಲಿ ಅವರು ಸಾಧನೆ ಉತ್ತಮಪಡಿಸಿಕೊಂಡರು. ಈ ಮೂಲಕ ರಾಷ್ಟ್ರೀಯ ದಾಖಲೆಯನ್ನೂ ಬರೆದರು. ಒಲಿಂಪಿಕ್ಸ್ 'ಎ' ಅರ್ಹತೆಗೆ 53.85 ಸೆಕೆಂಡುಗಳನ್ನು ನಿಗದಿ ಮಾಡಲಾಗಿದೆ. ಆದ್ದರಿಂದ ಅವರಿಗೆ ಅರ್ಹತೆ ಸಿಗುವುದು ಖಚಿತ.

ವಿಂಬಲ್ಡನ್: ಜೊಕೊವಿಚ್‌ಗೆ 'ಗೋಲ್ಡನ್ ಗ್ರ್ಯಾನ್‌ಸ್ಲಾಂ' ಗುರಿ

ಲಂಡನ್ (ಎಎಫ್‌ಪಿ): ನೊವಾಕ್ ಜೊಕೊವಿಚ್ ಸೋಮವಾರ ಆರಂಭವಾಗಲಿರುವ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ದಾಖಲೆ ಸಮಗಟ್ಟುವ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಕನಸಿನೊಂದಿಗೆ ಕಣಕ್ಕೆ ಇಳಿಯಲಿದ್ದಾರೆ.

ಒಂದೇ ಋತುವಿನ ಎಲ್ಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆಲ್ಲುವತ್ತ ಚಿತ್ತ ನೆಟ್ಟಿರುವ ಜೊಕೊವಿಚ್ ಒಲಿಂಪಿಕ್ಸ್‌ನಲ್ಲೂ ಚಿನ್ನ ಗೆದ್ದರೆ 'ಗೋಲ್ಡನ್ ಗ್ರ್ಯಾನ್‌ಸ್ಲಾಂ' ಸಾಧನೆ ಆಗಲಿದೆ. ಅದಕ್ಕೆ ವಿಂಬಲ್ಡನ್ ಟೂರ್ನಿಯ ಪ್ರಶಸ್ತಿ ಗಳಿಸಬೇಕಾಗಿದೆ.

ಪುರುಷರ ವಿಭಾಗದಲ್ಲಿ ಈವರೆಗೆ ಯಾರಿಗೂ ಗೋಲ್ಡನ್ ಸ್ಲಾಂ ಗಳಿಸಲು ಸಾಧ್ಯವಾಗಿಲ್ಲ. ಮಹಿಳಾ ವಿಭಾಗದಲ್ಲಿ ಜರ್ಮನಿಯ ಸ್ಟೆಫಿ ಗ್ರಾಫ್ 1988ರಲ್ಲಿ ಎಲ್ಲ ನಾಲ್ಕು ಗ್ರ್ಯಾನ್‌ಸ್ಲಾಂ ಮತ್ತು ಒಲಿಂಪಿಕ್ ಚಿನ್ನದ ಪದಕ ಗಳಿಸಿದ್ದರು.

ಕಳೆದ ಬಾರಿಯ ವಿಂಬಲ್ಡನ್ ಚಾಂಪಿಯನ್ ಆಗಿರುವ ಜೊಕೊವಿಚ್ ಈ ವರ್ಷದ ಫೆಬ್ರುವರಿಯಲ್ಲಿ ದಾಖಲೆಯ ಒಂಬತ್ತನೇ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಗೆದ್ದಿದ್ದರು. ವಿಶ್ವ ಕ್ರಮಾಂಕದ ಒಂದನೇ ಸ್ಥಾನದಲ್ಲಿರುವ ಅವರು ಮೊದಲ ಪಂದ್ಯದಲ್ಲಿ ಬ್ರಿಟನ್‌ನ ಜ್ಯಾಕ್ ಡ್ರ್ಯಾಪರ್ ವಿರುದ್ಧ ಸೆಣಸಲಿದ್ದಾರೆ. ರಫೆಲ್ ನಡಾಲ್ ಈಗಾಗಲೇ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಎಂಟು ಬಾರಿಯ ಚಾಂಪಿಯನ್ ರೋಜರ್ ಫೆಡರರ್ ಮಂಗಳವಾರ ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ಅಡ್ರಿಯಾನ್ ಮನರಿನೊ ಎದುರು ಸೆಣಸಲಿದ್ದಾರೆ.



ನೊವಾಕ್ ಜೊಕೊವಿಚ್ –ಪಿಟಿಐ ಚಿತ್ರ

ಮಹಿಳೆಯರ ವಿಭಾಗದಲ್ಲಿ ಸೆರೆನಾ ವಿಲಿಯಮ್ಸ್, ಎಲಿನಾ ಸ್ವಿಟೋಲಿನಾ, ಕರೋಲಿನಾ ಪ್ಲಿಸ್ಕೋವ, ಏಂಜೆಲಿಕ್ ಕರ್ಬರ್, ಗಾರ್ಬೈನ್ ಮುಗುರುಜಾ, ಪೆಂಟಾ ಕ್ವಿಟೋವ ಮುಂತಾದವರು ಪ್ರಶಸ್ತಿಗಾಗಿ ಸೆಣಸುವರು.

ಪಂದ್ಯಗಳು ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಸೆಲೆಕ್ಟ್ 1,2

ಒಲಿಂಪಿಕ್ಸ್‌ನಿಂದ ಹಿಂದೆ ಸರಿದ ಸೆರೆನಾ

ವಿಂಬಲ್ಡನ್, ಇಂಗ್ಲೆಂಡ್ (ಎಪಿ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಅಮೆರಿಕದ ಸೆರೆನಾ ವಿಲಿಯಮ್ಸ್ ತಿಳಿಸಿದ್ದಾರೆ. ಇದಕ್ಕೆ ಕಾರಣವೇನು ಎಂದು ಅವರು ಹೇಳಲಿಲ್ಲ. ಆನ್‌ಲೈನ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸೆರೆನಾ 'ಒಲಿಂಪಿಕ್ಸ್‌ಗೆ ಹೋಗದೇ ಇರಲು ಹಲವು ಕಾರಣಗಳಿವೆ. ಅವುಗಳ ಬಗ್ಗೆ ಈಗ ಏನೂ ಹೇಳಲು ಬಯಸುವುದಿಲ್ಲ' ಎಂದರು.

ಇಂಗ್ಲೆಂಡ್ ಜಯಭೇರಿ

ಬ್ರಿಸ್ಟಲ್ (ಪಿಟಿಐ): ಭಾರತ ತಂಡದ ನಾಯಕಿ ಮಿಥಾಲಿ ರಾಜ್ (72; 108ಎಸೆತ, 7ಬೌಂಡರಿ) ಅರ್ಧಶತಕ ವ್ಯರ್ಥವಾಯಿತು. ಟಾಮಿ ಬೆಮೌಂಟ್ ಮತ್ತು ನತಾಲಿಯಾ ಶಿವರ್ ಅವರ ಅರ್ಧಶತಕಗಳ ಬಲದಿಂದ ಇಂಗ್ಲೆಂಡ್ ಮಹಿಳೆಯರ ತಂಡ ಭಾನುವಾರ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಎಂಟು ವಿಕೆಟ್‌ಗಳಿಂದ ಜಯಿಸಿತು.

ಕೌಂಟಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ 50 ಓವರ್‌ಗಳಲ್ಲಿ 8ಕ್ಕೆ 201 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಆತಿಥೇಯ ತಂಡ 34.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 202 ರನ್ ಗಳಿಸಿತು.

ಬೆಮೌಂಟ್ (ಔಟಾಗದೆ 87; 87ಎಸೆತ,12ಬೌಂಡರಿ 1ಸಿಕ್ಸರ್) ಮತ್ತು ನತಾಲಿಯಾ (74; 74ಎ, 10ಬೌಂ, 1ಸಿ) ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 119 ರನ್ ಸೇರಿಸಿದರು. ತಂಡವು ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಮಿಥಾಲಿ ಆಸರೆ: ಭಾರತ ತಂಡದ ಆರಂಭ ಚೆನ್ನಾಗಿರಲಿಲ್ಲ. ಆದರೆ ಮಿಥಾಲಿ ಆಸರೆಯಾದರು. ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಶಫಾಲಿ ವರ್ಮಾ ಅವರು ಸ್ಮೃತಿ ಮಂದಾನ ಅವರೊಂದಿಗೆ ಇನಿಂಗ್ಸ್ ಆರಂಭಿಸಿದರು.ಆತ್ಮವಿಶ್ವಾಸದಿಂದ ಬ್ಯಾಟ್ ಬೀಸಿದ ಶಫಾಲಿ ಐದನೇ ಓವರ್‌ನಲ್ಲಿ ಔಟಾದರು, ಸ್ಮೃತಿ ಲಯ ಕಂಡುಕೊಳ್ಳಲು ಪರದಾಡಿದರು. 10ನೇ ಓವರ್‌ನಲ್ಲಿ ಔಟಾದರು. ಈ ಹಂತದಲ್ಲಿ ಪೂನಮ್ ರಾವತ್ ಜೊತೆಗೂಡಿದ ಮಿಥಾಲಿ ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಮೂರನೇ ವಿಕೆಟ್‌ಗೆ ಇಬ್ಬರೂ 56 ರನ್ ಸೇರಿಸಿದರು ಹರ್ಮನ್‌ಪ್ರೀತ್ ಕೌರ್ ವೈಫಲ್ಯದ ಸರಣಿ ಮುಂದುವರಿಯಿತು. ಮಿಥಾಲಿಯೊಂದಿಗೆ ಸೇರಿದ ದೀಪ್ತಿ ಶರ್ಮಾ (30; 46ಎ) ಆರನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸಿದರು.

ಇಂಗ್ಲೆಂಡ್ ತಂಡದ ಕ್ಯಾಥರಿನ್ ಬ್ರಂಟ್ ಮತ್ತು ಅನ್ಯಾ ಶ್ರಬ್‌ಸೋಲ್ ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 201 (ಮಿಥಾಲಿ ರಾಜ್ 72, ಪೂನಂ ರಾವತ್ 32, ದೀಪ್ತಿ ಶರ್ಮಾ 30, ಶಫಾಲಿ ವರ್ಮಾ 15; ಸೋಫಿ ಎಕ್ಲೆಸ್ಟೋನ್ 40ಕ್ಕೆ 3, ಕ್ಯಾಥರೀನ್ ಬ್ರಂಟ್ 35ಕ್ಕೆ 2, ಅನ್ಯಾ ಶ್ರಬ್‌ಸೋಲ್ 33ಕ್ಕೆ 2, ಕೇಟ್ ಕ್ರಾಸ್ 23ಕ್ಕೆ 1). **ಇಂಗ್ಲೆಂಡ್:** 34.5 ಓವರ್‌ಗಳಲ್ಲಿ 2 ವಿಕೆಟ್‌ಗೆ 202 (ಟ್ಯಾಮಿ ಬೇಮೊಂಟ್ ಔಟಾಗದೆ 87, ನತಾಲಿ ಸೀವರ್ ಔಟಾಗದೆ 74, ಹೀದರ್ ನೈಟ್ 18; ಜೂಲನ್ ಗೋಸ್ವಾಮಿ 25ಕ್ಕೆ1, ಏಕ್ತಾ ಬಿಷ್ಟ್ 55ಕ್ಕೆ 1). **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಜಯ, **ಮುಂದಿನ ಪಂದ್ಯ:** ಬುಧವಾರ (ಜೂನ್ 30ರಂದು).

ಶೂಟಿಂಗ್: ಐಶ್ವರಿ ಪ್ರತಾಪ್‌ಗೆ 6ನೇ ಸ್ಥಾನ

ಒಸಿಜೆಕ್, ಕ್ರೊವೇಷ್ಯಾ (ಪಿಟಿಐ): ಭಾರತದ ಐಶ್ವರಿಪ್ರತಾಪ್ ಸಿಂಗ್ ತೋಮರ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ 50 ಮೀ. ರೈಫಲ್ ತ್ರಿ ಪೊಸಿಷನ್ಸ್ ವಿಭಾಗದಲ್ಲಿ ಆರನೇ ಸ್ಥಾನ ಗಳಿಸಿದರು. ಈ ವರ್ಷದ ಆರಂಭದಲ್ಲಿ ದೆಹಲಿಯಲ್ಲಿ ನಡೆದ ವಿಶ್ವಕಪ್‌ನಲ್ಲಿ ಇದೇ ವಿಭಾಗದಲ್ಲಿ ಅವರು ಚಿನ್ನದ ಪದಕ ಗೆದ್ದುಕೊಂಡಿದ್ದರು.

20 ವರ್ಷದ ತೋಮರ್ 1176 ಸ್ಕೋರ್ ದಾಖಲಿಸಿ ಏಳನೆಯವರಾಗಿ ಫೈನಲ್‌ಗೆ ಅರ್ಹತೆ ಗಳಿಸಿದ್ದರು. ಈ ವಿಭಾಗದ ಚಿನ್ನವು ಉಕ್ರೇನ್‌ನ ಸೆರ್ಹಿಯ ಕುಲಿಶ್ ಪಾಲಾಯಿತು. ರಷ್ಯಾದ ಸೆರ್ಜೆಯ್ ಕಮೆನ್‌ಸ್ಕಿಯ್ ಬೆಳ್ಳಿ ಮತ್ತು ಸ್ಲೋವಾಕಿಯಾದ ಪ್ಯಾಟ್ರಿಕ್ ಜಾನಿ ಕಂಚು ಗೆದ್ದರು.